ಕನ್ನಡ ಭಾಷೆ ಪಠ್ಯ

ಎರಡನೆ ವರ್ಷದ ಬಿಎಸ್ಸಿ ಫ್ಯಾಡ್.,
ಮೂರನೆ ಮತ್ತು ನಾಲ್ಕನೆ ಸೆಮಿಸ್ಟರ್

[ಎನ್‌ಇಪಿ ೨೦೨೨–೨೫]

# ಕನ್ನಡ ವೈವಿಧ್ಯ


ಪ್ರಧಾನ ಸಂಪಾದಕ

ಡಾ. ಬಿ. ಗಂಗಾಧರ

ಸಂಪಾದಕರು

ಡಾ. ರಮೇಶಚಂದ್ರ ದತ್ತ

ಡಾ. ಬಿ.ಕೆ. ಮಂಜುಳ

ಡಾ. ಪಿ. ಸಂಗೀತ

ಡಾ. ಜಿ. ಗಂಗರಾಜು



ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಟಮಕ, ಕೋಲಾರ – 563103

## ಬಿಎಸ್ಸಿ ಫ್ಯಾಡ್ ಕನ್ನಡ ವೈವಿಧ್ಯ–೨
## ಮೂರನೇ ಸೆಮಿಸ್ಟರ್ ಪರಿವಿಡಿ

**ಘಟಕ : ೧**

| | | |
|---|---|---|
| ೧) ಹಳಗನ್ನಡ ಕಾವ್ಯ | ಗುಂಡಯ್ಯನ ರಗಳೆ | –ಹರಿಹರ |
| ೨) ಕಥೆ | ಮಂದಾಕಿನಿಯ ಸೌಭಾಗ್ಯ | –ಬಾಗಲೋಡಿ ದೇವರಾಯ |
| ೩) ಪ್ರಬಂಧ | ಕುಲದೀಪ ನಯ್ಯರ್ | –ಜಿ.ಪಿ. ಬಸವರಾಜು |

**ಘಟಕ : ೨**

| | | |
|---|---|---|
| ೧) ನಡುಗನ್ನಡ ಕಾವ್ಯ | ವಚನಗಳು | –ಅಂಬಿಗರ ಚೌಡಯ್ಯ |
| ೨) ಕಥೆ | ನೆನಪು ಮರುಕಳಿಸಿದಾಗ | –ಗಿರಿಬಾಲೆ |
| ೩) ಪ್ರಬಂಧ | ಆಹಾರವೆಂಬ ಆಯುಧ | –ನಾಗೇಶ ಹೆಗಡೆ |

**ಘಟಕ : ೩**

| | | |
|---|---|---|
| ೧) ಹೊಸಗನ್ನಡ ಕಾವ್ಯ | ಮೊದಲಗಿತ್ತಿ | –ಅಂಬಿಕಾತನಯದತ್ತ |
| ೨) ಕಥೆ | ಪ್ರಾಯಶ್ಚಿತ್ತ | –ಗೊರೂರು ರಾಮಸ್ವಾಮಿ ಅಯ್ಯಂಗಾರ್ |
| ೩) ಪ್ರಬಂಧ/ಸಂಕೀರ್ಣ | ಬಾ ಇಲ್ಲಿ ಸಂಭವಿಸು | –ಆನಂದತೀರ್ಥ ಪ್ಯಾಟಿ |

**ಘಟಕ : ೪**

| | | |
|---|---|---|
| ೧) ಹೊಸಗನ್ನಡ ಕಾವ್ಯ | ಊರೆಗೋಲು | –ಡಾ. ಲೋಕೇಶ ಅಗಸನಕಟ್ಟೆ |
| ೨) ಕಥೆ | ಬಿಕರಿ ಮಾಲುಗಳು | –ಸಾರಾ ಅಬೂಬಕರ್ |
| ೩) ಪ್ರಬಂಧ/ಸಂಕೀರ್ಣ | ರಾಮರಾವಣರ ಯುದ್ಧ | –ಕುವೆಂಪು |

# ಘಟಕ : ೧

## ೧. ಗುಂಡಯ್ಯನ ರಗಳೆ

**–ಹರಿಹರ**

**ಆಶಯ:** ೧೨ನೆ ಶತಮಾನ ಕನ್ನಡ ಸಾಹಿತ್ಯದಲ್ಲಿ ಒಂದು ಸಾಮಾಜಿಕ, ರಾಜಕೀಯ, ಬೌದ್ಧಿಕ, ಆರ್ಥಿಕ ಬದಲಾವಣೆಯಲ್ಲಿ ಮೈಲಿಗಲ್ಲು ಎಂದರೆ ತಪ್ಪಾಗಲಾರದು. ವಚನ ಸಾಹಿತ್ಯದ ವಚನಕಾರರನ್ನು ಕುರಿತು ಅನಂತರ ಬಂದಂತ ಹರಿಹರ ಕವಿ ತನ್ನ ರಗಳೆ ಸಾಹಿತ್ಯ ದಲ್ಲಿ ಇವರನ್ನು ಭಕ್ತಿಯ ಪ್ರತಿರೂಪ ಎಂಬಂತೆ ಬಿಂಬಿಸಿದ್ದಾನೆ.

ಅಂಡಲೆವ ಮಶಾಯೆಯಂ ಬೆಂ
ಕೊಂಡನನಂತರ್ಮುಖೈಕ ಪೂಜೆಯನೊಲವಿಂ।
ಕಂಡನನಿಳಿಯಳ್ಕುಂಬರ
ಗುಂಡನನುರೆ ಮರೆದ ನಮ್ಮ ಹಂಪೆಯ ರಾಯಂ ॥

ಎಂತೆನಲುತ್ತರಭಾಗದೊಳಿರ್ಪುದು
ಸಂತತ ಬಲ್ಲುಕೆಪುರವೆನಿಸಿರ್ಪುದು
ಅಲ್ಲಿರ್ಪಂ ಶಶಿಮೌಳಿಯ ಶರಣಂ
ಸಲ್ಲಲಿತಂ ಮಾಯಾನಿರುಹರಣಂ
ಘಟಕಾಯಕವಾಯತವಾಗಿರ್ಪುದು
ನಿಟಿಲಾಕ್ಷನ ನಟನೆಗೆ ನಲಿವಪ್ಪುದು
ನಾಮಂ ಕುಂಬರ ಗುಂಡನೆನಿಪ್ಪುದು
ಸೋಮಧರನ ಕಿವಿಗಿನಿದಾಗಿರ್ಪುದು
ನೇಮಸ್ಥಂ ನೇಮಸ್ಥಂ ಶಿವಶಿವ
ಮಾಡುವ ಕಾಯಕವದನೇನೆಂಬೆಂ
ನೋಡುವಡೆನಗರಿದಿನ್ನೆಂತೆಂಬೆಂ

ಆದಾರವೆಯಾದಾರಮದಾಗಿರೆ
ವೇದೆಯ ಚಕ್ರದ ಮೊಳೆ ತಾನಾಗಿರೆ
ಮಿಗೆ ಷಟ್ಚಕ್ರಮೆ ಚಕ್ರಮದಾಗಿರೆ
ಸೊಗಯಿಪ ನಾಭಿಯೆ ನಾಭಿಯದಾಗಿರೆ
ಕನಸಿನ ಕಾಯಂ ಮೃತ್ತಿಕೆಯಾಗಿರೆ
ನೆನೆಹಂ ಚೆಟೆದಾರಂಗಳಮಾಗಿರೆ
ನಿಷ್ಠೆಯೆ ಪಿಡಿವುರುದಂಡಮದಾಗಿರೆ
ಮುಟ್ಟಿ ತಿರುಗುವುದು ಜೀವನಮಾಗಿರೆ
ಮಾಡುವ ಭಕ್ತಿ ಕಟಾಹಮದಾಗಲು
ಕೂಡಿದ ಕರಣದೆ ಮರ್ದಿಸುತಾಗಲು
ಮಿಗೆ ಶೋಷಣದತಪದಿಂದಾರಿಸಿ
ಬಗೆ ಮಿಗಲುದರಾಗ್ನಿಗಳಿಂ ತೀವುತೆ
ಶಿವಭಕ್ತರ್ಗಾನಂದದೊಳೀವುತೆ

ಇಂತೊಳಗಣ ಘಟಕಾಯಕವೊಪ್ಪಲು
ಸಂತತ ಹೊರಗಣ ಮಾತಮದೊಪ್ಪಲು
ಕುಂಬರನೆನಿಸಿರ್ಪಂ ಗುಂಡಯ್ಯಂ

ತ್ರ್ಯಂಬಕನಾಜ್ಞೆಯನೊಳಕೊಂಡಯ್ಯಂ

ಆಗಿರುತೊಂದೆವಸಂ ನಡೆತಂದಂ
ನಾಗಾಭರಣನಾಲಯಕೈತಂದಂ
ಶಿವನಿರ್ದಂ ಪೊಸ ಪೊಸ ಪೂಜೆಗಳಿಂ
ಭವನಿರ್ದಂ ಸಿಂಗರದೋಜೆಗಳಿಂ
ಶಿವಪೂಜೆಯನಚ್ಚರಿ ಮಿಗೆ ನೋಡುತೆ
ಭವಪೂಜೆಯನಕ್ಷಿಗಳಿಂ ಸವಿವುತೆ
ಪೂಜೆಗಳಕ್ಷಿಗಳೊಳ್ಬರೆದಂತಿರೆ
ಪೂಜೆಗಳಂತಂಸ್ಥಳದೊಳಗೆರಗಿರೆ
ನೋಡುತೆ ನೋಡುತೆ ನೋಡುತ್ತಿರ್ದಂ
ನೋಡಿದ ನೋಟದೊಳೆವೆ ಮರೆದಿರ್ದಂ
ಕಿರಿದುಂ ಪೊತ್ತಂತಿರುತಂ ಮೆಲ್ಲನೆ
ಕರೆಗೊರಲನ ಹತ್ತಿರೆ ಸಾರ್ದೊಯ್ಯನೆ
ಆಲಪೂರಿತ ಲೋಚನದಿಂ ನೋಡುತೆ
ಪುಳಕಿಸುತುಂ ಪರಿಸನಮಂ ಮಾಡುತೆ
ಪಾದೋದಕಮಂ ಪ್ರಿಯದಿಂ ಕೊಳುತಂ
ಅದರದಿಂ ಕರುಣಮನೊಳಕೊಳುತಂ
ಪೊಡಮಡುತೊಯ್ಯನೆ ಪೊಡಮಡುವಾಗಳು
ಮೃಡನಂಬೀಳ್ಕೊಂಡೆಯ್ತಪ್ಪಾಗಳು
ಮನದೊಳ್ಕಣ್ಣೊಳ್ ಪೂಜಾಭಾವಂ
ನೆನಹಿನಲೊಪ್ಪುವ ಶಂಕರ ಭಾವಂ
ಬಿಡದಿರೆ ತನ್ನಯ ಮನೆಗೆಯ್ತಂದಂ
ಕಡುನಿಷ್ಠೆಯ ಭರದಿಂದೈತಂದಂ
ಊಟಂ ನಿದರೆಗೆ ಮನವಿಲ್ಲಿಲಂ
ನೋಟಂ ನುಡಿಗೆಡೆಯಿಲ್ಲೆಡೆಯಿಲ್ಲಂ
ಶಿವಪೂಜೆಯ ಕರಡಿಗೆಯಂತಿರ್ದಂ
ಶಿವಪೂಜೆಯ ಗವಸಣಿಗೆಯೊಲಿರ್ದಂ

ಇರುತೊಂದೇ ಸೊಗಯಿಸುತಿರೆ ನೋಡುತೆ
ಚರತದೆ ಘಟಕಾಯಕಂ ಮಾಡುತೆ
ಪಿಡಿಗುಮಡಂ ತಳದೊಳಗಳವಡಿಸುತೆ
ಎಡಗೈಯಂ ಪೊಸಕೊಂಡನೊಳಗಿರಿಸುತೆ
ಕಲುವಲಗೆಯನಂತಳವಡೆ ಪಿಡಿವುತೆ
ಚೆಲುವೆನಿಸುವ ಪೊಸಘಟಮಂಮಾಡುತೆ
ಬಾರಿಸುವಿಚ್ಚೆಯ ತನುವಲ್ಲಾಡಲು
ಸೇರಿಸುತೊಳಗಣ ಲಿಂಗಮದಾಡಲು
ಹೆಚ್ಚಿದನುಬ್ಬಿದನುತ್ತಮ ಭಕ್ತಂ
ಮೆಚ್ಚಿದನಾಡಿಸುವದನಾ ಭಕ್ತಂ
ಅಂತಃಸ್ಥಲದೊಳ್ಕಂಡು ಗುಂಡಂ
ಸಂತೋಷವನೊಳಕೊಂಡು ಗುಂಡಂ
ಇರುಳೆಲ್ಲಂ ನಿಲ್ಲದೆ ಬಾರಿಸುತಿರೆ

ಕರಣದೊಳಗೆ ಹರನೊಲಿದಾಡುತ್ತಿರೆ
ಮತ್ತಂ ಮತ್ತಂ ಹಿಂಗದೆ ಪೋಗುತೆ
ಸುತ್ತುಂ ಸುಳಿವುತ್ತಿರ್ಬುತೆ ಕೊರ್ಬುತೆ
ಬಾರಿಪ ಕೈ ಮುಚ್ಚಿದ ಕಣ್ಣೊಪ್ಪಿರೆ
ತೀರದ ಪುಳಕಂ ಮೈಯ್ಯೊಳ್ತಿರೆ
ನೆನೆದಂದಂ ಮಡಕೆಗಳಗುತಿರೆ
ಮನದಂದದೆ ಶಿವನೊಳಗಾಡುತ್ತಿರೆ
ಒಳಗಣ ಶಿವನಾಟಕ್ಕೆಡೆಮಾಡುತೆ
ಬೆಳಗಪ್ಪನ್ನಗಂ ಬಾರಿಸಿ ನೋಡುತೆ
ಇದು ನೇಮಂ ಇದು ನೇಮವೆನುತ್ತಂ
ಮುದದಿಂದಾಡಿಸುತಿರ್ಪನೆನುತ್ತಂ
ಶಿವನಾಟದ ಸವಿಗಂಡಂ ಗುಂಡಂ
ಭವನಂ ನೆರೆ ಬೆಂಕೊಂಡಂ ಗುಂಡಂ
ಉದಯದ ನೇಮಕೆ ಮತ್ತೈತಂದಂ
ಸದಮಳ ಹೃತ್ಕಮಳಂ ನಡೆತಂದಂ
ಬಂದು ಶಿವಾಲಯದೊಳಗಂ ಪೋಗುತರೆ
ಇಂದುಧರಂ ಬೇರಂದದೊಳಿರುತಿರೆ
ಪರಮಂ ಮುನ್ನಿನ ಪೂಜೆಯದಲ್ಲದೆ
ಇರೆ ಹೊಸಪೂಜೆ ಮನಂಗೊಂಬಂದವೆ
ಆ ಪೂಜೆಯನೆಡೆಗೊಂಡಂ ಮನದೊಳು
ತಾಪತ್ರಯರಹಿತಂ ಸನ್ಮನದೊಳು
ನೇಮಂ ಮಾಡಿಂಯೆ ತಿರುಗಿದನಾಗೊಳು
ಸೋಮಧರನನೊಳಗಿರಿಸುತ್ತಾಗಳು

ಬಂದೆಂದಿನ ತೆರದಿಂ ಮಾಡುತ್ತಿರೆ
ಸಂದೊಪ್ಪುವ ಘಟಕಾಯದಿಂದಿರೆ
ನೇಮದ ಪೂಜೆಗಳೊಳಗಳವಡುತಿರೆ
ಕಾಮಹರಂ ನಲಿನಲಿದಾಡುತ್ತಿರೆ
ತಟಪಣ ತಂದಣ ದಿಂಧಿಮಿಕೆನಿಸುವ
ತಟಕಂ ದಟ ಧಿಕ್ಕಟ ತಟಕೆನಿಸುವ
ಹಲಗೆಯ ಶಬ್ದಂ ಕರಡೆಯ ಶಬ್ದಂ
ಹಲಗೆಯ ಶಬ್ದಂ ಮುರಜದ ಶಬ್ದಂ
ಮಡಕೆಯ ದನಿಯಾವುಜದ ಸುನಾದಂ
ಮಡಕೆಯ ದನಿ ಪೊಸಕಹಳೆಯ ನಾದಂ
ತಾಳಂ ಕೌಸಾಳದ ಹೊಸ ನಾದಂ
ಶೂಲಿಗೆ ಮೇಳವಣೆಯ ಮೃದುನಾದಂ
ತಾನಗಿರೆ ಮಧುರತೆಯಂ ಬೀರುತೆ
ನಾನಾವಿಧ ನವಗತಿಯಂ ತೋರುತೆ
ಹೊರಗಲ್ಲಾಡಲು ಶಿವನೊಳಗಾಡಲ
ತೆರಹಿಲ್ಲದ ಪುಳಕಂಗಳ್ಮೊಡಲು
ಬಂದರನರಿಯದೆ ಹೋದರನರಿಯದೆ
ನಿಂದರನರಿಯದೆ ನೆರೆದರನರಿಯದೆ

ಊಟವನರಿಯದೆ ನಿದ್ರೆಯನರಿಯದೆ
ತೂಗಾಡುತೆ ಮಡಕೆಗಳಂ ಬಾರಿಸಿ
ಜೋಗಂಬೋಗುತ್ತಂ ನೆರೆ ಬಾರಿಸಿ
ಅಡ್ಡಂ ತಿಗಟಂಬರಿವುತೆ ಬಾರಿಸಿ
ಕುಣಿವುತೆ ಕೂಗುತೆ ನಲವಿಂ ಬಾರಿಸಿ
ಮಣಿವುತೆ ತಣಿವುತೆ ಮುದದಿಂ ಬಾರಿಸಿ
ಒಳಗಣ ಶಿವನಂ ನೆರೆ ಸಾಗಿಸುತಂ
ಬೆಳಗುವ ಬೆಳಗಂ ನೆರೆ ಜೋಗಿಸುತಂ
ನೃತ್ಯದ ನೆಲೆಯೊಳ್ಮನವೆರಗುತ್ತಂ
ಸತ್ಯದ ಸುಖದೊಳ್ಮುಳುಗಾಡುತ್ತಂ
ಬಾರಿಸಿ ಬಾರಿಸಿ ನಿಲುತಂ ನಿಲುತಂ
ಸೇರಿದ ಸುಖದೊಳ್ಸಲುತಂ ಸಲುತಂ
ಪಲವುಂ ದಿವಸಂ ಸಲೆ ಬಾರಿಸುತಿರೆ
ಒಲವಿಂ ಸರ್ವೇಶನನಾಡಿಸುತಿರೆ
ನಂಬಿದ ಭಕ್ತನನರಿಯದುದೆಲ್ಲಂ
ಕುಂಬರನೆಂದಿಪ್ಪುದು ಜಗವೆಲ್ಲಂ
ಇರುತೊಂದೆವಸಂ ಘಟಕಾಯಕದೊಳು
ಪರನನಾಡಿಸುತಿರ್ಪವಸರದೊಳು
ತನ್ನಂ ಮರೆದೊಲವಿಂ ಬಾರಿಸುತಿರೆ
ಭಿನ್ನಂದೊರೆದಾ ಸುಖಿ ಬಾರಿಸುತಿರೆ
ಬಾರಿಪ ದನಗೀಶಂಹಾರೈಸುತೆ
ಕಾರುಣ್ಯಾಂಬುಧಿ ತನ್ಮಂ ಮರೆವುತೆ
ಕೈಳಾಸದೊಳೆಸೆವೊಡ್ಡೋಲಗದೊಳು
ಶೈಲಜೆ ಕೆಲದೊಳಗಿಪ್ಪವಸರದೊಳು
ಗುಂಡನ ಹೃದಯವಿದೆಂದೇ ಬಗೆವುತೆ
ತಂಡದ ಸುರರೋಲಗಂ ಮರೆವುತೆ
ಶಿವಪದದಂದುಗೆ ಘಲಘಲಕೆಂದೆನೆ
ನವ ಕಟಕಧ್ವನಿ ಝುಣಝುಣಕೆಂದೆನೆ
ಮರ್ತ್ಯದ ಧನಿ ಕೈಲಾಸದ ನೃತ್ಯಂ
ದೇವನ ಭಕ್ತನೊಳೆಡೆದೊರೆಹಿಲ್ಲದೆ
ತಾವರೆನಾಳದ ನೂಲಿರ್ಪಂದದೆ
ಮಸುಗುತ್ತಿರೆಯಿರೆ ಗಿರಿಸುತೆ ಕಾಣುತೆ
ಹೊಸಪರಿ ಕರುಣಿಪುದೆನುತುಂ ಕೇಳುತೆ

ಇರೆ ಭೋಂಕನೆ ಶಿವನೆಚ್ಚೆತ್ತಂದಂ
ಹರುಷಂ ಮಿಗೆ ಗಿರಿಜೆಗೆ ತಾನೆಂದಂ
ಗುಂಡನ ಹೃದಯದೊಳಾಡುತ್ತಿರ್ದೆಂ
ತಂಡದ ಸುಖದೊಳ್ಮೂಡುತ್ತಿದೆಂ
ಇರುತೆಂ ಸ್ಥಾನದ ಭೇದಮನರಿಯದೆ
ಸುರನರಲೋಕದ ವಿವರಣೆಯರಿಯದೆ
ಅಲ್ಲಿಯುಮಿಲ್ಲಿಯು ಮೂಡುತ್ತಿರ್ದೆಂ
ಸಲ್ಲೀಲೆಯೊಳೆನ್ನಂ ಮರೆದಿರ್ದೆಂ

ಎಂದು ಬೆಸಸೆ ಗಿರಿಸುತೆ ಬೆರಗಾದೆಳು
ಇಂದುಧರಂಗೊಲವಿಂ ತಾನೆಂದಳು
ನಿಮ್ಮುವನಾಡಿಪ ಭಕ್ತನದಾವಂ
ನಿಮ್ಮಂ ಮೆಚ್ಚಿಪ ಶರಣನದಾವಂ
ದೇವಾ ಎನಗಿದು ಕೌತುಕವೆಂದೆನೆ
ದೇವಾ ಮರ್ತ್ಯದೊಳಿಂತಿದು ಪೊಸತೆನೆ
ನಡೆ ತೋರಿದಪೆಂ ಭಕ್ತನ ನಿಲವಂ
ಎಡೆಗೊಂಡೆನ್ನಯ ನಾಟ್ಯದ ಫಲವಂ

ಎಂದಿರ್ವರುಮೊಂದಾಗಿ ಬರುತ್ತಂ
ಬಂದೀ ಮರ್ತ್ಯದೊಳವತರಿಸುತ್ತಂ
ಗಗನದೊಳಂಬಿಕೆಯಂ ಸ್ಯೆರಿಸುತಿರೆ
ಜಗದೀಶಂ ಸುಖಮಂ ಹಾರೈಸುತ
ಗುಂಡನ ನಿಳಯದ ಮುಂದಂ ನಿಂದಿರೆ
ಗುಂಡಯ್ಯಂ ಸುಖದಿಂ ಬಾರಿಸುತಿರೆ
ಒಳಗಣ ಸುಖದಿಂ ಹೊರಗಲ್ಲಾಡದೆ
ಪುಳಕಿಸುತುಂ ಬಾರಿಸುತುಂ ಮಾಣದೆ
ಕಂಡಭವಂ ಕಡುನಿಷ್ಠೆಗೆ ಮೆಚ್ಚುತೆ
ಗುಂಡಯ್ಯನನೆಚ್ಚರಿಸಲ್ಬಗೆವುತೆ
ಒಳಗಾಡುವಲಿಂಗವನಾಕರುಷಿಸಿ
ಒಳಗಣ ಲಿಂಗವ ಶಿವನೊಳ್ ಮೇಳಿಸಿ
ಲಿಂಗದೊಡನೆ ಕಣ್ದೆರೆದಂ ಗುಂಡಂ
ಹಿಂಗದೆ ಹೊರಗಣ ಶಿವನಂ ಕಂಡಂ
ಕೊಬ್ಬಿದನುಬ್ಬಿದನುಲಿದಾಳೆರ್ದಂ
ಸರ್ಬಸುಖಂಗಳ್ಸಲೆ ಬರುತಿರ್ದಂ
ಕುಣಿದಾಡುತೆ ಮಡಕೆಗಳಂ ಬಾರಿಸಿ
ಕುಣಿದಾಡುತೆ ಕುಡಿಕೆಗಳಂ ಬಾರಿಸಿ
ಶಿವನಂ ಸುತ್ತಿ ಬರುತ್ತಂ ಬಾರಿಸಿ
ಭವನಂ ಬಲವಂದೊಲವಿಂ ಬಾರಿಸಿ
ಕುಣಿವುತೆ ಕೊರಲೆತ್ತುತೆ ನೆರೆ ತೂಗುತೆ
ಮಣಿವುತೆ  ತೂಗಾಡುತೆ ಸುಖಿಯಾಗುತೆ
ಕೊಂಕುತೆ ಬಂಕುತೆ ಹಾರೈಸುತ್ತಂ
ಬಿಂಕಂಬೆತ್ತುಬುಬೆಂದಾಡುತ್ತಂ
ಆಡುವ ಗುಂಡಯ್ಯನ ಹೊಸ ನೃತ್ಯಂ
ನೋಡುವ ಶಿವನಂ ಮುಟ್ಟಿತು ಸತ್ಯಂ
ಸುಖದಾಟಂ ತನ್ನ ಬೆಂಬತ್ತಲು
ಸುಖಮುಖದಿಂದಂ ಮನಮಂ ಸುತ್ತಲು
ಒಳಗಾಡಿದೆನಿನಿತುಂ ದಿನವೆನುತುಂ
ಇಳೆಯರಿಯಲ್ಪೊರಗಾಡುವೆನೆನುತುಂ
ದಶಭುಜಮಂ ದಿಗುತಟದೊಳುಪಸರಿಸಿ
ಎಸೆವ ಕರಂಗಳನೆತ್ತಂ ನೆಮ್ಮಿಸಿ
ಒಂದು ಪದಂ ಪಾತಾಳವನೊತ್ತಲು

ಒಂದು ಪದಂ ಬ್ರಂಹಾಂಡವನೆತ್ತಲು
ಜೆಡೆಗಳ್ ಬೆಂಬಡಿವಿಡಿದಾಡುತ್ತಿರೆ
ಮುಡಿಯೊಳ್ ಸುರನದಿ ತುಳ್ಕಾಡುತ್ತಿರೆ
ತಡಿಯೊಳ್ ಶಶಿಕಳೆಯಲ್ಲಾಡುತ್ತಿರೆ
ಮಿಸುಗುವ ಢಮರುಗ ಢಂಢಂಡಣಲೆನೆ
ತಿಸುಳದ ಹರಿಯವತಾರಂ ತಿರ್ರನೆ
ತಿರುಗುತ್ತಿರೆಯಹಿಗಳು ಹೆಡೆಯೆತ್ತಲು
ಕರಿ ತೊವಲುಂ ನಭವಂ ಬೋಹರಿಸಲು
ಸರಸಿಜಭವನ ಶಿರಂ ಬೊಬ್ಬಿಡುತಿರೆ
ಸುರರಶಿರೋಮಾಲೆಗಳುಲಿವುತ್ತಿರೆ
ಪೊಂಗೆಜ್ಜೆಗಳ ರವಂ ಘಲ ಘಲಕೆನೆ
ತೊಂಗಲ ಘಂಟೆ ಢಣಂ ಢಂಢಣಲೆನೆ
ಆಡಿದನಾಡಿದನಾಹಾ ಶಂಕರ
ನಾಡಿದನಾ ಗಯಂಡನ ಮುಂದೀಶ್ವರ
ನಾಗಳ್ ಸುರಲೋಕದ ವಾದ್ಯಂ ಬರೆ
ಬೇಗದಿ ತುಂಬುರರುಗ್ಘಡಿಸುತ್ತಿರೆ
ಮೃಡನವನೊಲ್ಲದೆ ಬೇಡೆಂದೆನುತಿರೆ
ಮಡಕೆಯ ವಾದ್ಯಂ ಸಾಲ್ಗೆಂದೆನುತಿರೆ
ಶಿವನಂ ಕಂಡಾ ಭಕ್ತಂ ಕುಣಿಯಲು
ಶಿವಭಕ್ತನ ಕೂಡಭವಂ ಕುಣಿಯಲು
ಇರ್ವರನೀಕ್ಷಿಸಿ ಗಣತತಿ ಕುಣಿಯಲು
ಸರ್ವ ಸ್ಥಾವರ ಜಂಗಮವಾಡಲು
ಮಡಕೆಯ ಶಬ್ದಕ್ಕಾಡುತ್ತಿರ್ದ
ಮೃಡನಖಿಳಂ ಬೆರಸಾಡುತ್ತಿರ್ದಂ
ನಾನಾ ಮುಖದಾನಂದಂ ಪುಟ್ಟಲು
ನಾನಾ ರವವಂಬರಮಂ ಮುಟ್ಟಲು
ಗಿರಿಸುತೆ ಕಂಡತಿ ಚೋದ್ಯವೆನುತ್ತಂ
ನರಲೋಕಂ ಕೆಡಲಾಗದೆನುತ್ತಂ
ಮೀರಿದಡಂದೀಶನ ಪರಿಯೆನುತಂ
ಮೀರಿದ ಮುನ್ನಂ ಮಾಣಿಪೆನೆನುತಂ
ದೇವ ಸದಾಶಿವ ಶಾಂತಪ್ರಭುವೆ
ದೇವ ಸುಧಾಕರಧರ ಮನುವಿಭುವೆ

ದೇವ ಕೃಪಾಕರ ಶಂಕರ ಶಂಕರ
ದೇವನತಜ್ಜನ ವರದಾಭಯಕರ
ಕರುನಿಸನಂತ ವಿಭೂಷವಿಭೂಷಿತ
ಕರುಣಾಕರ ಸಜ್ಜನವರಪೋಷಿತ
ಕರುಣಿಸು ಶೂಲಧರ ಪ್ರತಿಶೂನ್ಯನೆ
ಕರುಣಿಸು ಶಿವಭಕ್ತಾಳಿಗನನ್ಯನೆ
ಭರ್ಗನೆ ಭೀಮನೆ ಭಾಳೇಕ್ಷಣನೆ
ದುರ್ಗತ್ರಯಕಾನನ ಹುತವಹನೆ
ಕರುಣಿಸೆನುತ್ತಂ ಗಿರಿಸುತೆ ಹೊಗಳಲು

ಕರುಣಾರವವಂಬಿಕೆಯೊಳ್ ನೆಗಳಲು
ಕೇಳುತೆ ಮೆಲ್ಲನೆ ನಾಟ್ಯವನುಡುಗುತೆ
ಶೈಲಜೆಯಿಚ್ಚೆಗೆ ಸಮತೆಗೆ ಸೇರುತೆ
ಆಡುವ ಗಣಕುಲಮಂ ಸೈತಿರಿಸುತೆ
ನೋಡುವ ಪಾರ್ವತಿಗಭಯವನೀವುತೆ
ಕುಣಿದಾಡುವ ಗುಂಡಯ್ಯನನೀಕ್ಷಿಸಿ
ತ್ರಿಣಯ ಸದಾನಂದದೊಳಾಲಿಂಗಿಸಿ
ಬಂದು ವಿಮೂರ್ಧ್ನಿಘ್ರಾಣಂ ಮಾಡುತೆ
ಇಂದುಧರಂಸಂತೋಷದೊಳಾಡುತೆ
ಭುಜಗಾಭರಣಂ ಕರುಣಂ ಮಾಡುತೆ
ಅಜಶಿರಕರ ಸಂತೋಷಂ ಮಾಡುತೆ
ಆಲಪೂರಿತ ಲೋಚನದಿಂ ನೋಡುತೆ
ನಳನಳಿಪಂಗದಿ ಬಿಗಿ ಬಿಗಿದಪ್ಪುತೆ
ಹೊಸ ಪುಷ್ಪಕದೊಳು ಹರುಷದೊಳೇರಿಸೆ
ಪಶುಪತಿ ದೇವಗಣಾಳಿಗೆ ತೋರಿಸೆ

ತರದಿಂ ಸೂಸುವ ಹೊಸ ಹೂಮಳೆಯೊಳ್
ನೆರೆದು ವಿರಾಜಿಪ ಮುರಜದ ದನಿಯೊಳ್
ನೆಗೆದಂ ಗಗನತಳಕ್ಕೆ ಮಹೇಶಂ
ಬಗೆಮಿಗೆ ನಡೆತಂದಂ ಗಿರಿಜೇಶಂ
ನಲವಿಂ ಕಲಧೌತಾದ್ರಿಯೊಳೊಪ್ಪುವ
ನಿಳಯದೊಳನುಪಮ ಕಾಂತಿಯೊಳೊಪ್ಪುವ
ಭದ್ರಾಸನಮಂ ಮೇಳೈಸುತ್ತಂ
ರುದ್ರಂ ಗುಂಡಯ್ಯನನೋವುತ್ತಂ
ಜಗವೆಲ್ಲವನೊಲಿದಾಡಿಸುವೆನ್ನಂ
ಸೊಗಯಿಪ ತನ್ನ ಸುನಾದಕ್ಕೆನ್ನಂ
ಮಡಕೆಯ ದನಿಗಾಡಿಸಿದವರುಂಟೆ
ಪೊಡವಿಯೊಳಿಂತಪ್ಪುನ್ನತರುಂಟೆ
ಎಂದನವರತಂ ಕೊಂಡಾಡುತ್ತಂ
ಇಂದುಧರಂ ನೆರೆ ಮುಂದಾಡುತ್ತಂ

ಗಣಪದಮಂ ಗುಂಡಯ್ಯಂಗೀವುತೆ
ಗಣಸಂಕುಳದೊಳು ಸುಖದಿಂದೋವುತೆ
ಹರನೊಪ್ಪಿದ ಪುರಹರನೊಪ್ಪಿರ್ದಂ
ಗಿರಿಜಾಪತಿಯೊಪ್ಪಿದನೊಪ್ಪಿರ್ದಂ
ಭಕ್ತರ ಭಾಗ್ಯದ ನಿಧಿಯೊಪ್ಪಿರ್ದಂ
ಭಕ್ತರ ಕಣ್ಣುಂ ಗತಿಯೊಪ್ಪಿರ್ದಂ
ಶರಣರ ಸಂಗದ ಸುಖಿಯೊಪ್ಪಿರ್ದಂ
ಹರಿಯುಜರರಿಯದ ಶಿವನೊಪ್ಪಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

ಖಂಡಶಶಿಮೌಳಿ ಕುಂಬರ

ಗುಂಡನ ಸುತನೆಂದು ಭಕ್ತಿಯುಂ ಕುಡುಗೆನಗು।
ದ್ದಂಡತರ ದಂಡಧರ ಹರ
ಮುಂಡಿತನಯನಂ ಪುರಾರಿ ಹಂಪೆಯ ರಾಯಂ॥

**ಕವಿ ಪರಿಚಯ:** ಹರಿಹರ (೧೨೦೦): ಕನ್ನಡದ ಅದ್ವಿತೀಯ ಕವಿಗಳ ಸಾಲಿನಲ್ಲಿ ನಿಲ್ಲುವ ಶ್ರೇಷ್ಟ ಕವಿಯಾಗಿದ್ದಾನೆ. ಈತನನ್ನು ರಗಳೆ ಕವಿ ಎಂಬ ಬಿರುದಿನಿಂದ ಕರೆಯುವರು. ಈತನ ಕೃತಿಗಳು: ಗಿರಿಜಾ ಕಲ್ಯಾಣ, ಪಂಪಾ ಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ಶಿವಶರಣರ ರಗಳೆಗಳು ಮೊದಲಾದವು.

**ಪ್ರಶ್ನೆಗಳು:**

೧. ಗುಂಡಯ್ಯ ಶಿವಾಲಯಕ್ಕೆ ಆಗಮಿಸಿದಾಗ ಆದ ಅನುಭವವನ್ನು ತಿಳಿಸಿ?
೨. ಗುಂಡಯ್ಯ ಮಡಿಕೆ ಮಾಡುತ್ತಿದ್ದ ಸಂದರ್ಭವನ್ನು ಕುರಿತು ಬರೆಯಿರಿ.
೩. ಗುಂಡಯ್ಯ ತನ್ನ ಕಾಯಕದ ಮೂಲಕ ಶಿವನನ್ನು ಹೇಗೆ ಕುಣಿಸುತ್ತಾನೆ?
೪. ಗುಂಡಯ್ಯನ ಭಕ್ತಿಯ ಸ್ವರೂಪವನ್ನು ವಿವರಿಸಿ.

# ೨. ಮಂದಾಕಿನಿಯ ಸೌಭಾಗ್ಯ

**–ಬಾಗಲೋಡಿ ದೇವರಾಯ**

**ಆಶಯ:** ನಿಸರ್ಗ ಮಾನವನಿಗೆ ಅಮೂಲ್ಯವಾದ ವರದಾನವಾಗಿದೆ. ಅದರ ಮೂಲಕ ಅನೇಕ ಪಾಠಗಳನ್ನು ನಾವು ಕಲಿಯಬೇಕಾಗಿದೆ. ಸಂಪತ್ತು ಬಂದಾಗ ಅಹಂಕಾರದಿಂದ ವರ್ತಿಸದೇ ಸಹಬಾಳ್ವೆ ಸಹಕಾರದಿಂದ ತಮ್ಮ ಜೀವನವನ್ನು ನಡೆಸಿಕೊಂಡು ಇನ್ನೊಬ್ಬರಿಗೆ ದಾರಿದೀಪವಾಗುವುದು ಇಂದು ಅನಿವಾರ್ಯವಾಗಿದೆ.

ಮಂದಾಕಿನ ಸರ್ವಾಂಗಸುಂದರಿಯೂ, ಹಸನ್ಮುಖಿಯೂ ಆಗಿದ್ದರೂ, ಅವಳಿಗೆ ಸೃಷ್ಟಿಕರ್ತನು ಬಹಳ ಜಿಪುಣತನದಿಂದ ಮೆದುಳನ್ನು ದಯಪಾಲಿಸಿದ್ದನೆಂದು ಕೆಲವರಿಗೆ ಕನಿಕರ, ಹಲವರಿಗೆ ಹಾಸ್ಯ ಅವಳ ಮಾತಾಪಿತರಿಗೆ ವ್ಯಸನ. ಶಾಲೆಯಲ್ಲಿ ಪ್ರತಿವರ್ಗದಲ್ಲೂ ಎರಡುಮೂರು ವರ್ಷ ವಿಳಂಬ. ಅವಳ ಸಹಾಧ್ಯಾಯಿಗಳು ಪ್ರೌಢಶಾಲೆಗೆ ಪ್ರವೇಶಮಾಡುತ್ತಿರಲು ಅವಳು ಮಾತ್ರ ಇನ್ನೂ ಪ್ರಾಥಮಿಕ ಶಾಲೆಯಲ್ಲೇ ಉಳಿದಿದ್ದಾಳೆ. ಆದರೆ ನೋಡಲಿಕ್ಕೇನೋ ಸುಹಾಸಿನಿ ಆದರೆ ಪಾಠದಲ್ಲಿ ಮಾತ್ರ ಉದಾಸೀನಿ.

ತಂದೆ ಧನಪತಿ ಪಂಡಿತರು ಅನೇಕ ಡಾಕ್ಟರ–ವೈದ್ಯ–ಹಕೀಮರ ಸಲಹೆ ಔಷಧೋಪಚಾರಗಳಿಗೆಂದು ಸಾಕಷ್ಟು ಹಣ ಖರ್ಚುಮಾಡಿದರು. ಮೂದಲಿಸುವ ವ್ಯಂಗ್ಯ–ಕುತರ್ಕಿಗಳು "ಈ ಹಣವನ್ನು ಪರೀಕ್ಷಕರಿಗೆ ಕೊಟ್ಟರೆ ಮಾತ್ರವೇ ಮಂದಾಕಿನಿಯ ವಿದ್ಯಾಭ್ಯಾಸ ಸಫಲವಾದೀತು" ಎಂದು ಬಾಯಿಚಪ್ಪರಿಸುವಂತೆ ಆಯಿತೇ ವಿನಾ ಬೇರೇನೂ ಲಾಭವಾಗಲಿಲ್ಲ.

ನೆರೆಮನೆಯ ಅಂಗಳದ ನಾಯಕರ ಮಗ ವಾಗೀಶ ಆಗ ದೂರದ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿದ್ದವನು ರಜೆಯ ಸಮಯಕ್ಕೆ ಊರಿಗೆ ಬಂದಿದ್ದ. ಅವನಿಗೆ ನೂತನ ವೈಜ್ಞಾನಿಕ ಪುಸ್ತಕಗಳು ಪತ್ರಿಕೆಗಳು ಎಂದರೆ ಚತುರ್ವೇದ ಷಟ್‌ಶಾಸ್ತ್ರಗಳೇ ಸಮ. ಬಹಳ ವಿಶ್ವಾಸ–ಅತಿ ವಿಶ್ವಾಸ. ಅಂಧವಿಶ್ವಾಸವೆಂದೇ ಕೆಲವರು ಹೇಳಿದ್ದೂ ಉಂಟು.

ವಾಗೀಶ ಹೇಳಿದ:– "ನೋಡಿ, ವಿಜ್ಞಾನಶಾಸ್ತ್ರದ ಪ್ರಕಾರ ಮೆದುಳಿನ ಬೆಳವಣಿಗೆಗೆ ರಂಜಕ (ಫೋಸ್ಫೋರಸ್) ಅತಿ ಅವಶ್ಯಕ. ಅದು ದಾರಾಳವಾಗಿ ಇರುವುದು ಮೀನಿನಲ್ಲಿ. ಆದರೆ ನೀವೋ ಪರಂಪರಾಗತವಾಗಿ ಮೀನು, ಮಾಂಸ ತಿನ್ನುವವರಲ್ಲ. ಬರಿಯ ಅನ್ನ–ಬೇಳೆ–ಹಾಲು–ಮೊಸರಿನಲ್ಲಿ ಎಷ್ಟು ರಂಜಕ ಸಿಗಬಹುದು? ಮೀನು ತಿನ್ನದೇ ಇದ್ದದರಿಂದ ಈ ಅವಸ್ಥೆಯಾಯಿತು. ನೋಡಿ ನಾವಾದರೋ ತಲತಲಾಂತರದಿಂದ ಪರಂಪರಾಗತವಾಗಿ ಮತ್ಸ್ಯ ಭಕ್ಷಕರಾಗಿದ್ದೇವೆ. ನನಗೆ ಶಾಲೆ, ವಿಶ್ವವಿದ್ಯಾಲಯಗಳಲ್ಲಿ ಪ್ರತಿವರ್ಷ ಪ್ರಥಮ ಸ್ಥಾನ. ಮತ್ತು ನನ್ನ ತಂಗಿಗೂ ತಮ್ಮನಿಗೂ ಹಾಗೆಯೇ ಸರಿ. ಎಷ್ಟೆಷ್ಟೋ ಪಾರಿತೋಷಕಗಳು ಸಿಕ್ಕಿವೆ. ನಮ್ಮ ತಂದೆಯವರನ್ನು ನೋಡಿರಿ. ಬರಿಯ ಪ್ರಾಥಮಿಕ ವಿದ್ಯಾಭ್ಯಾಸವೇ ಆದರೇನು? ವ್ಯಾಪಾರದಲ್ಲಿ ಎಷ್ಟು ನಿಪುಣರಾಗಿದ್ದಾರೆ? ಮೀನಿನಿಂದಲೇ ಮೇಧಸ್ಸು ಬೆಳೆಯುತ್ತೆ" ಎಂದು ಏನೇನೋ ತನ್ನ ತರ್ಕಸರಣಿಗಳನ್ನು ಪ್ರದರ್ಶಿಸಿದ.

ಸಾಂಪ್ರಾದಾಯಿಕರಾದ ಧನಪತಿ ಪಂಡಿತರಿಗೆ ಈ ತರ್ಕ ರುಚಿಸಲಿಲ್ಲ. ಆದರೆ ಮಂದಾಕಿನಿಯ ತಾಯಿಯ ಮೇಲೆ ಬಹಳ ಪ್ರಭಾವ ಬಿತ್ತು. ಯಾರಿಗೆ ಗೊತ್ತು, ಈ ನವವಿಜ್ಞಾನದ ವೈಚಿತ್ರ್ಯ? ಮೀನಿನೊಳಗಿನ ರಂಜಕದಲ್ಲಿ ಏನೆಲ್ಲ ಇಂದ್ರಜಾಲವಿರಬಹುದೋ? ತಮ್ಮ ಮುದ್ದಿನ ಅರಗಿಣಿ ಮಗಳು, "ದಡ್ಡಿ" "ಮಂದಬುದ್ಧಿಯ ಮಂದಾಕಿನಿ" ಎಂಬ ಅಪನಾಮ–ಅಪಮಾನ ಹೊರಬಾರದು ಎಂಬ ಹಠ ಹುಟ್ಟಿತು. ಮೀನು ತಿಂದರೇನು? ಕೋಟ್ಯಾವಧಿ ಜನರು ಮೀನು ತಿನ್ನುತ್ತಾರೆ. ಅವರೆಲ್ಲರೂ ಏನು ನರಕಕ್ಕೆ ಹೋಗುತ್ತಾರೆಯೇ? ಕೇವಲ ಅನ್ನ–ಕಾಯಿಹುಳಿ ಮೆದ್ದವರಿಗೆ ಮಾತ್ರವೇ ಸ್ವರ್ಗಾರೋಹಣವೇ? ಇದೆಂಥಾ ಮೂಢವಿಶ್ವಾಸ? ಎಷ್ಟೆಷ್ಟೋ ವಿಲಾಯಿತೀ ಔಷಧಗಳನ್ನು ತಿನ್ನಿಸಿಯಾಯಿತು. ಅವೆಲ್ಲ ಏನೇನೂ ಬಗೆಬಗೆಯ ಮಾಂಸಗಳೋ ಕ್ರಿಮಿಕೀಟಗಳ ಸತ್ವಗಳೋ ಇಲ್ಲವೇ? ನಮ್ಮ ಎಷ್ಟೆಷ್ಟೋ ಪ್ರತಿಷ್ಠಿತ ಮಿತ್ರರ ಪರಿವಾರಗಳಲ್ಲಿ ಪ್ರತಿದಿನ ಮೀನು ತಿನ್ನುವ ರೂಢಿಯಿದೆ. ನಾವು ಪ್ರಾಚೀನ ಸಂಪ್ರದಾಯದ ಬಂಧನದಲ್ಲಿ ಬಿದ್ದುದು ಸಾಕ. ನಮ್ಮ ಏಕಮಾತ್ರ ಪುತ್ರಿಯು ಮೀನು ತಿಂದು ಮೆದುಳು ಚಿಗುರಿ ಅವಳ ಭವಿಷ್ಯ ಬೆಳಗಬಹುದಾದರೆ ಬೆಳಗಳಿ. ಹೊಸ ವಿಜ್ಞಾನವನ್ನು ತಿರಸ್ಕರಿಸುವುದು ಸರಿಯೇ? ವಾಗೀಶನಿಗೆ ಶಾಲೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಕೈತುಂಬ ಪಾರಿತೋಷಕಗಳು ಸಿಕ್ಕಿಲ್ಲವೇ ...ಮತ್ತೇ... ನಮ್ಮ ಸಂಬಂಧಿಕರು ಮೂದಲಿಸಿಯಾರು... ಮಂದಾಕಿನಿ ಮೀನು ತಿನ್ನುವಳು ಎಂದು. ಅಂದರೇನು?

ಈಗಲೂ ಅವರ ಮೂದಲಿಕೆ ಕಡಿಮೆಯೇ ಈಗಲೂ "ಮೊದ್ದು ಮಂದಾಕಿನಿ–ಮಂದಮತಿ ಮಂದಾಕಿನಿ" ಸರ್ವಾಂಗ ಸುಂದರಿಗೆ ಟೊಳ್ಳು ಕಪಾಲ" ಎಂದು ಅವರೇ ಅಣಕಿಸುತ್ತಿಲ್ಲವೇ?

ಧನಪತಿಪಂಡಿತರು ಅನುನಿತ್ಯವೂ ಈ ತರ್ಕಧಾರೆಯನ್ನು ಕೇಳಿ ಕೇಳಿ ಸೋತರು. ಹೆಂಡತಿಯ ಅನಿರ್ಗಳ ವಾಕ್‌ಜಲಪಾತ ಅವರ ಸಂಪ್ರದಾಯ ಪರಾಯಣತೆಯ ಪಾಷಾಣವನ್ನು ವಿಚ್ಛೇದಿಸಿತು. ಕೊನೆಗೆ ಹಸಿ ಹಾಗಲಕಾಯಿ ತಿಂದವರಂತೆ ಮುಖ ಕಹಿಮಾಡಿಕೊಂಡು ತಲೆಬಾಗಿದರು. ಮನೆಯ ಹಿಂದಿನ ತೋಟದಲ್ಲಿ ಇನ್ನೊಂದು ಅಡುಗೆಮನೆಯು ಸ್ಥಾಪಿತವಾಯಿತು– ಮತ್ಸ್ಯಪಾಕಶಾಲೆ. ಒಬ್ಬ ಮತ್ಸ್ಯಪಾಕತಜ್ಞ ನಳನನ್ನು ಈ ವಿಶಿಷ್ಟ ಅಡುಗೆಯ ಕೆಲಸಕ್ಕೆಂದು ಇರಿಸಿದರು. ಏಕೆಂದರೆ ಅಮ್ಮನವರು ಅಷ್ಟೆಲ್ಲಾ ವೈಜ್ಞಾನಿಕ ತರ್ಕಧಾರೆಯನ್ನು ಸುರಿಸಿದ್ದರೂ ತಾನು ಸ್ವತಃ ಮೀನನ್ನು ಸ್ಪರ್ಶಮಾಡಲು ಸಿದ್ಧರಾಗಿರಲಿಲ್ಲ!

ಹೇಗೆ ಇರಲಿ. ಮಂದಾಕಿನಿಗೆ ಮಾತ್ರ ಮೀನಿ ರುಚಿ ಬಲವಾಗಿ ಹಿಡಿಯಿತು. ಬಾಯಿಚಪ್ಪರಿಸಿ ತಿನ್ನುವಂತಾಯಿತು. ಕಾಯಿ–ಹುಳಿಗಿಂತ ಮೀನೆ ಅಧಿಕ ರುಚಿಕರವೆಂದು ಅವಳ ಅಭಿಮತವಾಯಿತು.

ಆದರೆ, ಏನೋ ಆ ಮೀನುಗಳಲ್ಲಿ ರಂಜಕದ ನ್ಯೂನತೆ ಇದ್ದಂತೆ ತೋರುತ್ತದೆ. ವಾಗೀಶನ ತರ್ಕವು ವಾಸ್ತವತಃ ಸಿದ್ಧವಾಗಲಿಲ್ಲ. ಮೀನಿಲ್ಲಿ ರಂಜಕ ಎಷ್ಟೇ ಇದ್ದಿರಲಿ. ಆದರೆ ಮಂದಾಕಿನಿಯ ಅಧ್ಯಯನ ಮಾತ್ರ ರಂಜಿಸಲಿಲ್ಲ. ಅಗಣಿತ ಮೀನುಗಳ ಆಹುತಿಯಾದರೂ ಗಣಿತದಲ್ಲಿ ಶೂನ್ಯಾಂಕವೇ ದಕ್ಕಿತು. ಅಡುಗೆಯವನದೇನೂ ದೋಷವಿರಲಿಲ್ಲ. ಆತನೋ ಬಂಗಾಲಪ್ರಾಂತದವನು. ವಂಗೀಯರು ಮತ್ಸ್ಯಪಾಕ ಪ್ರವೀಣರು–ಪಾರಂಗತರು ಎಂದು ಲೋಕವಿದಿತ. ಅವನ ಹೆಸರು ಚಕ್ರವರ್ತಿ. ನೆರೆಕೆರೆಯವರು ನಳಚಕ್ರವರ್ತಿಯೆಂದೇ ಕರೆಯುತ್ತಿದ್ದರು. ಆದರೂ ಏನೂ ಫಲ? "ವಾಚಾಳಿ ವಾಗೀಶನ ತಪ್ಪು ತರ್ಕವನ್ನು ನಂಬಿ ಮಗಳಿಗೆ ಮೀನು ತಿನ್ನಿಸಿದ್ದೇ ಬಂತು" ಎಂದು ಸಂಬಂಧಿಕರು ಜಿಗುಪ್ಸೆ ಪ್ರಕಟಿಸಿದರು. ಮೂದಲಿಸುವ ಟೀಕಾಕಾರರು "ಮೀನನ್ನು ಪರೀಕ್ಷಕರಿಗೇ ತಿನ್ನಿಸಬೇಕು. ಹಾಗಿದ್ದರೆ ಫಲಪ್ರಧವಾದೀತು" ಎಂದು ಅಣಕಿಸಿದರು. ಇನ್ನು ಕೆಲವರು ತುಳುಭಾಷೆ ಬಲ್ಲ ರಸಿಕರು: "ಮಹಾಮಾಯೆ ಭೂತಾಯಿಯನ್ನೇ ನುಂಗಿಬಿಡುತ್ತಾಳಲ್ಲ" ಎಂದು ಮೂದಲಿಸಿದರು.

ಮಂದಾಕಿನಿಗೆ ವಿವಾಹಕ್ಕೆ ಯೋಗಪ್ರಾಯ ಬಂದಾಗ ವರಾನ್ವೇಷಣೆಯ ಸಂದರ್ಭದಲ್ಲಿ ಅವಳ ತಂದೆ–ತಾಯಿಗೆ ಕಷ್ಟವಾಯಿತು. ಅವರ ಜಾತಿಯ ಅಧಿಕಾಂಶ ಜನರು, ಮಂದಾಕಿನಿಯ ಸೌಂದರ್ಯವನ್ನು ಅವಳ ತಂದೆಯ ಐಶ್ವರ್ಯವನ್ನು ಕಂಡರೂ ತಿಳಿದರೂ ಅವಳ ಆಹಾರವನ್ನೇ ಚಿಂತಿಸಿ ಹಿಂಜರಿದರು. ಅಂದಿನ ಕಾಲದಲ್ಲಿ ಸಂಪ್ರದಾಯದ ಬಲ ಅಷ್ಟಿತ್ತು.

ಆದರೂ ಕೊನೆಗೆ ಉತ್ಕೃಷ್ಟ ವರನೇ ಸಿಕ್ಕಿದನೆನ್ನಿ. ಮೈಸೂರಿನ ಮಾಧವ ಸುಯೋಗ್ಯ ಸುಶೀಕ್ಷಿತ ಮತ್ತು ಮಹಾತ್ವಾಕಾಂಕ್ಷಿ. ಸುಂದರಿ ಮತ್ತು ಸಂಪತ್ತು ಶಾಲಿನಿಯಾದ ವಧುವನ್ನು ಸಂತೋಷದಿಂದ ಅಂಗೀಕರಿಸಿದ. ಅವನ ತಾಯಿಯೇ ಬಹಳ ದುರಾಗ್ರಹ ಮಾಡಿ ಅತ್ತೂ ಕರೆದು ವಿರೋಧಿಸಿದರು. ಆದರೆ ಮುಂದಾಲೋಚನೆಯುಳ್ಳ ಮಾಧವ ಬಗ್ಗಲಿಲ್ಲ.

ಮಾಧವನ ಭಾಗ್ಯ ನಿಜಕ್ಕೂ ಬೆಳಗಿತು. ಮಾವನ ಧನಸಂಪತ್ತು ಸಹಾಯಕವಾಯಿತು. ತನ್ನ ಪ್ರಾವೀಣ್ಯ, ಕೌಶಲ್ಯ ಮತ್ತು ಶ್ವಶುರವರ್ಯರ ಧನಭಲದಿಂದ ರಾಜನೈತಿಕ ಕ್ಷೇತ್ರದಲ್ಲಿ ಲೀಲಾಜಾಲವಾಗಿ ಅತಿ ಶೀಘ್ರದಲ್ಲೇ ಮೇಲಕ್ಕೆ ಏರಿದರು. ಅತಿ ಸಣ್ಣಪ್ರಾಯದಲ್ಲೇ ನವದೆಹಲಿಯಲ್ಲಿ ಕೇಂದ್ರೀಯ ಸರಕಾರದಲ್ಲಿ ಮಂತ್ರಿಪದವಿ ಗಳಿಸಿದ. ಮಂದಾಕಿನಿಯ ಹಸನ್ಮುಖ ಮತ್ತು ರುಚಿಕರ ಮತ್ಸ್ಯಸಮನ್ವಿತ ಭೋಜನದಿಂದ ಅವನ ಜೀವನವೂ ಸುಖಮಯಾವಾಯಿತು. ರಾಜಧಾನಿಯ ಪ್ರತಿಷ್ಠಿತರು, ಮಂತ್ರಿಮಹೋದಯರು, ರಾಜಕಾರಣ ಪ್ರಭೃತಿಗಳು ಈ ದಂಪತಿಗಳ ಮಿತ–ಹಿತೈಷಿಗಳಾದರೂ. ಮಾಧವನ ಸೌಭಾಗ್ಯಲತೆ ಶೀಘ್ರವಾಗಿ ಉನ್ನತಾಭಿಮುಖವಾಗಿ ಪಸರಿಸಿತು.

ಆದರೆ ವಿಧಿಚಿತ್ತವನ್ನು ಯಾರು ಬಲ್ಲರು? ಅಕಸ್ಮಾತ್ತಾಗಿ ವಜ್ರಘಾತವಾಯಿತು. ಉದ್ಯಾನವನದಲ್ಲಿ ನಳನಳಿಸುತ್ತಿದ್ದ ಸುಂದರ ವೃಕ್ಷಕ್ಕೆ ಸಿಡಿಲು ಬಡಿದಂತಾಯಿತು.

ಒಂದು ದಿನ ಮಾಧವ–ಮಂದಾಕಿನಿಯವರ ಸನ್ಮಾನದಲ್ಲಿ ಭವ್ಯವಾದ ರಾತ್ರಿಭೋಜನ ಸಮಾರೋಹ ಆಯೋಜಿತವಾಗಿತ್ತು. ಅಭಿನಂದಪರ ಭಾಷಣಗಳಾದವು ಮಾಲಾರ್ಪಣವಾಯಿತು. ಕರತಾಡನವಾಯಿತು.

ಭೋಜನಕಾಲದಲ್ಲಿ ಮೀನಿನ ಎಲುಬೊಂದು ಆತನ ಗಂಟಲೊಳಗೆ ಸಿಕ್ಕಿಕೊಂಡು ಶ್ವಾಸರೋಧನವಾಯಿತು. ಆಸ್ಪತ್ರೆಗೆ ತಲುಪುದರೊಳಗೇ ಗಗನಚುಂಬಿಯೋಪಾದಿ ಬೆಳೆಯುತ್ತಿದ್ದ ಆತನ ಭಾಗ್ಯತಲೆ ತುಂಡಾಗಿ ಕತ್ತರಿಸಿಬಿತ್ತು.

ಮಂದಾಕಿನಿಯ ಹೃದಯವಿದ್ರಾವಕ ಪರಿಸ್ಥಿತಿಯನ್ನು ಕಂಡು ಅನುಕಂಪಿಸಿದವರು ವಿರಳ. ಪಾಪ! ಅವಳ ತಂದೆಯೂ ದಿವಂಗತರಾಗಿದ್ದರು. ಪತಿಯ ನಿಧನ ಇಷ್ಟು ಸಣ್ಣಪ್ರಾಯದಲ್ಲೇ ಆಗಿದ್ದರಿಂದ ಧನಸಂಚಯವೂ ಆಗಿರಲಿಲ್ಲ. ರಾಜನೈತಿಕಕ್ಷೇತ್ರದಲ್ಲಿ ಬೇಗಬೇಗನೇ ಮುನ್ನಡೆಯಬೇಕೆಂಬ ಮಹತ್ವಾಕಾಂಕ್ಷೆಯಿಂದ ಆತ ತುಂಬ ಹಣ ಖರ್ಚುಮಾಡಿದ್ದ. ಮಂದಾಕಿನಿಯ ಆರ್ಥಿಕಸ್ಥಿತಿ ನಿಜಕ್ಕೂ ಬಹಳ ಕಠಿಣವಾಗಿತ್ತು.

ಈ ಸಂಕಟಕಾಲದಲ್ಲಿ ನವದೆಹಲಿಯ ಮಿತ್ರರು ಹಿತೈಷಿಗಳು ಮನಮುಟ್ಟಿ ಶತಪ್ರಯತ್ನದಿಂದ ಸಹಾಯಮಾಡಿದರು– ಅವಳಿಗೇನಾದರೂ ಉದ್ಯೋಗ ದೊರಕಿಸೋಣ ಎಂದು. ಆದರೆ ಆಕೆಯ ವಿದ್ಯಾಭ್ಯಾಸ ಬಹುಕಡಿಮೆಯಾಗಿದ್ದ ಕಾರಣ ಆ ಪ್ರಯತ್ನವಷ್ಟೂ ವಿಫಲವಾಯಿತು. ಸರಕಾರಿ ಉದ್ಯೋಗಕ್ಕೆ ವಿದ್ಯಾ–ಉಪಾಧಿ ಅವಶ್ಯಕವಷ್ಟೇ?

ಕೊನೆಗೆ ಒಂದು ಹಾದಿ ತೋರಿತು. ಹಿತೈಷಿಗಳ ಪ್ರಯತ್ನದಿಂದ, ಮಂತ್ರಿ ಮಹೋದಯರ ದಯಾದೃಷ್ಟಿಯಿಂದ ಆಕೆ ರಾಜ್ಯಸಭೆ ಮನೋನೀತ ಸದಸ್ಯೆಯಾದಳು.

ಆ ದಿನದಿಂದ ಮಂದಾಕಿನಿಯ ಅದೃಷ್ಟ ಬೆಳಗಿತು. ಭಾಗ್ಯಲತೆ ಪಸರಿಸಿತು. ಐದು ವರ್ಷಕಾಲ ರಾಜ್ಯಸಭೆಯ ಸದಸ್ಯೆಯಾಗಿದ್ದಳು. ತದನಂತರ ಒಂದು ಪ್ರಾಂತದ ರಾಜ್ಯಪಾಲಳಾದಳು. ಅಲ್ಲಿನ ಅವಧಿ ಸಮಾಪ್ತವಾದೊಡನೇ ಇನ್ನೊಂದು ಪ್ರಾಂತದ ರಾಜ್ಯಪಾಲಳಾದಳು. ಅನೇಕ ಸಂಸ್ಥೆಗಳ ಅಧ್ಯಕ್ಷೆಯಾದಳು. ಸುಪ್ರಸಿದ್ಧೆಯಾದಳು. ಅತಿ ಪ್ರತಿಷ್ಠಿತಳಾದಳು. ಗೌರವಾನ್ವಿತೆಯಾದಳು. ಬಿರುದಾಂಕಿತಳಾದಳು. ಅನೇಕ ಬಾರಿ ವಿದೇಶ ಯಾತ್ರೆಯನ್ನು ಮಾಡಿದಳು. ಪದ್ಮವಿಭೂಷಿತೆಯಾದಳು.

ಊರಿಗೆ ಸಂದರ್ಶನಕ್ಕಾಗಿ ಬಂದಾಗ ಮಂದಾಕಿನಿ ಸನ್ಮಾನದಲ್ಲಿ ಭವ್ಯ ಗೌರವ ಸಮಾರೋಹವಾಯಿತು. ನಮ್ಮ ಊರಿಗೆ, ನಮ್ಮ ಜಿಲ್ಲೆಗೆ, ನಮ್ಮ ಪ್ರಾಂತ್ಯಕ್ಕೇ ಕೀರ್ತಿಯನ್ನು ತಂದವರು ಮಂದಾಕಿನೀ ಅಮ್ಮನವರು ಎಂದು ವಿಧವಿಧವಾಗಿ ಪರಿಪರಿಯಾಗಿ ಶ್ಲಾಘಿಸಿ ಪ್ರಶಂಸಿಸಿ ವ್ಯಾಖ್ಯಾನಕಾರರು ಭಾಷಣ ಮಾಡಿದರು. ಆಕೆಯ ಅಮೋಘ ಪ್ರತಿಭೆ, ಮೇಧಾಶಕ್ತಿ, ನೈಪುಣ್ಯ, ಜ್ಞಾನಪಾಂಡಿತ್ಯ, ವಿವೇಕ, ವಿದ್ವತ್ತು, ಕಾರ್ಯಕುಶಲತೆಗಳನ್ನು ಸ್ತುತಿಸಿ ಗುಣಗಾನ ಮಾಡಿದರು.

ಊರಿನ ಕೆಲವು ಒರಟ ಕುತರ್ಕಿ ಟೀಕಾಕಾರರು ಮಾತ್ರ "ಮಂದಾಕಿನಿಯ ಮೆದುಳು ಚಿಗುರಿದ್ದು ಮೀನಿನಿಂದಲ್ಲ, ಮೀನಿನ ಎಲುಬಿನಿಂದ" ಎಂದು ಹಲ್ಲು ಕಿರಿದರು.

ಇನ್ನು ಕೆಲವು ಕಟುವಚನದ ಅಸಭ್ಯರು "ಮಂದಾಕಿನಿಗೆ ಏನೇ ಆಗಲಿ, ಮಾಧವ ಮಾತ್ರ ಮೀನು ತಿಂದು ಸತ್ತ" ಎಂದು ಅಣಕಿಸಿದರು.

ಮಾಧವನ ತಾಯಿ ಮಂದಾಕಿನಿಯ ಅತ್ತೆ "ಮೀನು ತಿನ್ನಿಸಿ ನನ್ನ ಮಗನನ್ನು ನುಂಗಿದಳು" ಎಂದು ಶಪಿಸಿ ಕೈಬಿಡಿದರು.

**ಕತೆಗಾರರ ಪರಿಚಯ:** ಬಾಗಲೋಡಿ ದೇವರಾಯ (೧೯೨೭–೧೯೮೫) ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಕಂಬ್ಳದಲ್ಲಿ ಜನನ. ಆರಾಧನಾ, ರುದ್ರಪ್ಪನ ರೌದ್ರ, ಹುಚ್ಚು ಮುನಸೀಫ ಮತ್ತು ಇತರ ಕತೆಗಳು ಇವರ ಕೃತಿಗಳು.

**ಪ್ರಶ್ನೆಗಳು:**

೧. ಮಂದಾಕಿನಿ ಕ್ರಿಯಾಶೀಲಳಾಗಲು ವಾಗೀಶ ನೀಡಿದ ಸಲಹೆಗಳೇನು?
೨. ಮಂದಾಕಿನಿಗೆ ವಜ್ರಘಾತವಾದ ಸಂದರ್ಭ ವಿವರಿಸಿ.
೩. ಸಂಪ್ರದಾಯ ಬದ್ಧ ಕಾಲದಲ್ಲಿಯೇ ಮಂದಾಕಿನಿಯನ್ನು ಮಾಧವ ವಿವಾಹ ಆಗಲು ಕಾರಣಗಳೇನು?
೪. ಮಂದಾಕಿನಿಯ ಅದೃಷ್ಟ ಒಲಿದು ಬಂದ ಬಗೆ ನಿರೂಪಿಸಿ.

# ೩. ಕುಲದೀಪ ನಯ್ಯರ್

**–ಜಿ.ಪಿ. ಬಸವರಾಜು**

**ಆಶಯ:** ಪತ್ರಿಕೋದ್ಯಮ ವಿಶಿಷ್ಟ ಕ್ಷೇತ್ರ. ಅಲ್ಲಿ ಕುತೂಹಲ, ಸಂಶೋಧನೆ, ಅನುಮಾನ ಎಲ್ಲಕ್ಕೂ ಅವಕಾಶ ಇದೆ. ಪ್ರಜಾಪ್ರಭುತ್ವದ ಐದನೆ ಅಂಗ ಎಂಬ ಮಹತ್ವ ಈ ಕ್ಷೇತ್ರಕ್ಕಿದೆ. ಕ್ನನಡದಲ್ಲಿ ಲಂಕೇಶ್ ಅಂತ ಪತ್ರಿಕೋದ್ಯಮಿ ಆಗಿದ್ದರು.

ವರ್ತಮಾನದ ಬೆಳಕಿನ ಪ್ರಖರತೆ ಎಷ್ಟು ಎಂಬುದನ್ನು ಸರಿಯಾಗಿ ತಿಳಿಯಬೇಕಾದರೆ ಇತಿಹಾಸದ ಮಬ್ಬುಗತ್ತಲೆಗೆ ಹೋಗಬೇಕಾಗುತ್ತದೆ. ಹಾಗೆ ಹೋದಾಗ ವರ್ತಮಾನದ ಪ್ರಖರತೆಯೇ ಮಂಕಾಗಿ, ಇತಿಹಾಸದ ಮಬ್ಬು ಮಬ್ಬಾದ ಬೆಳಕೇ ಕಣ್ಣುಕುಕ್ಕುವ ಸಾಧ್ಯತೆಯೂ ಇರುತ್ತದೆ. ಈ ಕಾರಣಕ್ಕಾಗಿಯೇ ವರ್ತಮಾನಕ್ಕೆ ಚರಿತ್ರೆ ಮುಖ್ಯವಾಗುತ್ತದೆ. ಚರಿತ್ರೆಯ ಪುಟಗಳನ್ನು ತಿರುಗಿಸುವುದರಿಂದ ವರ್ತಮಾನದ ಸ್ಥಿತಿಗತಿಗಳ ಚಿತ್ರಣ ನಿಚ್ಚಳವಾಗಿ ಕಾಣಿಸುತ್ತದೆ.

ಹಾಗೆ ಚರಿತ್ರೆಯ ಪುಟಗಳನ್ನು ತಿರುಗಿಸುವ ಅವಕಾಶ ಕಳೆದ ವರ್ಷ ಅಚಾನಕವಾಗಿ ದೊರಕಿತು. ೯೫ ವರ್ಷಗಳ ಪೂರ್ಣ ಜೀವನವನ್ನು ಅರ್ಥವತ್ತಾಗಿ ಅನುಭವಿಸಿದ, ಬಾಳಿಗೊಂದು ನಂಬಿಕೆಯನ್ನು ಖಚಿತಗೊಳಿಸಿದ ಖ್ಯಾತ ಪತ್ರಕರ್ತ ಕುಲದೀಪ ನಯ್ಯರ್ ಅವರು ೨೦೧೮ ಆಗಸ್ಟ್ ೨೩ರಂದು ಬದುಕಿಗೆ ವಿದಾಯ ಹೇಳಿದಾಗ ಚರಿತ್ರೆಯ ಪುಟಗಳನ್ನು ತಿರುಗಿಸುವುದು ಅನಿವಾರ್ಯವಾಗಿತ್ತು. ಪತ್ರಿಕೋದ್ಯಮಿಗಳು, ಮಾನವ ಹಕ್ಕುಗಳ ಹೋರಾಟಗಾರರು, ಶಾಂತಿ ಪ್ರತಿಪಾದಕರು, ಜನತಂತ್ರ ಪ್ರೇಮಿಗಳು, ಮುಕ್ತ ಮತ್ತು ನಿರ್ಭೀತ ನುಡಿಯ ಮಹತ್ವವನ್ನು ಬಲ್ಲವರು, ದೇಶದೇಶಗಳ ಗಡಿಗಳನ್ನು ಮೀರಿ ಮನುಷ್ಯನನ್ನು ಮುಟ್ಟಲು ಬಯಸುವ ಮಾನವತಾ ಪ್ರೇಮಿಗಳು ಹೀಗೆ ಹಲವು ಕ್ಷೇತ್ರಗಳ ಜನ ಚರಿತ್ರೆಯ ಮೇಲೆ ಕಣ್ಣಾಡಿಸಿದರು.

ಕುಲದೀಪ ನಯ್ಯರ್ ಅವರ ಚರಿತ್ರೆಯೆಂದರೆ ಅದು ಕೇವಲ ವ್ಯಕ್ತಿಯೊಬ್ಬನ ಚರಿತ್ರೆಯಲ್ಲ, ಅದು ಸ್ವಾತಂತ್ರೋತ್ತರ ಭಾರತದ ಚರಿತ್ರೆ, ನಮ್ಮ ಜನತಂತ್ರ ಸಾಗಿದ ದಾರಿಯ ಚರಿತ್ರೆ; ಅಲ್ಲಿನ ಏಳುಬೀಳುಗಳ ಚರಿತ್ರೆ. ಭಾರತ – ಪಾಕ್ ಇಬ್ಭಾಗವಾದ ಚರಿತ್ರೆ; ರಕ್ತ ಕೋಡಿ ಹರಿದ ಎಂದೂ ಮರೆಯಲಾಗದ ನೋವಿನ ಚರಿತ್ರೆ, ಹಾಗೆಯೇ ಸ್ವತಂತ್ರ ಭಾರತ ಎದುರಿಸಿದ ಯುದ್ಧಗಳ ಚರಿತ್ರೆ; ಬಾಂಗ್ಲಾ ಉದಯಿಸಿದ ಚರಿತ್ರೆ, ಇಷ್ಟೇ ಅಲ್ಲ, ಇನ್ನೂ ಹಲವು ಚರಿತ್ರೆಗಳನ್ನು ತಬ್ಬಿಕೊಂಡ, ಒಂದು ದೇಶದ ಹಲವು ಸುಳಿಗಳ, ಒಳ ಸುಳಿಗಳ, ತಿರುವುಗಳ ಚರಿತ್ರೆ.

ಆಗಿನ್ನೂ ಪಾಕಿಸ್ತಾನವಾಗದ ಲಾಹೋರ್‌ನಲ್ಲಿ ಬಿ.ಎ. (ಆನರ್ಸ್), ಎಲ್‌ಎಲ್‌ಬಿ ಮುಗಿಸಿದ್ದ ತರುಣ ಕುಲದೀಪ ನಯ್ಯರ್ (ಜನನ : ೧೪ ಆಗಸ್ಟ್ ೧೯೨೩, ಸಿಯಾಲ್‌ಕೋಟ್‌ನಲ್ಲಿ) ಅಲ್ಲಿಯೇ ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕಾಗಿತ್ತು. ತಮ್ಮ ತಂದೆ ತಾಯಿ, ಸೋದರ ಸೋದರಿಯರು ಹೀಗೆ ಕುಟುಂಬದ ಎಲ್ಲರೊಡನೆ ಸುಖ ಸಂತೋಷದಲ್ಲಿ ಕಳೆಯಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ದೇಶ ಒಡೆದದ್ದೇ ಕುಲದೀಪ ಕುಟುಂಬ ನುಚ್ಚು ನೂರಾಗುವ ಸನ್ನಿವೇಶ ಎದುರಾಯಿತು. ಕುಟುಂಬವೇ ಆಸ್ತಿಪಾಸ್ತಿ, ಮನೆ ಮಠ ಎಲ್ಲವನ್ನೂ ಬಿಟ್ಟುಕೊಟ್ಟು ಭಾರತಕ್ಕೆ ತಲೆಮರೆಸಿಕೊಂಡು ಓಡಿಬರಬೇಕಾಯಿತು. ಮತೀಯ ಗಲಭೆಗಳು, ಹುಚ್ಚೆದ್ದ ಗುಂಪುಗಳ ನಡುವೆ ನುಸುಳಿ, ಗಡಿಯನ್ನು ದಾಟಿ, ಪ್ರಾಣ ಉಳಿಸಿಕೊಳ್ಳುವುದೇ ಬಹುದೊಡ್ಡ ಸಾಹಸವಾಗಿದ್ದ ಆ ದಿನಗಳಲ್ಲಿ ಕುಲದೀಪ್ ಜೀವವನ್ನು ಕೈಲಿಹಿಡಿದು ದೆಹಲಿಗೆ ಓಡಿ ಬಂದರು. ಯಾವುದೇ ಕ್ಷಣದಲ್ಲಿ ಉರುಳಬಹುದಾಗಿದ್ದ ತಲೆಯನ್ನು ಉಳಿಸಿಕೊಂಡು ಬಂದರು. ಹೊಸ ಊರಿನಲ್ಲಿ ಹೊಸದಾಗಿಯೇ ಬದುಕನ್ನು ರೂಪಿಸಿಕೊಳ್ಳಬೇಕಾದ ಅತ್ಯಂತ ಸವಾಲಿನ ಸನ್ನಿವೇಶದಲ್ಲಿ ಬದುಕಿನ ಒಂದೊಂದೇ ಎಳೆಯನ್ನು ಹಿಡಿದು ಮೇಲಿಂದ ಮೇಲಕ್ಕೆ ಏರುತ್ತ ಹೋದರು. ಬಹುದೊಡ್ಡ ವ್ಯಕ್ತಿತ್ವವನ್ನು ಬೆಳೆದು ನಿಂತರು. ಅವರು ಏರಿದ ಎತ್ತರ ಎಷ್ಟು ದೊಡ್ಡದು ಎಂಬುದನ್ನು ಸೂಚಿಸುವುದಕ್ಕೆ ಒಂದು ಸಣ್ಣ ಉದಾಹರಣೆಯನ್ನು ನೋಡಬಹುದು: ಭಾರತದ ಪತ್ರಿಕೋದ್ಯಮದಲ್ಲಿ ಅತ್ಯಂತ ಮಹತ್ವದ ಪತ್ರಕರ್ತರು ಎಂದು ಗುರುತಿಸುವ ಮೂವರೇ ಮೂವರು ಗಣ್ಯರಲ್ಲಿ ಕುಲದೀಪ್ ಒಬ್ಬರು. ಉಳಿದಿಬ್ಬರು – ಅಜಿತ್ ಭಟ್ಟಾಚಾರ್ಯ ಮತ್ತು ಜಾರ್ಜ್ ವರ್ಗೀಸ್.

ಹೊಟ್ಟೆಪಾಡಿಗಾಗಿ ಪತ್ರಿಕೋದ್ಯಮಕ್ಕೆ ಕಾಲಿಡಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ಕುಲದೀಪ್ ಮೊದಲ ಉರ್ದು ಪತ್ರಿಕೆಗಾಗಿ ಕೆಲಸ ಮಾಡಬೇಕಾಯಿತು. ನಂತರದ ಮೆಟ್ಟಿಲು 'ದಿ ಸ್ಟೇಟ್ಸ್‌ಮನ್'. ಈ ಪತ್ರಿಕೆಯ ದೆಹಲಿ ಬ್ಯೂರೋದ ಸಂಪಾದಕ. ಮುಂದೆ ಯುಎನ್‌ಐ ಸುದ್ದಿ ಸಂಸ್ಥೆಯ ಮುಖ್ಯಸ್ಥ. ನಂತರ ಇಂಡಿಯನ್ ಎಕ್ಸ್‌ಪ್ರೆಸ್. ಇದೆಲ್ಲದಕ್ಕಿಂತ ಮುಖ್ಯವಾಗಿ ಅವರು ಓದುಗರನ್ನು ಪ್ರಭಾವಿಸಿದ್ದು ಮತ್ತು ಅವರ ಮನಸ್ಸಿನಲ್ಲಿ ಗಾಢವಾಗಿ ಉಳಿದುಕೊಂಡದ್ದು, ಅವರು ಅಂಕಣ ಬರಹಗಾರರಾಗಿ, ಅವರ ಸಿಂಡಿಕೇಟ್ ಕಾಲಂ ಇಂಗ್ಲಿಷ್‌ನಿಂದ ಭಾಷಾಂತರಗೊಂಡು ಹದಿನಾಲ್ಕು ಭಾಷೆಗಳಲ್ಲಿ, ೮೦ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿತ್ತು. ಪಾಕಿಸ್ತಾನದ 'ಡಾನ್' ಮತ್ತು 'ಎಕ್ಸ್‌ಪ್ರೆಸ್ ಟ್ರಿಬ್ಯೂನ್'ಗಳಲ್ಲಿ ಇವರ ಅಂಕಣ ಮುದ್ರಣಗೊಳ್ಳುತ್ತಿತ್ತು. (ಹೀಗೆ ಸಿಂಡಿಕೇಟ್ ಅಂಕಣ ಬರಹಗಳಿಂದ ಪ್ರಸಿದ್ಧಿ ಪಡೆದ ಇನ್ನೊಬ್ಬ ಪತ್ರಕರ್ತರೆಂದರೆ ಖುಷ್ವಂತ್

ಸಿಂಗ್.) ಕುಲದೀಪ್ ನಯ್ಯರ್ ಅವರ 'ಬಿಟ್ವೀನ್ ದಿ ಲೈನ್ಸ್' ಅಂಕಣವನ್ನು ಓದದವರೇ ಇಲ್ಲವೇನೋ ಎಂಬ ಕಾಲವೊಂದಿತ್ತು. ಇದು ಅಕ್ಷರ ಬಲ್ಲವರ ಮೆಚ್ಚಿನ ಅಂಕಣವಾಗಿತ್ತು.

ಕುಲದೀಪ ನಯ್ಯರ್ ಅವರಿಗೆ ಈ ಅಂಕಣ ಸಂತೆಯ ಹೊತ್ತಿಗೆ ಮೂರು ಮೊಳ ನೇಯುವ ಕಸುಬುಗಾರಿಕೆ ಮಾತ್ರವಾಗಿರಲಿಲ್ಲ. ಜನ ಪ್ರಜಾತಂತ್ರ ವ್ಯವಸ್ಥೆಯನ್ನು ಅರ್ಥಪೂರ್ಣವಾಗಿ ಮುನ್ನಡೆಸುವ, ರಾಷ್ಟ್ರವನ್ನು ಹೊಸ ದಿಕ್ಕಿನಲ್ಲಿ ಕಟ್ಟುವ, ರಾಜಕೀಯವನ್ನು ನಿಯಂತ್ರಿಸುವ, ಬದಲಾಯಿಸುವ ಹೊಳಹುಗಳು, ಚಿಂತನೆಗಳು, ಪ್ರೇರಣೆಗಳು ಎಲ್ಲವೂ ಈ ಬರಹಗಳಲ್ಲಿ ಅಡಗಿ ಕುಳಿತಿರುತ್ತಿದ್ದವು. ಸಮಾಜಮುಖಿಯಾದ, ಜನಪರವಾದ, ಆರೋಗ್ಯಪೂರ್ಣವಾದ ನಿಲುವು ಕುಲದೀಪ್ ಅವರದಾಗಿತ್ತು.

ಪತ್ರಿಕೋದ್ಯಮಕ್ಕೆ ಕುಲದೀಪ್ ನಯ್ಯರ್ ಅವರ ಇನ್ನೊಂದು ಮಹತ್ವದ ಕೊಡುಗೆ ಎಂದರೆ 'ಸ್ಕೂಪ್'. ಎಂದರೆ ಒಂದರ್ಥದಲ್ಲಿ ಸಿಡಿಲ ಸುದ್ದಿ, ಸ್ಫೋಟಕ ಸುದ್ದಿ. ಸರ್ಕಾರದ ಒಳಗಿನ ಗುಟ್ಟುಗಳು, ರಹಸ್ಯ ಕುಟಿಲತೆಗಳು, ಭ್ರಷ್ಟಾಚಾರದ ನಿಗೂಢ ನಡೆ, ಜನತಂತ್ರಕ್ಕೆ ಮಾರಕವಾಗುವ ಹುನ್ನಾರಗಳು ಇತ್ಯಾದಿ ಹಲವು ಸಂಗತಿಗಳನ್ನು, ಪ್ರಕರಣಗಳನ್ನು ಬೇರೆಲ್ಲ ಪತ್ರಿಕೆಗಳಿಗಿಂತ ಮುಂಚಿತವಾಗಿಯೇ ಬಯಲು ಮಾಡುವ ವಿಧಾನವೇ 'ಸ್ಕೂಪ್'. ಭಟ್ಟಂಗಿತನದಲ್ಲಿ ಮೇಲಾಟ ನಡೆಸುತ್ತಿರುವ ಇಂದಿನ ಬಹುಪಾಲು ಮಾಧ್ಯಮದವರಿಗೆ ಈ 'ಸ್ಕೂಪ್'ನ ಅರ್ಥ ಮತ್ತು ಮಹತ್ವ ತಿಳಿಯುವುದು ಕಷ್ಟ. ಕುಲದೀಪ್ ಅವರ 'ಸ್ಕೂಪ್'ಗಳನ್ನು ಓದಿದ ಓದುಗರು ಮಾತ್ರ ಕುಲದೀಪ್ ನಯ್ಯರ್ ಅವರ ಕೊಡುಗೆಯನ್ನು ಮರೆಯುವುದು ಸಾಧ್ಯವೇ ಇಲ್ಲ.

ಕುಲದೀಪ್ ಸ್ವತಂತ್ರ ಭಾರತದ ಜೊತೆಜೊತೆಗೇ ತಾವೂ ಬೆಳೆಯುತ್ತ ಹೋದವರು. ತನ್ನನ್ನು ತಾನು ಕಟ್ಟಿಕೊಳ್ಳುತ್ತಿದ್ದ ಭಾರತದ ಮಹತ್ವದ ಬೆಳವಣಿಗೆಯಲ್ಲೂ ಅವರು ಭಾಗಿಯಾದರು. ಹೀಗಾಗಿಯೇ ವಯಕ್ತಿಕ ನೋವು, ರಾಷ್ಟ್ರದ ಸಂಕಟದಲ್ಲಿ ಬೆರೆತು ಅವರ ಬರಹಗಳಿಗೆ ಹೊಸ ಆಯಾಮ ದೊರೆಯುತ್ತಿತ್ತು. ಗಾಂಧಿ, ನೆಹರೂ, ಜಿನ್ನಾ, ಮೌಂಟ್ ಬ್ಯಾಟನ್‌ರಿಂದ ಆರಂಭಿಸಿ ನಂತರದ ಬಹು ಮುಖ್ಯ ರಾಜಕಾರಣಿಗಳ ಜೊತೆಯಲ್ಲಿ ಕುಲದೀಪ್ ಅವರಿಗೆ ನಿಕಟ ಸಂಪರ್ಕ ಮತ್ತು ಸ್ನೇಹ ಇದ್ದವು. ಸರ್ಕಾರದ ಆಯಕಟ್ಟಿನ ಜಾಗಗಳಲ್ಲಿದ್ದ ಅನೇಕರು ಅವರ ಸ್ನೇಹ ವಲಯದಲ್ಲಿಯೇ ಇರುತ್ತಿದ್ದರು. ಹೀಗಾಗಿ ಸರ್ಕಾರದ ಒಳಗಿನ ಬೆಳವಣಿಗೆಗಳು, ಹೊರಗಿನ ಪಲ್ಲಟಗಳು ಅವರಿಗೆ ಬಹುಬೇಗ ತಿಳಿದುಬಿಡುತ್ತಿದ್ದವು. ಎಷ್ಟೋ ಘಟನೆಗಳಿಗೆ ಅವರು ನೇರ ನೋಡುಗರಾಗುವ ಅವಕಾಶವೂ ಒದಗಿಬರುತ್ತಿತ್ತು. ಗಾಂಧೀ ಹತ್ಯೆ, ಭಾರತ – ಪಾಕ್ ಯುದ್ಧ, ಭಾರತ – ಚೀನಾ ಯುದ್ಧ, ನೆಹರೂ ನಿಧನ, ತಾಷ್ಕೆಂಟ್ ಒಪ್ಪಂದ, ಲಾಲ್ ಬಹುದ್ದೂರ್ ಶಾಸ್ತ್ರಿ ಸಾವು, ಬಾಂಗ್ಲಾ ವಿಮೋಚನೆಗಳಲ್ಲದೆ ಕಾಂಗ್ರೆಸ್ ಇಬ್ಭಾಗವಾದ ಐತಿಹಾಸಿಕ ಸಂದರ್ಭ, ತುರ್ತು ಪರಿಸ್ಥಿತಿಯ ಘೋರ ದಿನಗಳು (೧೯೭೫–೭೭). ಇಂದಿರಾಗಾಂಧಿ ಹತ್ಯೆ, ಆಪರೇಷನ್ ಬ್ಲೂಸ್ಟಾರ್, ೧೯೮೪ರಲ್ಲಿ ದೆಹಲಿಯಲ್ಲಿ ನಡೆದ ಸಿಖ್ಖರ ನರಮೇಧ, ೧೯೯೨ – ೯೩ರ ಮುಂಬೈ ಗಲಭೆ, ೨೦೦೨ರ ಗುಜರಾತ್ ಹತ್ಯಾಕಾಂಡ ಹೀಗೆ ಸ್ವಾತಂತ್ರ್ಯೋತ್ತರ ಭಾರತದ ಬಹುಮುಖ್ಯ ಘಟನೆಗಳು ಅವರ ಕಣ್ಣೆದಿರಿನಲ್ಲಿಯೇ ನಡೆದು ಹೋದವೇನೋ ಎಂಬಷ್ಟು ಕ್ರಿಯಾಶೀಲ ವ್ಯಕ್ತಿ ಅವರಾಗಿದ್ದರು. ಅದಮ್ಯ ಉತ್ಸಾಹ, ನಿರಂತರ ಕ್ರಿಯಾಶೀಲತೆ, ಧೀರ ನಡೆ – ನಿಲುವು ಕುಲದೀಪ್ ಅವರ ವ್ಯಕ್ತಿತ್ವವನ್ನು ಎತ್ತರಕ್ಕೆ ಕೊಂಡೊಯ್ದವು.

ಬ್ರಿಟನ್‌ನಲ್ಲಿ ಅವರು ಭಾರತದ ಹೈ ಕಮೀಷನರ್ ಆಗಿದ್ದರು. ರಾಜ್ಯಸಭೆಯ ಸದಸ್ಯರಾಗಿ ಪಾರ್ಲಿಮೆಂಟಿನಲ್ಲಿದ್ದರು. ಹಲವು ಗೌರವ ಪ್ರಶಸ್ತಿಗಳೂ ಅವರಿಗೆ ಸಂದಿದ್ದವು. ಇಷ್ಟಾದರೂ ಅವರು ಎಲ್ಲಿಯೂ, ಎಂದೂ ತಮ್ಮ ದಕ್ಷತೆಯನ್ನು ಕಳೆದುಕೊಳ್ಳಲಿಲ್ಲ; ತಮ್ಮ ಧ್ವನಿಯನ್ನು ಹತ್ತಿಕ್ಕಲಿಲ್ಲ. ಯಾವುದೂ ಅವರ ಮೌಲ್ಯಗಳನ್ನು ಕುಂದಿಸಲಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಅದರ ಮುಕ್ತ ನಡೆಯಲ್ಲಿ ಅವರ ನಂಬಿಕೆ ಆಳವಾಗಿತ್ತು. ಇಂದಿರಾ ಗಾಂಧಿಯವರು ತುರ್ತುಪರಿಸ್ಥಿತಿಯನ್ನು ಘೋಷಿಸಿದಾಗ ಕುಲದೀಪ್ ಉಗ್ರವಾಗಿ ಪ್ರತಿಭಟಿಸಿದರು; ಮತ್ತೆ ಪ್ರಜಾತಂತ್ರ ವ್ಯವಸ್ಥೆ ಸ್ಥಾಪಿತವಾಗಬೇಕೆಂದು ಹೋರಾಟ ನಡೆಸಿದರು. ಅದರ ಪರಿಣಾಮವಾಗಿ ಜೈಲುವಾಸವನ್ನೂ ಕಂಡರು. ಮುಂದಿನ ದಿನಗಳಲ್ಲಿಯೂ ಅವರು ಪ್ರಜಾತಂತ್ರ ವ್ಯವಸ್ಥೆ ಗಟ್ಟಿಯಾಗಿ ಉಳಿಯಲು ದುಡಿದರು. ಭ್ರಷ್ಟಾಚಾರದ ವಿರುದ್ಧ ನಡೆಯುವ ಚಳವಳಿಗಳು, ಸಾಮಾಜಿಕ ಹೋರಾಟಗಳು, ಮುಗ್ಧರು ಮತ್ತು ಬಡವರನ್ನು ವಿನಾಕಾರಣ ಬಲಿ ತೆಗೆದುಕೊಳ್ಳುವ ದಿಕ್ಕಿನಲ್ಲಿ ನಡೆಯುವ ಹಿಂಸಾಕೃತ್ಯಗಳನ್ನು ತಡೆಯುವ ಹೋರಾಟಗಳು ಹೀಗೆ ಎಲ್ಲ ಬಗೆಯ ಸಾಮಾಜಿಕ, ರಾಜಕೀಯ ಚಳವಳಿಗಳನ್ನು ಅವರು ಬೆಂಬಲಿಸಿದರು. ಇಳಿವಯಸ್ಸಿನ ಅಣ್ಣಾ ಹಜಾರೆ ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಆರಂಭಿಸಿದಾಗ ಕುಲದೀಪ್, ಹಜಾರೆಯವರನ್ನು ಬೆಂಬಲಿಸಿದರು.

ಕುಲದೀಪ್ ಅವರ ವ್ಯಕ್ತಿತ್ವಕ್ಕೆ ಇನ್ನೂ ಹಲವು ಮುಖಗಳಿವೆ. ಅವರ ಮಾನವ ಹಕ್ಕುಗಳ ಹೋರಾಟ ಇಡೀ ದಕ್ಷಿಣ ಏಷ್ಯಾ ರಾಷ್ಟ್ರಗಳಿಗೆ ವ್ಯಾಪಿಸಿತ್ತು. ಈ ರಾಷ್ಟಗಳ ಏಕತಾ ಸಮಿತಿಯ ಮುಂದಾಳುವಾಗಿ ಅವರು ನಿಂತಿದ್ದರು. ಶಾಂತಿ ಸ್ಥಾಪನೆಯ ಅನೇಕ ನಿಯೋಗಗಳ ಮುಂಚೂಣಿಯಲ್ಲಿ ಅವರು ಕ್ರಿಯಾಶೀಲರಾಗಿದ್ದರು. ಬ್ರಿಟಿಷರ ರಾಜಕೀಯ ಕುಹಕದಿಂದಾಗಿ ಭಾರತ ವಿಭಜನೆಯಾಗುವುದು ಅನಿವಾರ್ಯವಾಗಿತ್ತು. ಆದರೆ ಭಾರತ ಮತ್ತು ಪಾಕಿಸ್ತಾನಗಳು ಸೋದರ ರಾಷ್ಟ್ರಗಳು, ಅವು ಹಾಗೆಯೇ ಬಾಳಬೇಕೆಂಬ ಹೆಬ್ಬಯಕೆ ಕುಲದೀಪ್ ಅವರಿಗೆ ಇತ್ತು. ಅವರು ಪಾಕನ್ನು ತೊರೆದುಬಂದಂತೆ, ಅನೇಕರು ಭಾರತವನ್ನು ತೊರೆದು ಪಾಕಿಸ್ತಾನದಲ್ಲಿ ನೆಲಸಿದ್ದ ವಾಸ್ತವವನ್ನು ಅವರು ಬಲ್ಲವರಾಗಿದ್ದರು. ಈ ಕಾರಣದಿಂದಾಗಿಯೇ ಅವರು ಈ ಎರಡು ದೇಶಗಳ ನಡುವಣ ಬಾಂಧವ್ಯ ಬೆಸೆಯುವ ಯಾವುದೇ ಕೆಲಸದಲ್ಲಿಯೂ

ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಭಾರತ – ಪಾಕ್‌ಗಳ ನಡುವೆ ಸ್ನೇಹ, ಸೌಹಾರ್ದಗಳನ್ನು ಬೆಳೆಸಲು ಕುಲದೀಪ್ ನಯ್ಯರ್ ಅವರು ೧೯೯೫ರಲ್ಲಿ ಒಂದು ವಿನೂತನವಾದ ಪ್ರಯತ್ನಕ್ಕೆ ಕೈ ಹಾಕಿದರು. ತಮ್ಮ ನಿಲುವನ್ನು ಒಪ್ಪುವ ಕೆಲವು ಮಾನವತಾವಾದಿಗಳ ಜೊತೆಗೂಡಿ ವಾಘ ಗಡಿಯಲ್ಲಿ ಆಗಸ್ಟ್ ೧೪ ಮತ್ತು ೧೫ರ ರಾತ್ರಿಗಳಲ್ಲಿ (ಆಗಸ್ಟ್ ೧೪ ಪಾಕಿಸ್ತಾನ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತದೆ.) ಮೊಂಬತ್ತಿ ಉರಿಸಿ, ಈ ಬೆಳಕಿನಲ್ಲಿ ಎರಡು ರಾಷ್ಟ್ರಗಳು ಪರಸ್ಪರರನ್ನು ನೋಡಿಕೊಳ್ಳುವಂತೆ, ಸೋದರತ್ವವನ ಬೆಳೆಸಿಕೊಳ್ಳುವಂತೆ ಪ್ರೇರೇಪಿಸಿದರು. ಇದೊಂದು ವಾರ್ಷಿಕ ಆಚರಣೆಯಂತೆ, ಅಖಂಡ ವಿಶ್ವಾಸದ ದ್ಯೋತಕದಂತೆ ಪ್ರತಿವರ್ಷವೂ ನಡೆಯುತ್ತ ಹೋಯಿತು. ಆಸಕ್ತರಾದ ಕೆಲವೇ ಕೆಲವು ಮಿತ್ರರೊಡಗೂಡಿ ಕುಲದೀಪ್ ಅವರು ಆರಂಭಿಸಿದ ಈ ಆಚರಣೆ ಒಂದು ಸಂಪ್ರದಾಯದಂತೆ ಬೆಳೆದು ಎರಡೂ ರಾಷ್ಟ್ರಗಳ ಮಾನವ ಪ್ರೇಮಿಗಳನ್ನು ದೊಡ್ಡ ಸಂಖ್ಯೆಯಲ್ಲಿ ಸೆಳೆಯತೊಡಗಿತು. ಆರಂಭದಲ್ಲಿ ಸಾಂಕೇತಿಕವಾಗಿ ಬೆರಳೆಣಿಕೆಯಷ್ಟು ಜನ ಭಾಗವಹಿಸುತ್ತಿದ್ದ ಈ ಆಚರಣೆ ಪ್ರತಿವರ್ಷ ಬೆಳೆಯುತ್ತ ಹೋಗಿ ಐದು ಲಕ್ಷಕ್ಕೂ ಅಧಿಕ ಮಾನವ ಪ್ರೇಮಿಗಳು ಮತ್ತು ಶಾಂತಿಪ್ರಿಯರು ಭಾಗವಹಿಸುವಷ್ಟು ದೊಡ್ಡದಾಯಿತು. ಎರಡೂ ರಾಷ್ಟ್ರಗಳ ಜನ ಪ್ರೀತಿಯಿಂದ ಗುಂಪಾಗಿ ಮೊಂಬತ್ತಿ ಉರಿಸಲು ಮುಂದಾದರು. ಗಡಿಯಲ್ಲಿ ನಿಂತು ಭಾರತದ ಕಡೆಯಿಂದ 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗುವವರು, ಪಾಕಿಸ್ತಾನದ ಕಡೆಯಿಂದ, 'ಹಿಂದೂಸ್ತಾನ್ ಜಿಂದಾಬಾದ್' ಎಂದು ಕೂಗುವವರು ಎರಡೂ ರಾಷ್ಟ್ರಗಳ ನಡುವಣ ಸೋದರತ್ವವನ್ನು ಸಾರಿದರು. ಇದು ಕುಲದೀಪ್ ಆರಂಭಿಸಿದ ಬಹುದೊಡ್ಡ ಸದ್ಭಾವನೆಯ ಪಯಣ. ಕುಲದೀಪ್ ನಿಜವಾದ ಶಾಂತಿದೂತ ಎಂಬುದಕ್ಕೆ ಇನ್ನೊಂದು ಪುರಾವೆ ಸಿಗಲಾರದು.

ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಅವರು ಇಟ್ಟುಕೊಂಡಿದ್ದ ನಂಬಿಕೆ ಮತ್ತು ಅದಕ್ಕಾಗಿ ಅವರು ನಡೆಸುತ್ತಿದ್ದ ಹೋರಾಟಗಳನ್ನು ಗೌರವಿಸಿ ಅವರಿಗೆ ಆಸ್ಟರ್ ಪ್ರಶಸ್ತಿ ದೊರಕಿತು (೨೦೦೩). ಅವರ ಜೀವಮಾನದ ಸಾಧನೆಗಾಗಿ ಶಾಹಿದ್ ನಿಯೋಗಿ ಸ್ಮಾರಕ ಪ್ರಶಸ್ತಿ (೨೦೦೭), ರಾಮನಾಥ ಗೋಯೆಂಕಾ ಪ್ರಶಸ್ತಿ (೨೦೧೫)ಗಳು ಅವರಿಗೆ ಲಭಿಸಿದವು. ಮರಣೋತ್ತರವಾಗಿ (೨೦೧೯) ಅವರಿಗೆ ಪದ್ಮಭೂಷಣ ಗೌರವವನ್ನೂ ನೀಡಲಾಯಿತು. ಈ ಎಲ್ಲ ಗೌರವಕ್ಕೂ ಅವರು ಅತ್ಯಂತ ಅರ್ಹ ವ್ಯಕ್ತಿಯಾಗಿದ್ದರು.

ಭಾರತದ ಎಲ್ಲ ಬೆಳವಣಿಗೆಗಳನ್ನು ನೋಡುತ್ತ, ಅನುಭವಿಸುತ್ತ, ಅದರ ಭಾಗವಾಗಿಯೇ ಬೆಳೆದ ಕುಲದೀಪ್ ನಯ್ಯರ್ ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ಅನೇಕ ಕೃತಿಗಳನ್ನು ರಚಿಸಿದರು. ಪಂಜಾಬ್‌ನ ಸಿಯಾಲ್‌ಕೋಟ್‌ನಲ್ಲಿ ಹುಟ್ಟಿ ಬೆಳೆದ ಕುಲದೀಪ್ ಸಹಜವಾಗಿಯೇ ಭಗತ್‌ಸಿಂಗ್‌ನ ಹೋರಾಟ ಮತ್ತು ವ್ಯಕ್ತಿತ್ವದಿಂದ ಆಕರ್ಷಿತರಾಗಿದ್ದರು. ಭಗತ್ ಸಿಂಗ್‌ನ ಬದುಕು ಮತ್ತು ಹೋರಾಟವನ್ನು ಕುರಿತು ಎರಡು ಕೃತಿಗಳನ್ನು ರಚಿಸಿದರು. 'ಬಿಟ್ವೀನ್ ದ ಲೈನ್ಸ್' ಇವರ ಅಂಕಣ ಬರಹಗಳ ಕೃತಿಯಾದರೆ, 'ಬಿಯಾಂಡ್ ದ ಲೈನ್ಸ್' ಕುಲದೀಪ್ ಅವರ ಆತ್ಮಕಥೆ. ಇಂಡಿಯಾ: ದಿ ಕ್ರಿಟಿಕಲ್ ಇಯರ್ಸ್, ಡಿಸ್ಟೆಂಟ್ ನೈಬರ್ಸ್, ಸಪ್ರೆಷನ್ ಆಫ್ ಜಡ್ಜಸ್ ಮೊದಲಾದ ಹದಿನೈದಕ್ಕೂ ಹೆಚ್ಚು ಕೃತಿಗಳನ್ನು ಕುಲದೀಪ್ ರಚಿಸಿದ್ದಾರೆ. ದಕ್ಷಿಣ ಏಷ್ಯಾದ ಎಲ್ಲ ರಾಷ್ಟ್ರಗಳಲ್ಲೂ ಕುಲದೀಪ್ ನಯ್ಯರ್ ಪ್ರಸಿದ್ಧರು. ಪಾಕಿಸ್ತಾನದಲ್ಲಂತೂ ಅನೇಕ ಆಪ್ತಮಿತ್ರರನ್ನು ಅವರು ಪಡೆದಿದ್ದರು.

ಕುಲದೀಪ್ ಅಂಥ ದಿಟ್ಟರನ್ನು, ಧೀಮಂತರನ್ನು, ಸಮಾಜಮುಖಿ ಹೋರಾಟಗಾರರನ್ನು ನೆನೆಯುವುದು ಹೊಸ ತಲೆಮಾರಿಗೆ ಹೊಸ ಚೈತನ್ಯವನ್ನು ನೀಡಬಲ್ಲದು.

**ಲೇಖಕರ:** ಜೆ.ಪಿ. ಬಸವರಾಜು (೧೯೫೨–ಮೈಸೂರು) ಕವಿ, ಕತೆಗಾರ, ಕಾದಂಬರಿಕಾರ, ಲೇಖಕ, ಪತ್ರಕರ್ತ. ನಾಲ್ಕು ಕಥಾ ಸಂಕಲನ, ಆರು ಕವನ ಸಂಕಲನ, ಐದು ಪ್ರವಾಸಿ ಸಾಹಿತ್ಯ ಕೃತಿ ರಚಿಸಿರುವ ಇವರ ಕೆಲವು ಕೃತಿಗಳು: ಬೆತ್ತಲೆಯ ಬೆಳಕುನುಟ್ಟು, ಕಾಗೋಡು, ಶಿಖರ ಸಾಲು, ಕೊಳ್ಳದ ಹಾದಿ, ಕಾಡಿನ ದಾರಿ, ದಂಡಿನ ದಾರಿಯಲ್ಲಿ, ಬೊಗಸೆಯಲ್ಲಿ ಕಡಲು, ಒಂದು ಗುಲಾಬಿ ಇತ್ಯಾದಿ.

**ಪ್ರಶ್ನೆಗಳು:**

೧. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ನಯ್ಯರ್ ಅವರ ನಿಲುವೇನು?
೨. ನಯ್ಯರ್ ಅವರ ವ್ಯಕ್ತಿತ್ವ ವಿವರಿಸಿ.

# ಘಟಕ : ೨

## ೧. ವಚನಗಳು

**–ಅಂಬಿಗರ ಚೌಡಯ್ಯ**

**ಆಶಯ:** ವಚನವೆಂದರೆ ಮಾತು, ಪ್ರಮಾಣ, ಹಾಡಿದರೆ ಹಾಡಾಗುವ ಓದಿದರೆ ಗದ್ಯವಾಗುವ ಕನ್ನಡದ ವಿಶಿಷ್ಟ ಕಾವ್ಯ ಪ್ರಕಾರ ಇದು. ವಚನ ಸಾಹಿತ್ಯ ಚಳುವಳಿ ಬದುಕಿನಲ್ಲಿ ಸಾಹಿತ್ಯದಲ್ಲಿ ಹಾಗೂ ಅಧ್ಯಾತ್ಮದಲ್ಲಿ ಅಪೂರ್ವವಾದ ಸಾಧನೆಗಳಿಗೆ, ಎಡೆಮಾಡಿಕೊಟ್ಟಿತು. ಕಾಯಕ–ದಾಸೋಹಗಳ ಪರಿಕಲ್ಪನೆಯಲ್ಲಿ ಬದುಕು ಮತ್ತು ಧರ್ಮವನ್ನು ಸಂಲಗ್ನಗೊಳಿಸಿಕೊಂಡ ಕಾಲಮಾನವದು. ಅಳು–ಅರಸ, ಉಚ್ಚ–ನೀಚ ಎಂಬ ಭೇದಗಳನ್ನು ಕಳಚಿ ಮಾನವತೆಯ ಪ್ರೀತಿಯನ್ನು ಬಿತ್ತಿದ ಕಾಲವದು.

ಅಂಬಿನ ಹಿಳುಕಿನಲ್ಲಿ ಕಟ್ಟಿದ ವಿಹಂಗನ ಗರಿಯಂತೆ
ತಾಗುವ ಮೊನೆಗಾಧಾರವಾಗಿ ದೂರ ಎಚ್ಚುದುವುದಕೆ ಸಾಗಿಸುವ ಗುಣ ತಾನಾಗಿ
ಶ್ರೀ ಅರಿವಿನ ಭೇದದ ನೆರಿಗೆಯ ಕಾಬನ್ನಕ್ಕ
ಅರಿವು ಕುರುಹು ಎರಡು ಬೇಕೆಂದನಂಬಿಗ ಚೌಡಯ್ಯ

ಅಯ್ಯಾ ಪಾಷಾಣಕ್ಕೆ ಗಿರಿ ಸವೆದವು
ಪತ್ರೆಗೆ ತರು ಸವೆದವು
ಸಪ್ತ ಸಾರಂಗಳು ಮಜ್ಜನಕ್ಕೆ ಸವೆದವು
ಅಗ್ನಿ ಧೂಪಕ್ಕೆ ಸವೆಯಿತು.
ವಾಯು ಕುಪಿತಕ್ಕೆ ಸವೆಯಿತ್ತು
ಉಘೇ ಚಾಂಗುಭಲಾ ಎಂಬ ಶಬ್ಧ ಸವೆಯಿತ್ತು
ಎನಗಿನ್ನೆಂತೂ ಉಮೇಶನ ಶರಣರು ಮಹಾ ಮನೆಯಲ್ಲಿ
ಶಿವಲಿಂಗಾರ್ಚನೆಗೆ ಕುಳ್ಳಿದ್ದಡೆ
ನಾನವರ ಪಾದರಕ್ಷೆಯ ಕಾಯ್ದು ಕೊಂಡಿದ್ದೆನೆಂದನಂಬಿಗ ಚೌಡಯ್ಯ

ಅರಿಯದ ಗುರು ಅರಿಯದ ಶಿಷ್ಯಂಗೆ
ಅನುಗ್ರಹವ ಮಾಡಿದಡೇನಪ್ಪುದೆಲವೊ
ಅಂಧಕನ ಕೈಯನಂಧಕ ಹಿಡಿದಡೆ ಮುಂದನಾರು ಕಾಬರು ಹೇಳವೆ ಮಗುಳೆ
ತೊರೆಯಲದ್ದ ವನನೀಸಲರಿಯದವ ತೆಗೆವ ತೆರನೆಂತೆಂದನಂಬಿಗ ಚೌಡಯ್ಯ

**ವಚನಕಾರ ಪರಿಚಯ:** ಅಂಬಿಗರ ಚೌಡಯ್ಯ (೧೧೬೦) ವಚನಕಾರರಲ್ಲಿ ಅತ್ಯಂತ ವಿಶಿಷ್ಟನಾದವನು. ವೃತ್ತಿಯಿಂದ ಅಂಬಿಗ. ಪ್ರವೃತ್ತಿಯಿಂದ ಅನುಭಾವಿ. ಅಂಬಿಗರ, ಚೌಡಯ್ಯ ಎಂಬುವುದೇ ವಚನಗಳ ಅಂಕಿತನಾಮವಾಗಿದೆ. ವಚನಗಳ ವಸ್ತು, ಭಾಷೆ, ಶೈಲಿಗಳನ್ನು ಗಮನಿಸಿದರೆ ಇವನೊಬ್ಬ ಕೆಚ್ಚೆದೆಯ ನಿಷ್ಠುರ ವಚನಕಾರ.

**ಪ್ರಶ್ನೆಗಳು:**

೧. ಅರಿವು ಕುರುಹಗಳ ಸಾಧನೆ ಎಲ್ಲಿಯವರೆಗೆ ಇರಬೇಕು?
೨. ಅಂಬಿಗರ ಚೌಡಯ್ಯ ಆಡಂಬರದ ಭಕ್ತಿಯನ್ನು ಹೇಗೆ ವಿಡಂಬಿಸಿದ್ದಾನೆ?

# ೨. ನೆನಪು ಮರುಕಳಿಸಿದಾಗ

**–ಗಿರಿಬಾಲೆ**

**ಆಶಯ:** ಬದುಕು ಬರೀ ಸಂತಸದಿಂದ ಮಾತ್ರ ಕೂಡಿರುವುದಿಲ್ಲ. ಅಲ್ಲಿ ನೋವಿನ, ಬೇಸರದ ಸಂಗತಿಗಳೂ ಇರುತ್ತವೆ. ಅಂದುಕೊಂಡದ್ದೆಲ್ಲಾ ಸಾಧ್ಯವಾಗದಿರುವುದೇ ಬಾಳಿನ ವಿಶೇಷ. ಆದರೂ ಮನುಷ್ಯ ನಿರಂತರ ಯತ್ನ ನಡಸೇ ಇರುತ್ತಾನೆ!

ಅನಾಥ ಸೇವಾ ಸಮಾಜದ ಸಂಚಾಲಿಕೆ ಇಂದಿರಮ್ಮನವರು. ತಮ್ಮ ಕೊಠಡಿಯಲ್ಲಿ ಭಾರತ ವಾಚನದಲ್ಲಿ ಮಗ್ನರಾಗಿದ್ದರು. ಎಡಬಿಡದೆ ಸದ್ದು ಮಾಡುತ್ತಿದ್ದ ಕರೆಗಂಟೆಯಿಂದ ಎಚ್ಚೆತ್ತವರು ಇನ್ನೇನು ಕೆಲಸದಾಕೆಯನ್ನು ಕರೆಯಬೇಕು ಎನ್ನುವಷ್ಟರಲ್ಲಿ ರಾಜಮ್ಮ ಅವರಿದ್ದಲ್ಲಿಗೆ ಬಂದು 'ಯಾರೆಂದು ನೋಡಲ್ಲೇನಮ್ಮ?' ಎಂದು ಕೇಳಿದಳು.

'ನೋಡು, ಏನು ಕೆಲಸವೆಂದು ಕೇಳು' ಎಂದರು ಇಂದಿರಮ್ಮ.

ರಾಜಮ್ಮ ಬಾಗಿಲು ತೆಗೆದು ಆಗಂತುಕನನ್ನು ಪ್ರಶ್ನಿಸಿ ಹಿಂದಿರುಗಿದಾಕೆ 'ನಿಮ್ಮನ್ನು ಕಾಣಲೆಂದು ಯಾರೋ ಬಂದಿದಾರಮ್ಮ, ಬರಹೇಳಲೋ' ಎಂದು ಕೇಳಿದಳು.

'ಏನಂತೆ?' ಪ್ರಶ್ನಿಸಿದರಾಕೆ,

'ಅದನ್ನು ಕೇಳಲಿಲ್ಲ, ನಿಮ್ಮನ್ನು ಕಾಣಬೇಕಂತೆ.'

'ಸರಿ, ಬರಹೇಳು' ಎಂದವರೇ ಇಂದಿರಮ್ಮನವರು ಗ್ರಂಥದಲ್ಲಿ ಗುರುತು ಇಟ್ಟು ಮುಚ್ಚಿ, ಕಾರ್ಯನಿರ್ವಹಣೆಯ ಕೊಠಡಿಗೆ ಬಂದು ಆಗಂತುಕನನ್ನು ಕಾದರು. ಸಾಧಾರಣ ಎಪ್ಪತ್ತರ ಹರೆಯದವರಂತೆ ಕಾಣುತಿದ್ದ ಭವ್ಯ ವ್ಯಕ್ತಿಯೊಬ್ಬರು ಕೊಠಡಿಯನ್ನು ಪ್ರವೇಶಿಸಿದವರೇ–

'ಹಳೆಯ ಅಪರಾಧಿ, ಕ್ಷಮಾಯಾಚನೆಗಾಗಿ ಬಂದಿದ್ದೇನೆ' ಎಂದರು.

'ಯಾರು ನೀವು ಗುರುತು ಹತ್ತಲಿಲ್ಲವಲ್ಲ! ಕ್ಷಮಿಸಿ' ಎಂದವರು ಆಶ್ಚರ್ಯ ಚಕಿತೆಯಾಗಿ ಅವರ ಮುಖವನ್ನೇ ದಿಟ್ಟಿಸುತ್ತಿದ್ದ ಆಕೆಯನ್ನುದ್ದೇಶಿಸಿ "ಹಗಲಿರುಳೂ ಯಾರ ಕುರಿತಾಗಿ ಚಿಂತಿಸುತ್ತಾ ಬೇಗುದಿ ಪಡುತ್ತಿರುವಿಯೋ, ಆ ಪಾಪಿಯೇ ನಾನು!' ಎಂದರಾ ಗೃಹಸ್ಥ.

ಬೆರಗುಗಣ್ಣುಗಳಿಂದ ಆಗಂತುಕನ ಮೇಲೆ ನಖಶಿಖಾಂತ ದೃಷ್ಟಿ ಹರಿಸಿದಳು ಇಂದಿರಮ್ಮ.

'ಓ, ನೀವು!' ಎಂದಂತೆಯೇ ಪ್ರಜ್ಞೆ ತಪ್ಪಿದಂತಾಯಿತು. ದೂರದಲ್ಲಿ ನಿಂತುಕೊಠಡಿಯ ವೀಕ್ಷಿಸುತ್ತಲಿದ್ದ ರಾಜಮ್ಮ 'ಅಮ್ಮಾ' ಎಂದು ಅರಚಿ, ಶರವೇಗದಿಂದ ಅಲ್ಲಿಂದ ಓಡಿ ಹಿಂತಿರುಗುವಾಗ ಕೈಯಲ್ಲಿ ನೀರಿನ ತಂಬಿಗೆಯನ್ನು ಹಿಡಿದು ಮರಳಿದವಳು ಒಡತಿಯ ಮುಖಕ್ಕೆ ನೀರು ಚಿಮುಕಿಸಿ 'ಸುಧಾರಿಸಿಕೊಳ್ಳಿರಮ್ಮ, ಏನಾಯಿತು?' ಎಂದಳಾಕೆ ಕರ್ಕಶ ಕಂಠದಿಂದ.

'ಯಾರಯ್ಯ ನೀವು? ಹೀಗೆ ಅಮ್ಮನವರನ್ನು ಬೆದರಿಸುವ ಕಾರಣವೇನು? ನಡೆಯಿರಿ ಹೊರಗೆ! ಇಲ್ಲವೆ, ನಾನು ಅಕ್ಕಪಕ್ಕದವರನ್ನೆಲ್ಲಾ ಕರೆಯಬೇಕಾಗುತ್ತದೆ. ತಲೆತಗ್ಗಿಸಿ ಹೋಗುವುದಕ್ಕಿಂತ ಮರ್ಯಾದೆಯಿಂದ ಇಲ್ಲಿಂದ ತೊಲಗಿ' ಎಂದಳು.

ಆ ಗೃಹಸ್ಥ ಏನೂ ಆಗದವರಂತೆ ಅವಿಚಲನಾಗಿ ನಿಂತು 'ಇಂದೂ, ಇಂದೂ, ಇದೋ ಹೊರಟೆ. ಕ್ಷಮಿಸಿದೆನೆಂದು ಹೇಳು, ಸಾಕು. ಈ ಅಪರ ವಯಸ್ಸಿನಲ್ಲಿ ಮನಶ್ಶಾಂತಿ ಕಳೆದುಕೊಂಡ ನನಗೆ ನಿನ್ನ ಕ್ಷಮೆಯೇ ಮುಂದಿನ ಜೀವನದ ತಾರಕ ಮಂತ್ರವಾದೀತು'– ಎಂದರು.

ಅಷ್ಟರಲ್ಲಿ ಚೇತರಿಸಿಕೊಂಡ ಇಂದಿರಮ್ಮನವರು 'ಬೇಡ, ಕುಳಿತುಕೊಳ್ಳಿ. ನನ್ನ ತಪಸ್ಸು ಫಲಿಸಿ, ನನ್ನ ಆಸೆ ಪ್ರತ್ಯಕ್ಷವಾದಾಗ, ಅಷ್ಟು ಸುಲಭವಾಗಿ ಅದನ್ನು ಕಳೆದುಕೊಳ್ಳಲು ನಾನು ಸಿದ್ಧಳಿಲ್ಲ. ರಾಜಿ, ನೀನು ಹೋಗಮ್ಮ, ಇವರು ಅಪಾಯಕಾರಿ ವ್ಯಕ್ತಿಯಲ್ಲ ಹೆದರಬೇಡ' ಎಂದರು. ರಾಜಮ್ಮ ಅಳುಕುತ್ತಾ ಹೊರಕ್ಕೆ ನಡೆದಳಾದರೂ ದೂರದಲ್ಲಿ ನಿಂತು ಕೊಠಡಿಯತ್ತ ಕಣ್ಣಿರಿಸಿದಳು.

ಐವತ್ತು ವರ್ಷಗಳ ಮೇಲಾದರೂ ನನ್ನ ನೆನಪಾಯಿತಲ್ಲ! ನಾನು ಧನ್ಯೆ, ನನ್ನ ತಪಸ್ಸು ಇಂದಿಗೆ ಫಲಿಸಿತು. ಇನ್ನ ನಿಶ್ಚಿಂತೆಯಿಂದ ನಾನು ಸಾಯಬಹುದು.

'ಇಂದೂ....' ಆ ಗೃಹಸ್ಥನ ಕಂಠ ಗದ್ಗದಿತವಾಯಿತು.

'ನನ್ನ ಹೆಸರಾದರೂ ನಿಮ್ಮ ಸ್ಮರಣೆಯಲ್ಲಿದೆಯಲ್ಲ! ಪುಲಕಿತಳಾದೆ'.

'ಇಂದೂ, ನಾನೆಂತ ಪಾಪಿ,' ನಾನು ಏನೇನೋ ಕಲ್ಪಿಸಿಕೊಂಡು ಬಂದಿದ್ದೆ. ಸಂಸಾರಿಯಾಗಿ ಸಭ್ಯಸ್ಥನ ಪತ್ನಿಯಾಗಿ, ಮಕ್ಕಳ ತಾಯಿಯಾಗಿದ್ದ ನಿನ್ನ ದರ್ಶನ ಪಡೆದು ನಿನ್ನಲ್ಲಿ ಕ್ಷಮೆ ಯಾಚಿಸಿ ಪಾಪಿ ಜನ್ಮವನ್ನು ಪಾವನವಾಗಿಸಿಕೊಳ್ಳಬೇಕೆಂದು ಬಂದಿದ್ದ ನನಗೆ, ನೀನೆಂತಹ ಆಘಾತವನ್ನುಂಟುಮಾಡಿದಿಯೆ! ಈ ನೀಚನ ಸ್ಮರಣೆಯಲ್ಲಿ ಜೀವನವನ್ನು ಬಲಿಗೊಟ್ಟೆಯ? ಓ! ನನಗಿನ್ನೆಂತಹ ಗತಿ ಕಾದಿದೆಯೇ! ನಿನ್ನನ್ನು ಜೀವಂತ ಸಮಾಧಿ ಮಾಡಿದೆನೆ ನಾನು? ನಿರ್ಗತಿಕನಾಗಿದ್ದೇನೆ ನಾನೀಗ. ನಿನ್ನ ಮನೋ ಬೇಗೆಯಿಂದ ನನ್ನ ಸಂಸಾರದ ಸರ್ವನಾಶವಾಯಿತು. ವೃದ್ಧಾಪ್ಯ ಕಾಲದಲ್ಲಿ ಆಸ್ತಿಯೆಲ್ಲಾ ಒಕ್ಕಲುಗಳ ಸ್ವಾಧೀನವಾದ ಚಿಂತೆ ಹಿಡಿದು, ಹೆತ್ತವರು ಹಾಸಿಗೆ ಹಿಡಿದು ಆಯುಷ್ಯ ಮುಗಿಸಿದರು. ಪರರಾಷ್ಟ್ರದಲ್ಲಿ ವ್ಯಾಸಂಗ ಮಾಡುತ್ತಿದ್ದ ನನ್ನ ಒಬ್ಬನೇ ಮಗ, ಪರಧರ್ಮ ಸ್ವೀಕರಿಸಿ, ಪರಮತೀಯಳನ್ನು ವಿವಾಹವಾದ ವಿಚಾರ ತಿಳಿದ ಆತನ ತಾಯಿ ಹೃದಯಾಘಾತದಿಂದ ತೀರಿಕೊಂಡಳು. ವೈಧವ್ಯದ ಬೇಗೆಯನ್ನು ಸಹಿಸಲಾರದ ನನ್ನ ಮಗಳು ಆತ್ಮಹತ್ಯೆ ಮಾಡಿಕೊಂಡಳು. ಜೀವನದಲ್ಲಿ ಮೇಲಿಂದ ಮೇಲೆ ಆದ ಆಘಾತದಿಂದ ನಾನು ತೀರ ಹುಚ್ಚನಂತಾಗಿದ್ದೇನೆ, ಈ ನನ್ನ ಸರ್ವನಾಶಕ್ಕೆ ನಿನ್ನಲ್ಲಿ ನಾನು ಮಾಡಿದ ದ್ರೋಹವೇ ಕಾರಣವೆಂದು ಮನದಟ್ಟಾಗಿ, ನಿನ್ನಲ್ಲಿ ಕ್ಷಮಾ ಯಾಚನೆಗೆ ಬಂದರೆ, ನೀನು ಮತ್ತೂ ನನ್ನೆದೆಗೆ ಬರೆ ಹಾಕಿದಿಯಾ? ಊರಿಗೆ ಬಂದಾಗ ನೀನೂ ನಿರಾಧಾರೆಯಾಗಿ ಆಶ್ರಮ ಸೇರಿಕೊಂಡ ವಿಚಾರ ತಿಳಿದು ಬಂದು, ನಿನ್ನ ವಿಳಾಸವನ್ನು ಕೇಳಿ ತಿಳಿದು ನಿನ್ನನ್ನು ಅರಸಿ ಬಂದೆ. ಪಾಪಿ ಹೋದಲ್ಲೆಲ್ಲ ಮೊಳಕಾಲು ನೀರೆಂಬಂತೆ ನಿನ್ನ ಸುಖ ಸಂಸಾರವನ್ನು ಕಂಡಾದರೂ ಶಾಂತಿ ಪಡೆವೆನೆಂದರೆ, ಆ ಭಾಗ್ಯವೂ ನನಗಿಲ್ಲವಾಯಿತು. ನನ್ನ ಜೀವನದಲ್ಲಿ ಇನ್ನೇನೂ ಇಲ್ಲ. ಬಿಡುವು, ಇಂದೂ, ಒಮ್ಮೆ ಕ್ಷಮಿಸಿದ್ದೇನೆಂದು ಹೇಳು, ಪ್ರಾಯದ ಮನದಲ್ಲಿ ಯಾವ ಭೀತಿಯೂ ಇರುವುದಿಲ್ಲ. ಈಗ ಬಾಳಿನ ಅಂತಿಮಘಟ್ಟ ಸಮೀಪಿಸಿದೆ. ಮಾಡಿದ ಕರ್ಮಗಳನ್ನೆಲ್ಲಾ ನೆನೆಸಿದರೆ ಸಾಯಲೂ ಅಂಜಿಕೆಯಾಗುತ್ತಿದೆ. ನಿನ್ನ ಕ್ಷಮೆಯೊಂದು ನನ್ನ ಅಂತ್ಯಕಾಲದ ರಕ್ಷೆಯಾಗಿರಲಿ ಎಂದು ನಿನ್ನಲ್ಲಿಗೆ ಬಂದರೆ. 'ನೀನು, ಓ! ನೀನು! ಇಂದೂ ನೀನು ಸಾಮಾನ್ಯ ಸ್ತ್ರೀಯಲ್ಲ! ಇದೋ ನಿನ್ನ ಕಾಲಿಗೆ ಬೀಳುತ್ತಿದ್ದೇನೆ' ಎಂದು ಸಾಷ್ಟಾಂಗವೆರಗಲು ಮುಂದಾದ ಆ ಗೃಹಸ್ಥನ ಭಾಹುಗಳನ್ನು ತಟ್ಟನೆದ್ದು ದೃಢವಾಗಿ ಹಿಡಿದು 'ಏನು, ನನ್ನನ್ನು ರೌರವ ನರಕಕ್ಕೆ ತಳ್ಳಲೂ ಸಿದ್ಧರಾದಿರಾ? ಕೂಡದು. ನೀವು ಏನೇ ಆಗಿರಿ, ನಾನು ನಿಮ್ಮವಳೆಂದು ಅಂದು ಶ್ರೀ ಆಂಜನೇಯ ಸ್ವಾಮಿಯ ಮುಂದೆ ಪ್ರಮಾಣ ಮಾಡಿ ಸ್ವೀಕರಿಸಿದ ಮೇಲೆ ನಾನೆಂದಿದ್ದರೂ ನಿಮ್ಮವಳೇ, ದೇವರಿತ್ತ ಸಾಧನಾ ಶರೀರವನ್ನು ಸಾರ್ಥಕಗೊಳಿಸಿ ದೇವರ ಪಾದ ಸೇರಬೇಕಾದ ನನ್ನನ್ನು ನರಕಕ್ಕೆ ತಳ್ಳಬೇಡಿ. ಇದೀಗ ಸಿದ್ಧಿಯೆಡೆಗೆ ಸಾಗುತ್ತಿದ್ದೇನೆ ಎಂಬುದಕ್ಕೆ ನಿಮ್ಮ ದರ್ಶನ ನನಗೆ ದೊರಕಿದುದೇ ಸಾಕ್ಷಿ' ಎನ್ನುತ್ತಿದ್ದ ಇಂದಿರಮ್ಮನವರ ಕಣ್ಣುಗಳಿಂದ ನೀರಿನ ಮಹಾಪೂರವೇ ಹರಿಯತೊಡಗಿತ್ತು.

'ಈಗಲೂ ಈ ಪಾಪಿಯನ್ನು ಸ್ವೀಕರಿಸಲು ಸಿದ್ಧಳಿದ್ದೀಯಾ?'

'ಸ್ವೀಕರಿಸುವುದೇನು ಬಂತು? ತ್ಯಜಿಸಿದ್ದರಲ್ಲವೆ ಸ್ವೀಕರಿಸುವುದು? ನೀವು ಸದಾ ಸರ್ವಥಾ ನನ್ನ ಹೃದಯದಲ್ಲಿ ವಿರಾಜಮಾನರಾಗಿದ್ದೀರಿ. ನಿತ್ಯವೂ ನಿಮ್ಮನ್ನು ಮನಸ್ಸಿನಲ್ಲಿ ಆರಾಧಿಸುತ್ತಲೇ ಇರುತ್ತೇನೆ. ಆದರೆ, ನಿಮ್ಮ ಕೃತಿ ಮಾತ್ರ ನನ್ನನ್ನು ಸದಾ ಸುಡುತ್ತಿರುತ್ತದೆ. ನಿಃಸ್ವಾರ್ಥ ಪ್ರೀತಿ ಪ್ರತಿಫಲಾಕ್ಷೆಯನ್ನು ಬಯಸುವುದಿಲ್ಲವಲ್ಲವೆ? ನನ್ನ ವಿಶ್ವ ಈ ಜನ್ಮದಲ್ಲೇ ನನ್ನ ಕಣ್ಣ ಮುಂದೆ ಕಂಗೊಳಿಸಿದರಲ್ಲ!'

'ನಾನಿಂದು ತೀರ ಅನಾಥ. ನನ್ನಲ್ಲಿ ಏನೇನೂ ಇಲ್ಲ. ಸಂಸಾರ ಕಳೆದುಕೊಂಡ ಮೇಲೆ ಹುಚ್ಚನಂತೆ ಎಲ್ಲೆಲ್ಲೋ ಅಲೆದೆ ಮನಃಶ್ಯಾಂತಿ ಸಿಕ್ಕಲಿಲ್ಲ, ಕೊನೆಗೆ ನಿನಗೆ ಶರಣು ಬಂದರೇನೇ ನನ್ನ ಅಶಾಂತಿಗೆ ಮುಕ್ತಿ ಎಂದು ತಿಳಿದು ಬಂದೆ.

'ನನ್ನನ್ನು ಸನಾಥಳನ್ನಾಗಿಸಲು ಬಂದೆನೆನ್ನಿರಿ. ನನ್ನಂತಹ ನಿರ್ಭಾಗ್ಯೆಗೆ ಇನ್ನೇನು ಬೇಕು?'

'ನಿರ್ಭಾಗ್ಯ? ನಿನ್ನಂತ ಸಂಪನ್ನ ನಾರಿ ನೀನೊಬ್ಬಳೇ ಸರಿ ಇಂದು!'

ಇಂದಿರಮ್ಮನವರು ಅವರ ಕಾಲಿಗೆರಗಿದರು, ಆತ ಆಕೆಯ ಬಾಹುಗಳನ್ನು ಹಿಡಿದೆತ್ತಿ ಆಕೆಯ ಮುಂದೆ ತಲೆಬಾಗಿಸಿದರು.

ದೂರದಲ್ಲಿ ನಿಂತು ಈ ದೃಶ್ಯವನ್ನು ಕಂಡ ರಾಜಮ್ಮ ಬಾಯ್ದೆರೆದು ಕಲ್ಲಾಗಿ ನಿಂತಳು!

೨

ಇಂದಿರಮ್ಮನ ಮೆದುಳಿನಲ್ಲಿ ಐವತ್ತು ವರ್ಷಗಳ ಹಿಂದಿನ ಘಟನೆಗಳು ಮಿಂಚಿನ ವೇಗದಲ್ಲಿ ಸುಳಿಯತೊಡಗಿದವು. ಕಾಲೇಜಿನ ಆ ದಿನಗಳು! ಅಲ್ಲಿಯ ವಾತಾವರಣ ಆಕೆಗೆ ಕೊಂಚವೂ ಹಿಡಿಸುತ್ತಿರಲಿಲ್ಲ. ಇಂದುಮತಿ ಭಾರತೀಯ ಸಂಸ್ಕೃತಿಯ ಸಮಾಧಿಯನ್ನು ಕಂಡಳು ಅಲ್ಲಿ. ಪರಮತೀಯರ ಉಡುಗೆ ತೊಡುಗೆಗಳಲ್ಲಿ ದೇಹದ ಉಬ್ಬು ತಗ್ಗುಗಳನ್ನು ಕೊಂಚವೂ ನಾಚಿಕೆಯಿಲ್ಲದೆ ಪ್ರದರ್ಶಿಸುತ್ತ, ಅದನ್ನು ಆಸಕ್ತಿಯಿಂದ ನೋಡುವ ವಿದ್ಯಾರ್ಥಿಗಳ ಮೇಲೆ ಅಪವಾದ ಹೊರಿಸುತ್ತ ಪತಂಗದಂತೆ ಹಾರಾಡುತ್ತಿದ್ದ ಸಹಪಾಠಿ ವಿದ್ಯಾರ್ಥಿನಿಯರ ಒಡನಾಟ ತನಗೆ ಒಗ್ಗದ ಕಾರಣ ಯಾರಲ್ಲೂ ಬೆರೆಯದೆ ತನ್ನ ಪಾಡಿಗೆ ತಾನು ಸಂಕೋಚದಿಂದ ತರಗತಿಯಲ್ಲಿ ಕುಳಿತು ಶ್ರದ್ಧೆಯಿಂದ ಪಾಠಗಳನ್ನು ಗಮನಿಸುವುದಷ್ಟೆ ತನ್ನ ಕರ್ತವ್ಯವೆಂದು ತಿಳಿಯುತ್ತಿದ್ದ ತನ್ನನ್ನು 'ಹಳ್ಳಿಯ ಗುಗ್ಗು' ಎಂದು ಹಾಸ್ಯ ಮಾಡುತ್ತಿದ್ದಾಗ ತಾನು ಕುಗ್ಗುತ್ತಿದ್ದ ಬಗೆ, ಕಳ್ಳ ನೋಟದಿಂದ ಸಹಪಾಠಿಗಳನ್ನು ನೋಡುತ್ತಿದ್ದಾಗಲೆಲ್ಲ ತನ್ನ ಕುರಿತು ಪಿಸು ಮಾತುಗಳನ್ನಾಡಿ ಲೇವಡಿ ಮಾಡುತ್ತಿದ್ದ ಹುಡುಗಿಯರ ಸಾಲನ್ನು ದಿಟ್ಟಿಸುತ್ತಿದ್ದಾಗ ಗಮನಕ್ಕೆ ಬರುತ್ತಿದ್ದ ವಿದ್ಯಾರ್ಥಿಗಳ ಸಾಲಿನ ಒಂದು ಜತೆ ಕಣ್ಣುಗಳು ಆ ಕಣ್ಣುಗಳ ಒಡೆಯನೇ ವಿಶ್ವನಾಥನೆಂದು ಅರಿವಾದುದು, ಮುಂದಾತ ತನಗೆ ವಿಶ್ವನಾದ ಬಗೆ! ಮಧ್ಯಾಹ್ನ ಊಟದ ಬಿಡುವಿನ ವೇಳೆಯಲ್ಲಿ ತಾನು ಊಟದ ಕೊಠಡಿಯನ್ನು ಸೇರದೆ ಶಾಲೆಯ ಆವರಣದ ಒಂದು ಗಿಡದ ಮರೆಯಲ್ಲಿ ತನ್ನ ಊಟವನ್ನು ಮುಗಿಸುತ್ತಿದ್ದ ಪರಿಪಾಠವನ್ನಿಟ್ಟುಕೊಂಡುದಕ್ಕೂ ಹುಡುಗಿಯರು ಹಾಸ್ಯ ಮಾಡುತ್ತ 'ಮುಟ್ಟಿದರೆ ಮುನಿ' ಎಂದು ತನಗಿಟ್ಟ ಅಡ್ಡ ಹೆಸರು.... ಎಲ್ಲ ನೆನಪಾಯಿತು ಇಂದಿರಮ್ಮನವರಿಗೆ.

ಒಂದು ಮದ್ಯಾಹ್ನ ನಿತ್ಯದಂತೆ ಡಬ್ಬವನ್ನು ಬಿಚ್ಚುತ್ತಿದ್ದಾಗ 'ನಮಸ್ತೆ ಇಂದಿರಾ!' ಎಂಬುದನ್ನು ಕೇಳಿ ಬೆಚ್ಚಿ ಮುಖವೆತ್ತಿ ನೋಡಿದಾಗ, ವಿಶ್ವನಾಥ ಮುಗುಳು ನಗುತ್ತ ನಿಂತಿದ್ದ. ನಾಚಿ ನೀರಾದಳು ಇಂದಿರಾ.

'ನನಗೆ ಸ್ವಲ್ಪ ಪಾಲು ಕೊಡಬಹುದೆ' ಕೇಳಿದನಾತ.

ತನ್ನ ಬಡತನದ ಊಟವನ್ನಾತ ಮೆಚ್ಚಲಾರನೆಂಬ ಅರಿವಿದ್ದರೂ 'ಅವಶ್ಯ, ಕೊಳ್ಳಿ!' ಎಂದು ಡಬ್ಬವನ್ನು ಆತನ ಮುಂದಿಟ್ಟಳು ಇಂದುಮತಿ.

'ಸುಮ್ಮನೆ ಕೇಳಿದೆ. ನನ್ನ ಊಟ ಆಗಲೇ ಮುಗಿದಿದೆ. ಮುಖ್ಯ ನಿಮ್ಮಲ್ಲಿ ಮಾತನಾಡಲು ಸಂದರ್ಭ ಕಾಯುತಿದ್ದೆ. ಇಂದು ಸಿಕ್ಕಿತು. ಮಾತನಾಡಲು ಏನಾದರೂ ನೆಪಬೇಕು ತಾನೆ?

'ಏನು ಮಾತನಾಡುವುದಿತ್ತು?'

'ಅಂದಿನಿಂದಲೂ ಗಮನಿಸುತ್ತಿದ್ದೇನೆ ನಿಮ್ಮನ್ನು, ನೀವು ಅಲೌಕಿಳೆಂದು ಏಕೋ ನನ್ನ ಮನಸ್ಸಿಗನ್ನಿಸಿದೆ. ನಿಮ್ಮಲ್ಲಿ ಸ್ನೇಹ ಬೆಳೆಸಬೇಕೆಂಬ ಆಸೆಯಾಗಿದೆ. ಒಪ್ಪಿಗೆಯೇ?'

ಹೀಗೆ ಸಾಗಿತ್ತು ಸ್ನೇಹ. ಕಾಲೇಜಿಗೆ ಸೇರಿದ ಮೊದಲಿನಿಂದಲೂ ಏಕೋ ತನ್ನ ಮನಸ್ಸನ್ನು ಆಕರ್ಷಿಸಿದ್ದ. ಉಳಿದ ವಿದ್ಯಾರ್ಥಿಗಳಂತೆ ಹುಡಗಿಯರನ್ನು ಛೇಡಿಸದೆ, ಮೇಲೆ ಬಿದ್ದು ಮಾತನಾಡುವ ಗೋಜಿಗೆ ಹೋಗದೆ ಗಂಭೀರವಾಗಿದ್ದ ಆತನ ರೀತಿ ಮನಸ್ಸಿಗೆ ತುಂಬಾ ಹಿಡಿಸಿತ್ತು. ದಿನಗಳೆದಂತೆ ಗೌಪ್ಯವಾಗಿ ಅವರ ಸ್ನೇಹ ಚಿಗುರಿ ಮರವಾಗತೊಡಗಿತ್ತು.

ಒಂದು ಸಂಜೆ ಕಾಲೇಜು ಬಿಟ್ಟೊಡನೆ, ಪದ್ಧತಿಯಂತೆ ಸಮೀಪದಲ್ಲಿದ್ದ ಮಾರುತಿ ಗುಡಿಯಲ್ಲಿ ಸುತ್ತುವರಿಯುತ್ತಿದ್ದಾಗ, 'ಇಂದೂ!' ಎಂಬ ಕರೆ ಕೇಳಿ ಹೊರಳಿ ನೋಡಿದಳು. ವಿಶ್ವನಾಥ ನಗುತ್ತ ತನ್ನತ್ತ ವೇಗದಿಂದ ಬರುತ್ತಿದ್ದ. 'ಯಾವ ಜನ್ಮದ ಋಣವಿದು ಇಂದೂ! ಹಗಲಿರುಳೂ ಮನಸ್ಸು ನಿನ್ನನ್ನೇ ನೆನೆಯುತ್ತಿದೆ. ಇಂದು ಶನಿವಾರ. ನಿನ್ನ ಭೇಟಿ ನಿಶ್ಚಯವಾಗಿ ಗುಡಿಯಲ್ಲಾಗಬಹುದೆಂಬ ನಂಬಿಕೆಯಿಂದ ಇಲ್ಲಿಗೆ ಬಂದೆ.'

'ಏಕೆ ಅಲ್ಪಳಾದ ನನ್ನಲ್ಲಿ ಈ ರೀತಿಯ ಆಸಕ್ತಿ?'
'ನೀನು ನನ್ನ ಜನ್ಮದ ಸಹಭಾಗಿಯಾಗಬೇಕೆಂದು ನನ್ನ ಬಯಕೆ?'
'ಉಂಟೆ? ನೀವೆಲ್ಲಿ, ನಾನೆಲ್ಲಿ! ನಿಮ್ಮ ಹೆತ್ತವರು ಸಮ್ಮತಿಸಿಯಾರೇನು?'
'ಒಬ್ಬನೇ ಮಗನಾದ ನನ್ನ ಆಕಾಂಕ್ಷೆಯನ್ನು ಅವರು ಎಂದೂ ಚಿವುಟಲಾರರು.'
'ನೀವು ಲಕ್ಷಾಧೀಶರ ಮಗ. ನಾನು ಬಡ ಬ್ರಾಹ್ಮಣನ ಮಗಳು. ನನ್ನನ್ನು ಸೊಸೆಯನ್ನಾಗಿ ಸ್ವೀಕರಿಸಿಯಾರೆ?
'ನನ್ನ ಪತ್ನಿಯಾದ ಮೇಲೆ ಅವರ ಸೊಸೆಯಾಗಲೇ ಬೇಕಲ್ಲವೆ? ಅವರ ಸೊಸೆ ಭಿಕಾರಿ ಏಕಾದಳು?'

'ನಂಬಲೆ ನಿಮ್ಮನ್ನು? ಬಡವರಿಗೆ ಆಸೆ ಹುಟ್ಟಿಸಿ ಮೋಸ ಮಾಡುವುದು ಮಹಾಪಾಪ!'

'ನಾವು ನಿಂತ ಸ್ಥಳವಾವುದು? ಸ್ವಾಮಿ ಸಾಕ್ಷಿಯಾಗಿಯೂ ಮೋಸ ಮಾಡಲಾರೆ. ಬಾ, ಈಗಲೇ ನಾನು ಆಂಜನೇಯ ಸ್ವಾಮಿಯ ಮುಂದೆ ನನ್ನ ಸಂಕಲ್ಪವನ್ನು ಅರಿಕೆ ಮಾಡುವೆ. ಆತ ನಮ್ಮ ಕೈ ಬಿಡಲಾರ'

ಐವತ್ತು ವರ್ಷಗಳ ಹಿಂದಿನ ಅಂದು, ಇಂದಿರಮ್ಮನ ಮನಃಪಟಲದ ಮುಂದೆ ಹಸಿರಾಗಿ ಹರಿದಾಡಿತು. ಆಂಜನೇಯ ಸ್ವಾಮಿಯ ಮುಂದೆ ಕೈಹಿಡಿದೆಳೆದೊಯ್ದಿದ್ದ ವಿಶ್ವ. ಭಕ್ತರ ದಟ್ಟಣೆಯಿರಲಿಲ್ಲ. ಅರ್ಚಕರು ಅರ್ಚನೆಯಲ್ಲಿ ನಿರತರಾಗಿದ್ದರು. ದೇವರ ಮುಂದೆ ಇಂದುವನ್ನು ನಿಲ್ಲಿಸಿದ ವಿಶ್ವ. ಪಾವಟಿಗೆಯ ಮೇಲೆ ಕೈಯೂರಿ ತಗ್ಗಿದ ದನಿಯಲ್ಲಿ 'ಇಂದೂ, ಕಾಯಾ, ವಾಚಾ, ಮನಸಾ ನಾತಿಚರಾಮಿ, ಇದಕ್ಕೆ ಶ್ರೀ ಮಾರುತಿಯೇ ಸಾಕ್ಷಿ. ಪ್ರಪಂಚದ ಎಲ್ಲಾ ಸ್ತ್ರೀಯರೂ ನನಗೆ ಮಾತೃ ಸಮಾನರು. ನೀನೊಬ್ಬಳೇ ನನಗೆ ದೇವರಿತ್ತ ನನ್ನ ಅರ್ಧಾಂಗಿ. ಇದು ಸತ್ಯ, ನಂಬು. ಈ ಮಾತನ್ನು ಮರೆತಂದು ನಾನು ಮೃತನಾದೆನೆಂದು ತಿಳಿ. ನನ್ನನ್ನು ತೊರೆ. ಮಾತಿಗೆ ತಪ್ಪಿದ ಪಾಪಿಯನ್ನು ಕನಸಿನಲ್ಲೂ ಚಿಂತಿಸಬೇಡ. ಆದರೆ, ನಂಬು. ನಿನ್ನನ್ನು ತೊರೆದು ನಾನೆಂದೂ ಬಾಳಲಾರೆ. ಇದು ಮೂರು ಬಾರಿಗೂ ಸತ್ಯ.

ಮೈ ಮರೆತಿದ್ದರು ಇಂದಿರಮ್ಮ. ತಾನೂ ಅದೇ ರೀತಿ ಪ್ರಮಾಣ ಮಾಡಿದ್ದರು. 'ನನ್ನ ಪ್ರೀತಿ ನಿಜವಾದರೆ ನೀವೆಂದೂ ನನ್ನನ್ನು ತೊರೆಯಲಾರಿರಿ. ಪ್ರಾಣದೇವರಾಣೆಯಾಗಿಯೂ ಈ ಜನ್ಮದಲ್ಲಿ ನಿಮ್ಮ ಹೊರತು ಯಾರನ್ನೂ ಸ್ಮರಿಸಲಾರೆ. ಏಳು ಜನ್ಮಗಳಲ್ಲೂ ನೀವೇ ನನ್ನ ಪತಿ. ಮತ್ತೆಲ್ಲಾ ಗಂಡಸರು ನನಗೆ ಅಣ್ಣ, ತಮ್ಮ ಪಿತೃ ಸಮಾನರು.

ಕೈ ಕುಲುಕಿ ಬಿಡುವು ಪಡೆದ ಇಂದಿರಾ ಮನೆ ಸೇರಿದಾಗ, ಆಕೆಯ ತಾಯಿ ಶಾಂತಮ್ಮನವರು 'ಏನೆ ಇಂದಿರಾ, ಬಹಳ ಉಲ್ಲಾಸದಿಂದಿರುವಂತೆ ಕಾಣುತ್ತಿರುವಿ?' ಎಂದು ಕೇಳಿದರು.

'ಓ, ನನ್ನ ಜನ್ಮ ಸಾರ್ಥಕವಾಯಿತಮ್ಮ!'

'ಏನು, ಏನಾಯಿತು?'

'ಬಂದೆ ಕೈಕಾಲು ತೊಳೆದು ಬಟ್ಟೆ ಬದಲಾಯಿಸಿ ಬರುತ್ತೇನೆ' ಎಂದಾಕೆ ಬಚ್ಚಲಿಗೆ ಹೋಗಿ ಶುಚಿರ್ಭೂತಳಾಗಿ ಬಂದು ತನ್ನ ಆನಂದದ ಕಾರಣವನ್ನು ತಾಯಿಯಲ್ಲಿ ಸಂಕೋಚದಿಂದ ವಿವರಿಸಿದಳು.

'ಅಮ್ಮ, ನಿಮ್ಮ ಮೊರೆ ದೇವರಿಗೆ ಕೇಳಿಸಿದೆ. ಹಗಲಿರುಳೂ ನನ್ನ ಮುಂದಿನ ಬಾಳಿನ ಬಗೆಗೆ ಚಿಂತಿಸುತ್ತಿದ್ದ ನಿಮ್ಮ ಭಾರವನ್ನು ಶ್ರೀ ಆಂಜನೇಯ ಸ್ವಾಮಿ ವಹಿಸಿಕೊಂಡಿದ್ದಾನೆ. ಬೆಳೆಯುವ ಹೆಣ್ಣು ಮನಸ್ಸಿನ ಹುಣ್ಣು ಎಂದು ಅಪ್ಪಯ್ಯನಲ್ಲಿ ನೀನು ಎಷ್ಟೋ ಬಾರಿ ಆಡುತ್ತಿದ್ದ ಮಾತನ್ನು ನಾನು ಕೇಳಿದ್ದೇನೆ. ಬಡವರ ಹೆಣ್ಣು ರೂಪವತಿ, ವಿದ್ಯಾವತಿಯಾಗಿದ್ದರೂ, ದಕ್ಷಿಣೆಯಿಲ್ಲದೆ ಆಕೆಯನ್ನು ಸ್ವೀಕರಿಸುವ ಗಂಡು ಈ ಕಾಲದಲ್ಲಿಲ್ಲ. ಕನ್ಯಾಸೆರೆ ಬಿಡಿಸುವ ಬಗೆ ಹೇಗೆಂದು ಚಿಂತಿಸುತ್ತಾ ಆಂಜನೇಯ ಸ್ವಾಮಿಯನ್ನು ಪ್ರತಿ ದಿನ ಪ್ರಾರ್ಥಿಸುತ್ತಿದ್ದೀಯಲ್ಲವೆ? ನಿನ್ನ ಪ್ರಾರ್ಥನೆಗೆ ಓಗೊಟ್ಟಿರುವ ನಾತ.

'ಏನಮ್ಮ ಆಡುತ್ತೀ? ಅರ್ಥವಾಗಲೊಲ್ಲದು. ಬಿಡಿಸಿ ಹೇಳಮ್ಮ!'

'ನಿಮಗೆ ಯಾವ ಭಾರವನ್ನೂ ಹಿರಿಸದೆ ಆ ಪ್ರಾಣೇಶನೇ ನನ್ನ ಮದುವೆಯ ಭಾರವನ್ನು ಈ ದಿನ ಹೊತ್ತನಮ್ಮ! ಅನಾಯಾಸವಾಗಿ ನಿಮಗೆ ಕನ್ಯಾದಾನದ ಪುಣ್ಯವನ್ನು ಕರುಣಿಸಿದನಲ್ಲಾ ಎಂಬುದೇ ನನ್ನ ಉಲ್ಲಾಸಕ್ಕೆ ಕಾರಣ.'

'ಏನಿದು ಒಗಟು?'

'ಒಗಟೆ? ಬಿಡಿಸಲೆ? ನಾನು ಇಂದಿನಿಂದ ಸಾಹುಕಾರ ಶ್ರೀನಿವಾಸರಾಯರ ಸೊಸೆ.

'ಏನು ಬುದ್ಧಿ ಸ್ವಾಧೀನದಲ್ಲಿದೆಯೇನೆ?'

ನೋಡಮ್ಮಾ ಜನ್ಮಾಂತರದ ನಂಟು ಮೇಲು ಕೀಳುಗಳನ್ನು ನೋಡುವುದಿಲ್ಲ. ಬ್ರಹ್ಮ ಸೃಷ್ಟಿಯಲ್ಲಿ ಪ್ರತಿ ಹೆಣ್ಣಿಗೊಂದು ಗಂಡು ಹುಟ್ಟಿರುತ್ತದೆ. ಯೋಗವೊದಗಿದಾಗ ಅವರು ಜೊತೆಗೂಡುತ್ತಾರೆ' ಎನ್ನುತ್ತ ಇಂದಿರಾ ತನ್ನ ಮತ್ತು ವಿಶ್ವನ, ಸ್ನೇಹ ಮತ್ತು ಮಾಡಿದ ಪ್ರಮಾಣವನ್ನು ತಾಯಿಗೆ ವಿವರಿಸಿದಳು.

ಶಾಂತಮ್ಮ ರೇಗಿದರು. 'ಹುಚ್ಚಿ, ಸಂಪನ್ನರ ಬಲೆಯ ಶಿಕಾರಿಯಾಗಬೇಡ, ಅದನ್ನೆಲ್ಲ ನಂಬಿ ಕೆಡಬೇಡ. ಹಣದ ಬಲದಿಂದ ಸಂಪನ್ನರು ಎಷ್ಟೋ ಸಂಸಾರವನ್ನು ಸರ್ವನಾಶದೆಡೆಗೆ ಸಾಗಿಸಿದುದನ್ನು ನಾನು ಬಲ್ಲೆ. ಅನನುಭವಿ ನೀನು ಜಾಗ್ರತೆ. ಬಣ್ಣದ ಮಾತುಗಳನ್ನು ನಂಬಿ ಹೃದಯವನ್ನು ಬಲಿಗೊಡಬೇಡ.

ಆ ರಾತ್ರಿ ಗೋಪಾಲಭಟ್ಟರು ಮನೆಗೆ ಮರಳಿದಾಗ ಹುಡುಗಿಯ ಹುಚ್ಚಾಟವನ್ನು ಪತಿಗೆ ತಿಳಿಸಿದರು. ಶಾಂತಮ್ಮ ಮಗಳನ್ನು ಕರೆದರು ಭಟ್ಟರು. 'ಏನೇ ಅದು ನಿನ್ನಮ್ಮ ಹೇಳುತ್ತಿರುವುದು?'

'ಅದೆಲ್ಲ ನಿಜ ಅಪ್ಪಯ್ಯ!'

'ಅಷ್ಟು ಧೈರ್ಯ ಬಂತೆ ನಿನಗೆ? ಏನೋ ಓದಿಕೊಳ್ಳಲಿ ಮುಂದೆ ಜೀವನಕ್ಕೆ ದಾರಿಯಾದೀತೆಂದು ಹಗಲು ರಾತ್ರಿ ಬೆಂಕಿಯ ಮುಂದೆ ಕುಳಿತು ಬೆವರಿಳಿಸಿ ದುಡಿದು ನಿನ್ನನ್ನು ಕಾಲೇಜು ಮೆಟ್ಟಲು ಹತ್ತಿಸಿದುದಕ್ಕೆ ಸಾರ್ಥಕವಾಯಿತು ಬಿಡು.'

'ಅಪ್ಪಯ್ಯ, ರೇಗಬೇಡಿ ಇದರಲ್ಲಿ ಧೈರ್ಯವೇನು ಬಂತು? ನಾನೇನು ಮುಗ್ಧ ಹಸುಳೆಯೆ? ಮನುಷ್ಯರು ಮನುಷ್ಯರನ್ನು ನಂಬಬಾರದೆ?'

'ಇದು ಕಲಿಕಾಲ ಇಂದು!'

'ವಿವೇಕದಿಂದ ಕಲಿಕಾಲವನ್ನು ಮೆಟ್ಟಿ ನಿಲ್ಲಬಾರದೆಂದಿಲ್ಲ ಅಪ್ಪಯ್ಯ!'

'ಮುಚ್ಚು ಬಾಯಿ! ನಮ್ಮ ಸ್ಥಿತಿಗತಿಗಳನ್ನು ಅರಿತೇ ಆತ ನಿನ್ನನ್ನು ಬುಟ್ಟಿಗೆ ಹಾಕಿಕೊಳ್ಳಲು ಹವಣಿಸಿದ್ದಾನೆ. ಜಾಗ್ರತೆ!'

'ಅವರು ಅಂತವರಲ್ಲ ಅಪ್ಪಯ್ಯ! ಅವರನ್ನು ಚೆನ್ನಾಗಿ ಅರಿತುಕೊಂಡಿದ್ದೇನೆ.'

'ಬಹಳ ಜ್ಞಾನಿ ನೀನು. ಇನ್ನೂ ಹುಳಿವಿಂಡಿಯಾಗಿರುವ ನಿನಗೆ ಜೀವನದ ಕಹಿ ಸಿಹಿಗಳ ಅರಿವಿಲ್ಲ. ಬಣ್ಣದ ಮಾತುಗಳಿಗೆ ಮರುಳಾಗಬೇಡ. ಬಾಳು ಮರುಭೂಮಿಯಾದೀತು?'

'ಆಂಜನೇಯನ ಮುಂದೆ ಪ್ರಮಾಣಪೂರ್ವಕ ವಿಶ್ವನಾಥನನ್ನು ವರಿಸಿದ್ದಾಳಂತೆ ನಿಮ್ಮ ಮಗಳು!' ಶಾಂತಮ್ಮ ನಡುವೆ ನುಡಿದರು.

'ಏನೇ? ಗೊಂಬೆಯಾಟದ ಪ್ರಾಯವೆ ಇದು ನಿನ್ನದು' ಗರ್ಜಿಸಿದರು ಗೋಪಾಲಭಟ್ಟರು.

ಪ್ರಪಂಚದ ಮುಂದೆ ಕಣ್ಣು ತೆರೆಯುತ್ತಿದ್ದ ತನಗೆ ಹಲವು ಹಗಲಿರುಳುಗಳನ್ನು ಕಂಡ ತಂದೆಯ ಮಾತು ಅಂದು ಅವರ ಪ್ರತಿ ಜಿಗುಪ್ಸೆ ಮೂಡಿಸಿತ್ತು. ಆದರೆ ಅದೆಷ್ಟು ಸತ್ಯವಾಗಿ ಹೋಗಿತ್ತು!.

೩

ಒಂದು ದಿನ, ನಿಯಮದಂತೆ ಮಧ್ಯಾಹ್ನ ಬಿಡುವಿನ ವೇಳೆಯಲ್ಲಿ ಭೆಟ್ಟಿಯಾಗಿದ್ದ ವಿಶ್ವನ ಮುಖ ಅದೇಕೋ ಅಂದು ಕಂದಿಹೋಗಿತ್ತು. ಗಾಬರಿಯಿಂದ ನುಡಿದ 'ಇಂದೂ, ನಾನು ನಿರಪರಾಧಿ ನನ್ನನ್ನು ದಯವಿಟ್ಟು ಕ್ಷಮಿಸಲಾರೆಯ?'

'ಏಕೆ ಏನಾಯಿತು?'

'ನಾವು ನಮ್ಮಷ್ಟಕ್ಕೆ ಬೆಸೆದುಕೊಂಡಿರುವಾಗ ನನ್ನಲ್ಲಿ ಒಂದು ಮಾತೂ ಕೇಳದೆ ನಮ್ಮ ಹಿರಿಯರು ಎಂದಿನಿಂದಲೋ ಪ್ರಸ್ತಾಪಿಸಿದ್ದ ಮಾತುಕತೆಯನ್ನು ಮುಂದುವರೆಸಿ, ತಮ್ಮ ಅಂತಸ್ತಿಗೆ ಸರಿ ಜೋಡಿಯಾದ ರಾಮಕೃಷ್ಣರಾಯರ ಮಗಳನ್ನು ತಂದು ಕೊಳ್ಳುವುದಾಗಿ ಮಾತು ಕೊಟ್ಟಿದ್ದಾರಂತೆ. ಈಗೇನು ಮಾಡಲಿ? ನನ್ನ ಹೃದಯದ ರಾಣಿ ನೀನೇ ಎಂಬುದನ್ನು ತಿಳಿಸುವ ಸಂದರ್ಭವೇ ನನಗೆ ಸಿಕ್ಕಲಿಲ್ಲ. ಹಿರಿಯರ ಮಾತಿಗಾಗಿ ಈ ಸಂಬಂಧವನ್ನು ಒಪ್ಪಿಕೊಳ್ಳದೆ ಗತ್ಯಂತರವಿಲ್ಲ. ಮನೆತನದ ಗೌರವವನ್ನು ಹಾಳು ಮಾಡುವ ದುಷ್ಪುತ್ರನಾಗಲೆ? ನೀನು ಇದಕ್ಕೊಪ್ಪಲಾರೆ. ನಾನೀಗ ಕತ್ತರಿಯಲ್ಲಿ ಸಿಕ್ಕ ಅಡಿಕೆಯಾಗಿದ್ದೇನೆ, ವಿವಶನಾಗಿದ್ದೇನೆ ಇಂದೂ!'

'ನಿಮಗೆ ದೇವರ ಭಯವಿಲ್ಲವೆ?' ನಡುಗಿದ ದನಿಯಲ್ಲಿ ಕೇಳಿದಳು ಇಂದು.

'ದೇವರಿರುತ್ತಿದ್ದರೆ ಇಂತ ಪರಿಸ್ಥಿತಿಯನ್ನೊಡ್ಡುತ್ತಿದ್ದರೆ? ನಾನು ನಿರಪರಾಧಿ.'

'ಇಷ್ಟು ಆತ್ಮದಾರ್ಢ್ಯವಿಲ್ಲದ ನೀವು ಪ್ರಾಣದೇವರ ಮುಂದೆ ಪ್ರಮಾಣವೇಕೆ ಮಾಡಬೇಕಿತ್ತು?'

'ಅದು ನನ್ನ ನಿಜವಾದ ಅಭಿಪ್ರಾಯವಾಗಿತ್ತು. ಅದಕ್ಕೆ ಅನುವು ಮಾಡಿಕೊಡಬೇಕಾದುದು ದೇವರ ಧರ್ಮವಲ್ಲವೆ?'

'ನನ್ನನ್ನು ಜೀವಂತ ಕೊಂದಿರಿ ವಿಶ್ವ. ನಾನು ನಿಮ್ಮನ್ನು ಮನಸಾ ವರಿಸಿದ್ದೇನೆ. ಮಾತ್ರ ಎಂದು ಪ್ರಮಾಣ ಮಾಡಿ ಒಪ್ಪಿದಾಕೆಯನ್ನು ನೀವು ವಿವಾಹವಾಗಲಿದ್ದೀರಿ. ನಾನು ಮಾತ್ರ ಅಂತ ಪಾಪ ಕೃತ್ಯವನ್ನೆಸಗಲಾರೆ, ನಂಬಿ'

'ಕಾಲವೆಲ್ಲವನ್ನೂ ಮರೆಸುತ್ತದೆ ಇಂದೂ! ಮದುವೆಯಾಗದೆ ಸ್ನೇಹವನ್ನುಳಿಸಿಕೊಳ್ಳಲಾಗದೆ?'

‘ಛೀ, ಅದು ಕೈಹಿಡಿದಾಕೆಗೆ ಎಸಗುವ ದ್ರೋಹ. ಅದಕ್ಕೆ ಶಿಕ್ಷೆ ಧರ್ಮಶಾಸ್ತ್ರ ಪ್ರಕಾರ ರೌರವ ನರಕ.’

‘ಅದೆಲ್ಲ ಪುರಾಣದ ಕಂತೆ. ಕಂಡವರಾರು? ಪ್ರಪಂಚದ ಪ್ರವಾಹದಲ್ಲಿ ತೇಲದೆ ಗತ್ಯಂತರವಿಲ್ಲ. ಏನೇ ಆಗಲಿ, ನಾನು ಕೊಟ್ಟ ಮಾತನ್ನು ತಪ್ಪುವವನಲ್ಲ. ನನ್ನ ಹೃದಯ ದೇವತೆ ನೀನೇ ಆಗಿರುತ್ತೀ. ಮದುವೆಯೊಂದು ಲೌಕಿಕ ಸಮಾರಂಭ. ಇದೀಗ ನಾನು ಪರಿಸ್ಥಿತಿಯ ಕೈಗೂಸಾಗಿರುವೆ. ಸಮಾಜದಲ್ಲಿ ಒಂದು ಅಂತಸ್ತನ್ನು ಪಡೆದಿರುವ ಗೃಹಸ್ಥನ ಒಬ್ಬನೇ ಮಗ, ತಂದೆಯ ಮಾತನ್ನು ಕಡೆಗಣಿಸಿದ ಕುಲಕುಠಾರ ಎಂಬ ಅಪವಾದವನ್ನು ಹೊತ್ತು ಬಾಳುವ ಧೈರ್ಯ ನನಗಿಲ್ಲ. ಅವರು ನನಗೆ ಜನ್ಮವಿತ್ತುದೇನೋ ನಿಜ. ಅವರ ಪೋಷಣೆಯಿಂದ ಈ ದೇಹ ಬೆಳೆದಿದೆ. ಆದರೆ ನನ್ನ ಆತ್ಮಕ್ಕೆ ನಾನೇ ಯಜಮಾನ. ಅದು ಎಂದೆಂದೂ ನಿನ್ನದಾಗೇ ಉಳಿಯುವುದು.’

‘ಬಡವಳಾದ ಮಾತ್ರಕ್ಕೆ ನಾನು ಸಮಾಜವನ್ನು ಕಡೆಗಣಿಸಬೇಕೆಂದು ನಿಮ್ಮ ಅಭಿಪ್ರಾಯವೆ? ನೀವು ಗೃಹಸ್ಥರಾಗಿದ್ದು ನನ್ನಲ್ಲಿ ಸ್ನೇಹವಿಟ್ಟುಕೊಂಡರೆ ಸಮಾಜ ನನ್ನನ್ನು ಏನೆಂದೀತು? ನನಗಿನ್ನು ಜೀವನದಲ್ಲಿ ದಿಕ್ಕೇ ಇಲ್ಲದಂತಾಯಿತಲ್ಲ!’

‘ನೋಡು ಇಂದು, ಮನಸಾ ಇಚ್ಛಿಸಿ ನಾವು ಮಾಡುವ ಕಾರ್ಯದಿಂದ ಮಾತ್ರ ಪಾಪ ಅಂಟುತ್ತದೆ. ನಮ್ಮಿಬ್ಬರ ಆತ್ಮದ ನಂಟನ್ನು ಯಾವ ಕ್ರಿಯೆಯೂ ಬೇರ್ಪಡಿಸದು. ದೇಹ ನಶ್ವರ. ನಾನು ನಿರ್ಬಂಧದಿಂದ ಪತ್ನಿಯನ್ನಾಗಿ ಸ್ವೀಕರಿಸುವಾಕೆ ನನ್ನ ದೇಹಕ್ಕೆ ಸಂಬಂಧ ಪಡುವಳೇ ಹೊರತು ಆತ್ಮಕ್ಕಲ್ಲ. ಅಂತೆಯೇ ನೀನು ನನ್ನವಳಾಗಿದ್ದು ಬಾಳನ್ನು ಸಾಗಿಸಲು ಸ್ವತಂತ್ರಳಾಗಿರುವಿ. ಎಂದೆಂದಿಗೂ ನಾನು ನಿನ್ನವನೇ ನಂಬು. ಫಲಾಪೇಕ್ಷೆಯಿಲ್ಲದ ಪ್ರೀತಿಯೇ ನಿಜವಾದ ಪ್ರೀತಿ. ದೈಹಿಕ ಸಂಬಂಧವಿಲ್ಲದೆ ನಾವು ಪರಸ್ಪರರನ್ನು ಪ್ರೀತಿಸಲು ಸಾಧ್ಯವಿಲ್ಲವೆ? ಜೀವನದಲ್ಲಿ ನಿಜವಾದ ಪ್ರೀತಿ ಪ್ರಕಟವಾಗುವುದು ಒಮ್ಮೆ ಮಾತ್ರ. ಅದೂ ಪವಿತ್ರವಾದ ಒಂದು ಸುಮುಹೂರ್ತದಲ್ಲಿ. ನಿನ್ನ ಪ್ರೀತಿ ನನ್ನಲ್ಲುದಿಸಿ ಪ್ರೀತಿಗೆ ಯಾವ ಪರಿಸ್ಥಿತಿಯಲ್ಲೂ ಅಳಿವಿಲ್ಲ. ನಿನ್ನ ವಿಶ್ವನಿಗೆ ವಿವಾಹವಿಲ್ಲ. ಆತನ ದೇಹಕ್ಕೆ ಮಾತ್ರ ಎಂದು ತಿಳಿ.’

‘ಅಯ್ಯೋ, ನಿಮ್ಮ ಈ ವ್ಯಾಖ್ಯೆಯಿಂದ ನಿಮ್ಮನ್ನು ಸರ್ವಸ್ವವೆಂದು ನಂಬಿದಾಕೆಯ ಬಾಳನ್ನು ಹಾಳುಗೆಡಹುವಿರಾ?’

‘ಇಲ್ಲ, ನನ್ನ ಪತ್ನಿಯಲ್ಲಿ ನಿನ್ನನ್ನೇ ಕಾಣುವೆ, ಅದರಂತೆಯೇ ನೀನು....’

‘ನಿಲ್ಲಿಸಿ!’ ನಡುವೆ ಅರಚಿದಳು ಇಂದು. ‘ನೀವಿಂತಹ ಹೇಡಿಯೆಂದು ನಾನು ಭಾವಿಸಿರಲಿಲ್ಲ. ಇಂತಹ ಸಂದರ್ಭ ಬರಬಹುದೆಂದು ನಾನು ಸಂದೇಹ ಸೂಚಿಸಿದಾಗಲೆಲ್ಲ ನೀವು ಅದೆಷ್ಟು ವಿಧದಿಂದ ನನ್ನನ್ನು ಸಮಾಧಾನಪಡಿಸಿ ಧೈರ್ಯ ತುಂಬುತ್ತಿದ್ದಿರಿ? ಇಷ್ಟುದ್ದ ಬೆಳೆದ ಮಗನಲ್ಲಿ ಯಾವ ವಿಚಾರವನ್ನೂ ಪ್ರಸ್ತಾಪಿಸದೆ ನಿಮ್ಮ ಹಿರಿಯರು ಹೇಗೆ ಮುಂದುವರಿದರೊ! ಅದೂ ಈ ಪ್ರಗತಿ ಯುಗದಲ್ಲಿ!’

‘ನೋಡು ಇಂದು, ಪ್ರಪಂಚದಲ್ಲಿ ಎಲ್ಲರೂ ಅವರವರಷ್ಟಕ್ಕೆ ಅವರು ಸ್ವತಂತ್ರರು. ಸಮಾಜ ನಿಯಮ ಮಾತ್ರ ನಮ್ಮನ್ನು ಪರತಂತ್ರರನ್ನಾಗಿಸುತ್ತದೆ. ನೋಡು, ನಾವು ದೇವರ ಮುಂದೆ ಪ್ರಮಾಣ ಮಾಡಿದಾಗ ನಮ್ಮ ಹಿರಿಯರ ಅನುಮತಿ, ಅಭಿಪ್ರಾಯ ಪಡೆದೆವೇನು? ಆತ್ಮ ಪ್ರೇರಣೆಯಂತೆ ಕಾರ್ಯ ನಡೆದು ಹೋಗುತ್ತದೆ. ದೇವರು ಎಂಬ ಪ್ರೇರಕ ಶಕ್ತಿ, ಅವರವರ ಜೀವಯೋಗ್ಯತೆಗನುಸಾರವಾಗಿ ಒಳ್ಳೆಯದನ್ನೋ, ಕೆಟ್ಟದನ್ನೋ ಮಾಡಿಸುತ್ತದೆ. ಪರಿಸ್ಥಿತಿಗೆ ತಲೆಬಾಗದೆ ಗತ್ಯಂತರವಿಲ್ಲ. ಈ ನಮ್ಮ ದೇಹ ಹಿರಿಯರ ಸ್ವತ್ತು. ಅದನ್ನವರು ತಮಗೆ ಹಿತಕಂಡಂತೆ ಉಪಯೋಗಿಸಿಕೊಳ್ಳಲು ಸ್ವತಂತ್ರರು. ಅಂತೆಯೇ ಮುಂದೆ ನಿನ್ನ ಹೆತ್ತವರು ನಿನಗೊಬ್ಬ ವರನನ್ನು ಗೊತ್ತು ಪಡಿಸಿದಾಗ ನೀನು ಒಲ್ಲೆನೆಂದರೆ ಅವರ ಆತ್ಮಕ್ಕೆ ಆಘಾತವಾಗಲಾರದೆ? ಸಮಾಜ ನಿನ್ನನ್ನು ಗಂಡುಬೀರಿ ಎಂದು ತಿರಸ್ಕರಿಸದೆ?’

‘ನಿಮ್ಮ ವೇದಾಂತ ಸಾಕು ಮಾಡಿ. ನಿಮ್ಮನ್ನು ನನ್ನ ಪ್ರಾಣೇಶನ ಮುಂದೆ ಪ್ರಾಣವತಿಯಾಗಿ ಸ್ವೀಕರಿಸಿಯಾಗಿದೆ. ಅದನ್ನು ಹಿರಿಯರ ಮುಂದೆ ನಿಮ್ಮಂತೆ ಒಪ್ಪಿಕೊಳ್ಳಲಾಗದ ಹೇಡಿ ನಾನಾಗಲಿಲ್ಲ. ಬಿಡು ವಿಶ್ವ, ಇನ್ನು ಮುಂದೆ ನಾವು ಏಕಾಂತದಲ್ಲಿ ಭೇಟಿಯಾಗಬಾರದು. ವಿಶ್ವನಿಲ್ಲದ ವಿಶ್ವವೇ ನನಗೆ ಶೂನ್ಯವಾಗಲಿದೆ’ ಎಂದವಳೇ ಭರದಿಂದ ಸರಿದಿದ್ದಳು ಇಂದಿರಾ.

ಆ ದಿನವೆಲ್ಲಾ ಬೆಂಕಿಯಲ್ಲಿ ಬಿದ್ದ ಹುಳದಂತೆ ಚಡಪಡಿಸಿದ್ದಳಾದರೂ ತನ್ನ ಮನಸ್ಸಿನ ಆಂದೋಲನವನ್ನು ಹಿರಿಯರ ಗಮನ ಬಾರದಂತೆ ಜಾಗ್ರತೆ ವಹಿಸಿದ್ದಳು ಇಂದಿರಾ. ಜೀವನವಿಡೀ ಈ ಆಘಾತವನ್ನು ಸಹಿಸಿ ಬಾಳುವ ಶಕ್ತಿ ತನಗೆ ಸಾಲದೆಂದು ಬಗೆದು ಜೀವನವನ್ನೇ ಅಂತ್ಯಗೊಳಿಸುವ ಸಂಕಲ್ಪ ಮಾಡಿದಳು. ಅಂದು ನಡುನಿಶಿಯಲ್ಲಿ ತನ್ನ ದೃಢ ನಿರ್ಧಾರವನ್ನು ಕಾರ್ಯಗತ ಮಾಡಿಕೊಳ್ಳಲೆಂದು ಮನೆಯವರು ಗಾಢ ನಿದ್ರೆಯಲ್ಲಿರುವುದನ್ನು ಖಚಿತಪಡಿಸಿ, ಮೆಲ್ಲನೆದ್ದು ಮನೆಯ ಹಿಂಬಾಗಿಲನ್ನು ತೆರೆದು ಹೊರ ಬಿದ್ದವಳೇ ಹುಚ್ಚಿಯಂತೆ ಮಾರುತಿ ಗುಡಿಯನ್ನು ತಲುಪಿದಳು. ಗುಡಿಯ ಆವರಣದಲ್ಲಿ ಗಾಢಾಂಧಕಾರ ಕವಿದಿತ್ತು. ಗರ್ಭಗೃಹದ ಮುಚ್ಚಿದ ಬಾಗಿಲ ಮೆಟ್ಟಿಲಲ್ಲಿ ತಲೆಯೂರಿ ಬಿಕ್ಕಿ ಬಿಕ್ಕಿ ಅತ್ತಳು. ತನ್ನ

ಸಂಕಲ್ಪವನ್ನು ಈಡೇರಿಸಿ ಮುಕ್ತಿಕೊಡುವಂತೆ ಪ್ರಾರ್ಥಿಸಿದಳು. ಗುಡಿಯ ಪಾರ್ಶ್ವದ ಸರೋವರದಲ್ಲಿ ಆತ್ಮಾರ್ಪಣೆ ಮಾಡುವುದಾಗಿ ನಿರ್ಧರಿಸಿ ನಿಧಾನವಾಗಿ ಸರೋವರದ ಮೆಟ್ಟಿಲನ್ನು ಇಳಿಯತೊಡಗಿದಾಗ ಏನೋ ಸದ್ದಾಗಿ ಬೆಚ್ಚಿ ಹಿಂತಿರುಗಿ ನೋಡಿದಾಗ 'ನಿಲ್ಲು ಮಗಳೇ, ಏನಿದು ನಿನ್ನ ಕೆಲಸ! ಯಾರು ನೀನು?' ಎಂಬ ನುಡಿ ಕೇಳಿ ಹೌಹಾರಿದಳು. ಪ್ರಜ್ಞೆ ತಪ್ಪಿತ್ತು. ಎಚ್ಚೆತ್ತಾಗ ತನಗೆ ಶೈತ್ಯೋಪಚಾರ ಮಾಡುತ್ತಿದ್ದ ವ್ಯಕ್ತಿಯನ್ನು ಭಯಮಿಶ್ರಿತ ಆಶ್ಚರ್ಯದಿಂದ ದಿಟ್ಟಿಸಿದಳು. ಅವರೊಬ್ಬ ಕಾವಿಧಾರಿಯಾಗಿದ್ದರು.

'ಸಾವಧಾನ! ಜೀವನದಲ್ಲಿ ಜಿಗುಪ್ಸೆ ತಳೆದು ದೇವರಿತ್ತ ದೇಹವನ್ನು ನಾಶಗೊಳಿಸುವ ಅಧಿಕಾರ ನಮಗಿಲ್ಲ. ಯಾಕೆ ನಿನ್ನ ಈ ಪ್ರವೃತ್ತಿ?'

ಇಂದು ಬಿಕ್ಕುತ್ತಾ ತನ್ನ ಆತ್ಮಕ್ಕಾದ ಆಘಾತವನ್ನು ವಿವರಿಸಿದಳು, 'ಯಾಕೆ ನನ್ನ ಪ್ರಯತ್ನಕ್ಕೆ ಅಡ್ಡಿ ಬಂದಿರಿ ಸ್ವಾಮೀಜಿ! ನನ್ನಿಂದ ಈ ವಂಚನೆಯನ್ನು ಸಹಿಸಲಾಗುತ್ತಿಲ್ಲ. ಆಯುಷ್ಯವಿಡೀ ಈ ಬೆಂಕಿಯಲ್ಲಿ ಉರಿದು ಕ್ಷಣೇ ಕ್ಷಣೇ ಸಾಯುವುದಕ್ಕಿಂತ ಒಮ್ಮೆಲೇ ಅಂತ್ಯಗೊಳಿಸುವುದೆಂದು ತೀರ್ಮಾನಿಸಿದೆ. ತಪ್ಪೆ?'

'ತಪ್ಪು! ಮೂರು ಬಾರಿಗೂ ತಪ್ಪು. ಮನುಷ್ಯರು ಇಷ್ಟು ಸ್ವಾರ್ಥಿಯಾಗಬಾರದು. ನಿನ್ನ ಕ್ಷುದ್ರ ಆನಂದಕ್ಕೆ ಧಕ್ಕೆ ಬಂದಿತೆಂದು ಪರಮಾನಂದ ಪಡೆಯಲು ಸಾಧ್ಯತೆಯಿರುವ ಈ ಜೀವನವನ್ನು ಅಂತ್ಯಗೊಳಿಸುವುದು ಹೇಡಿತನ. ನಾವು ನಮಗಾಗಿ ಬದುಕುವುದರಲ್ಲಿ ಅರ್ಥವಿಲ್ಲ. ಅದು ಮೃಗ ಜೀವನ, ಮಾನವಜನ್ಮ ಎಷ್ಟು ದೊಡ್ಡದು! ಎಷ್ಟು ಜನ್ಮಗಳ ಪುಣ್ಯ ಸಂಚಯದಿಂದ ಲಭಿಸಿದೆ ಇದು! ಶಾಂತಳಾಗು! ನೀನು ಭಾಗ್ಯವತಿ. ನಮ್ಮದೊಂದು ಅನಾಥ ಸೇವಾಶ್ರಮವಿದೆ. ಅಲ್ಲಿ ನಿನ್ನಂತ ಹಲವಾರು ಮಂದಿ ಜೀವನದ ಅರ್ಥವನ್ನು ಕಂಡುಕೊಂಡು ಸುಖವಾಗಿದ್ದಾರೆ. ಅಂತ್ಯಗೊಳಿಸಲು ಬಯಸಿದ ಈ ನಿನ್ನ ಜೀವ ಈಗ ಆಶ್ರಮದ ಸ್ವತ್ತು! ಅಲ್ಲಿ ನೀನು ನಿನ್ನನ್ನರಿತು ಶಾಂತಿಯನ್ನು ಹೊಂದುವಿ! ಶ್ರೀ ಮಾರುತಿಯ ಇಚ್ಛೆ ಇದು. ಅಂತಿರದಿದ್ದರೆ ನಾನು ಇಂದು ಇಲ್ಲಿರಬೇಕಿತ್ತೆ?

ಸಾಷ್ಟಾಂಗವೆರಗಿ ಮನಸಾ ಅತ್ತಳು ಇಂದು. 'ಅಷ್ಟು ಭರವಸೆ ಇತ್ತು ದೇವರ ಮುಂದೆ ನನ್ನನ್ನು ವರಿಸಿದ ಆತನನ್ನು ಹೇಗೆ ಮರೆಯಲಿ ಸ್ವಾಮೀಜಿ?'

'ಆಶ್ರಮದಲ್ಲಿರುವ ನಿನ್ನಂತ ಹಲವು ಪರಿತ್ಯಕ್ತೆಯರಲ್ಲಿ ಆತನನ್ನು ಕಾಣುವ ಪ್ರಯತ್ನದಿಂದ ನೀನು ಶಾಂತಿ ಪಡೆಯಬಹುದು.'

ಅನಂತರ..... ಅವರೊಂದಿಗೆ ಮನೆಗೆ ತೆರಳಿ, ತಾಯಿ ತಂದೆಯರಿಗೆ ಅವಳು ತನ್ನ ಹುಚ್ಚಾಟವನ್ನು ತಿಳಿಸಿ, ಅವರನ್ನು ಒಲಿಸಿ, ಆಶ್ರಮ ಸೇರಿದ್ದಳು. ಎಂದೂ ಮಗಳನ್ನು ಬಿಟ್ಟಿರಲಾರದ ಅವರೂ ಆಶ್ರಮವಾಸಿಗಳಾಗುವ ಇಚ್ಛೆಯನ್ನು ಪ್ರಕಟಿಸಿದುದರಿಂದ ಅವರೂ ಆಶ್ರಮವಾಸಿಗಳಾದರು. ಪ್ರಕೃತಿ ನಿಯಮದಂತೆ ಯೋಗಿಗಳು ಅವಸಾನ ಹೊಂದುವಾಗ ಆಶ್ರಮದ ಭಾರವನ್ನು ತನಗೆ ವಹಿಸಿದ್ದರು.

ಐವತ್ತು ವರ್ಷಗಳ ಹಿಂದಿನ ಘಟನೆ ಇದೀಗ ತಾನೆ ನಡೆಯುತ್ತಿರುವಂತೆ ಭಾಸವಾಗಿ ನಡುಗಿದರು ಇಂದಿರಮ್ಮ. ಹೃದಯದಲ್ಲಿ ಬೆಂಕಿ ಭುಗಿಲೆದ್ದ ಅನುಭವದಿಂದ ತತ್ತರಿಸಿದಳು.

ಮೌನವಾಗಿದ್ದ ಅವರನ್ನು ಕಂಡು 'ಏನು ಯೋಚಿಸುತ್ತಿರುವಿ?' ಕೇಳಿದರಾತ. 'ಹಿಂದಿನ ಆ ದಿನಗಳನ್ನು!' 'ಕ್ಷಮಿಸು ಇಂದು!'

'ಕ್ಷಮಿಸಿದ್ದೇನೆ, ಅನಾಥನೆನ್ನುತ್ತೀರಿ. ನಮ್ಮ ಆಶ್ರಮ ನಿಮಗೆ ಆಶ್ರಯ ಕೊಡುತ್ತಿದೆ. ಆದರೆ ಒಂದು, ಮುಂದೆ ಎಂದೂ ನನ್ನನ್ನು ಕಾಣಲು ಬಯಸಬಾರದು. ನನ್ನ ಜೀವ ಪ್ರಾಣವಾಗಿದ್ದ ವಿಶ್ವ, ವಿಶ್ವಾಸಘಾತುಕನಾಗಿ ನನ್ನ ಕಣ್ಣ ಮುಂದೆ ಸುಳಿಯಬಾರದು. ಆಶ್ರಮದಲ್ಲಿ ನಿಮ್ಮ ಕೈಲಾದ ಸೇವೆ ಸಲ್ಲಿಸಿ ಶಾಂತಿ ಪಡೆಯಲು ಪ್ರಯತ್ನಿಸಿ. ನಿಮ್ಮನ್ನು ಕಂಡಾಗಲೆಲ್ಲ ನನ್ನಲ್ಲಿ ರಾಗ-ದ್ವೇಷಗಳ ಸಂಘರ್ಷ ನಡೆಯಬಹುದು. ಅದರಿಂದ ನನ್ನ ಮನಃಶಾಂತಿ ಕಲಕಬಹುದು. ನೀವು ನನ್ನ ಆತ್ಮೋದ್ಧಾರಕರು, ನಿಮ್ಮ ಘಾತುಕತನದಿಂದ ನಾನು ಇಂದಿನ ಪುನೀತ ಪರಿಸ್ಥಿತಿಯನ್ನು ಪಡೆದೆ. ಇಲ್ಲದಿರುತ್ತಿದ್ದರೆ ಸಾಮಾನ್ಯ ಗೃಹಿಣಿಯಾಗಿ ಹತ್ತರೊಂದಿಗೆ ಹನ್ನೊಂದಾಗಿ ಹೋಗುತ್ತಿದ್ದೆ. ನೀವು ನನ್ನವರು ನಿಜ. ಆದರೆ ಮಾತೃಗಾಮಿಗಾಮಿಗಳಾದ ನಿಮ್ಮ ದರ್ಶನ ಪುನಃ ನನಗಾಗಬಾರದು' ಎಂದವರೆ ರಾಜಮ್ಮನನ್ನು ಕರೆದು 'ಇವರು ನಮ್ಮ ಆಶ್ರಮದಲ್ಲಿ ಆಶ್ರಯ ಪಡೆಯಲಿಚ್ಛಿಸಿದ್ದಾರೆ. ಇವರನ್ನು ಕರೆದೊಯ್ದು ಕಾರ್ಯದರ್ಶಿಗಳಿಗೆ ಭೇಟಿ ಮಾಡಿಸು' ಎಂದು ಆಜ್ಞಾಪಿಸಿ, ಅಲ್ಲಿಂದೆದ್ದು ತಮ್ಮ ಕೊಠಡಿಗೆ ತೆರಳಿದರು. ಅವಾಕ್ಕಾಗಿ ನಿಂತರಾ ಗೃಹಸ್ಥ.

‘ದಯವಿಟ್ಟು ನನ್ನೊಂದಿಗೆ ಬನ್ನಿ ಕಾರ್ಯದರ್ಶಿಗಳ ಭೇಟಿ ಮಾಡಿಸುತ್ತೇನೆ’ ಎಂದಳು ರಾಜಮ್ಮ.

‘ನನಗಿನ್ನು ಈ ಪ್ರಪಂಚದಲ್ಲಿ ಎಲ್ಲೂ ಸ್ಥಾನವಿಲ್ಲ. ಅಂದು ಆಕೆ ಮಾಡಿದ ನಿರ್ಧಾರವನ್ನೇ ಇಂದು ನಾನು ಮಾಡಲಿದ್ದೇನೆಂದು ನಿನ್ನ ಯಜಮಾನಿಗೆ ತಿಳಿಸಿ, ನನ್ನ ಇಹ ಜನ್ಮದ ಉದ್ದಂಡ ನಮಸ್ಕಾರವನ್ನು ಆಕೆಗೆ ಅರ್ಪಿಸು’ ಎನ್ನುತ್ತಾ ಬರದಿಂದ ಅಲ್ಲಿಂದ ಹೊರಬಿದ್ದರಾ ಗೃಹಸ್ಥ.

ನಡೆದುದೆಲ್ಲಾ ಸ್ವಪ್ನವೋ ಸತ್ಯ ಘಟನೆಯೋ ಎಂಬುದನ್ನು ರಾಜಮ್ಮನಿಂದ ಇಂದಿಗೂ ಊಹಿಸಲಾಗಲಿಲ್ಲ.

**ಕತೆಗಾರ್ತಿಯ ಪರಿಚಯ:** ಸರಸ್ವತಿಬಾಯಿ ರಾಜವಾಡೆ ಗಿರಿಬಾಲೆ ಎಂಬ ಅಂಕಿತದಿಂದ ಸಾಹಿತ್ಯ ರಚಿಸಿದ್ದಾರೆ. (೧೯೧೩–೧೯೯೪, ಉಡುಪಿ) ತಮ್ಮ ಕತೆಗಳಲ್ಲಿನ ರೂಕ್ಷ ಚಿತ್ರಣ, ಬಂಡಾಯದ ನೆಲೆಗಳಿಂದ ಇವರು ಪ್ರಸಿದ್ಧರು. ಇವರ ಕೃತಿಗಳು : ಆಹುತಿ ಇತ್ಯಾದಿ ಕತೆಗಳು, ಕದಂಬ, ಪ್ರೇಮವಿವಾಹ.

**ಪ್ರಶ್ನೆಗಳು:**

೧. ಇಂದಿರಮ್ಮನ ಪಾತ್ರ ಚಿತ್ರಣ ನೀಡಿ.

೨. ಆಗಂತುಕ ಬಂದ ಕಾರಣವೇನು?

೩. ‘ಗಿರಿಬಾಲೆ’ಯವರ ಮೂಲ ಹೆಸರೇನು?

# ೩. ಆಹಾರವೆಂಬ ಆಯುಧ

**–ನಾಗೇಶ ಹೆಗಡೆ**

**ಆಶಯ:** ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಇಂದು ಕೃಷಿ ಒಂದು ಬೃಹತ್ ಉದ್ದಿಮೆಯಾಗಿ ಪರಿವರ್ತನೆಯಾಗಿದೆ. ಆಧುನಿಕ ಕೃಷಿ ಪದ್ಧತಿಯ ಪರಿಣಾಮವಾಗಿ ಆಹಾರದ ಉತ್ಪಾದನೆಯಲ್ಲಿ ಅಪಾರವಾದ ಹೆಚ್ಚಳವುಂಟಾಗಿದೆ. ಆದರೆ ಇದರಿಂದ ಬಡಜನರ ಹಸಿವಿನ ಸಮಸ್ಯೆ ನಿವಾರಣೆಯಾಗದಿರುವುದು ಮಾತ್ರ ದುರಂತವೇ ಸರಿ. ಆಹಾರೋತ್ಪಾದನೆಯಲ್ಲಿ ಅದ್ವಿತೀಯ ಸಾಧನೆ ಮಾಡಿರುವ ಪಾಶ್ಚಾತ್ಯ ಶ್ರೀಮಂತ ರಾಷ್ಟ್ರಗಳು ಆಹಾರವನ್ನೇ ತಮ್ಮ ರಾಜಕೀಯ ಹಾಗೂ ವಾಣಿಜ್ಯ ಹಿತಾಸಕ್ತಿ ಸಾಧನೆಯ 'ಆಧುನಿಕ ಆಯುಧ'ವಾಗಿ ಉಪಯೋಗಿಸುತ್ತಿವೆ. ಆಹಾರದ ಅಸಮತೋಲನ ಹಾಗೂ ಅಲಭ್ಯತೆ ಸಮಕಾಲೀನ ಜಗತ್ತಿನ ಒಂದು ಬಹುದೊಡ್ಡ ಸಮಸ್ಯೆಯಾಗಿದೆ. ಇದು ನಿಸರ್ಗ ನಿರ್ಮಿತವಾದುದಾಗಿರದೆ ಮನುಷ್ಯ ಸೃಷ್ಟಿಸಿರುವುದು ಎನ್ನುವುದು ಆತಂಕದ ವಿಚಾರವಾಗಿದೆ. ಜಗತ್ತಿನ ಶ್ರೀಮಂತ ರಾಷ್ಟ್ರಗಳು ಹಾಗೂ ಧನಿಕರು ಆಹಾರವನ್ನು ಪೋಲು ಮಾಡುತ್ತಿದ್ದರೆ; ಬಡದೇಶಗಳ ನಿರ್ಗತಿಕರು ತುತ್ತು ಕೂಳಿಗೂ ಗತಿಯಿಲ್ಲದೆ ಪರದಾಡುತ್ತಿದ್ದಾರೆ. ಈ ಸ್ಥಿತಿಯನ್ನು ಶೀಘ್ರವಾಗಿ ಕೊನೆಗಾಣಿಸಿ ಎಲ್ಲರಿಗೂ ಅಗತ್ಯಪ್ರಮಾಣದಲ್ಲಿ ಉತ್ತಮ ಆಹಾರ ದೊರೆಯದಂತೆ ಮಾಡದಿದ್ದರೆ 'ಅಭಿವೃದ್ಧಿ' ಎನ್ನುವ ಪದಕ್ಕೆ ಯಾವುದೇ ಅರ್ಥವಿಲ್ಲ.

ಭೂಮಿಯ ಜನಸಂಖ್ಯೆ ೫೦೦ ಕೋಟಿ ತಲುಪಿದ ದಿನ, ಅಂದರೆ ೧೯೮೭ ರ ಜುಲೈ ೧೧ರ ರಾತ್ರಿ ನಮ್ಮ ದೂರದರ್ಶನದಲ್ಲಿ ಒಂದು ಹೃದಯಸ್ಪರ್ಶಿ ವಾರ್ತಾದೃಶ್ಯ ಪ್ರಸಾರವಾಯಿತು. ಕೊಳೆತು ನಾರುತ್ತಿರುವ ಒಂದು ಗುಡ್ಡೆ ಅಹಾರ ಪದಾರ್ಥಗಳನ್ನು ಬುಲ್‌ಡೋಝರ್‌ನಿಂದ ಯಾರೋ ಹಳ್ಳಕ್ಕೆ ತಳ್ಳುತ್ತಿದ್ದರು. ಹಾಳುಮೂಳು, ಮಣ್ಣುಮಸಿ ಮಿಶ್ರಿತ ಆ ಕೊಳಕನ್ನು ಕೆದಕಲು ಹಳ್ಳದಲ್ಲಿ ನಿಂತ ಮೂಳೆಚಕ್ಕಳಗಳ ಚಿಳ್ಳೆಪಿಳ್ಳೆಗಳು ಮುತ್ತಿಗೆ ಹಾಕಿದ್ದರು.

ನಾಯಿ, ಕಾಗೆ, ಹಂದಿ, ಚಿಂದಿ–ಆಯುವ ಮನುಷ್ಯ ಎಲ್ಲ ಒಟ್ಟಾಗಿ ಕಸದ ತೊಟ್ಟಿಯನ್ನು ಕೆದಕುವ ದೃಶ್ಯ ನಮ್ಮ ದೇಶದಲ್ಲಿ ಅಂಥ ಅಪರೂಪದ್ದೇನಲ್ಲ. ಆದರೆ ಬುಲ್‌ಡೋಝರ್ ಮೂಲಕ ತಳ್ಳಬೇಕಾದಷ್ಟು ಭಾರೀ ಪ್ರಮಾಣದಲ್ಲಿ ಆಹಾರ ಪದಾರ್ಥ ಪೋಲಾಗುವುದು ಎಲ್ಲಿ?

ನಮ್ಮ ಅಂತರಾಳವನ್ನು ಮೀಟುವ ಇನ್ನಷ್ಟು ಅಂಥದೇ ದೃಶ್ಯಗಳನ್ನು ಅದೇ ವಾರ ನ್ಯೂಯಾರ್ಕನ 'ನ್ಯೂಸ್ ವೀಕ್' ಪತ್ರಿಕೆ ಪ್ರಕಟಿಸಿತು. ಬಿಸಾಕುವ ಮುಂಚೆ ಶೀತಾಗಾರದಲ್ಲಿ ಹೆಪ್ಪುಗಟ್ಟಿಸಿ ಪೇರಿಸಿಟ್ಟ ಸಹಸ್ರ ಸಂಖ್ಯೆಯ ದನಗಳ ಹೆಣಗಳು (ಬೀಫ್), ಬೆಣ್ಣೆ ಗಿಣ್ಣದ ರಾಶಿಗಳು; ವಾಸನೆ ಬಾರದಂತೆ ರಸಾಯನ ಸುರುವುತ್ತ ಬೂಟುಗಾಲಿನಲ್ಲಿ ತರಕಾರಿ ರಾಶಿಯನ್ನು ತುಳಿಯುತ್ತಿರುವ ಕಾರ್ಮಿಕರು; ಕಾರ್ಖಾನೆಯ ಉತ್ಪಾದನೆಯಂತೆ ಚಲಿಸುವ ಪಟ್ಟಿಯ ಮೂಲಕ ಸೇಂಗಾ ಬೀಜದ ಗುಡ್ಡೆಯನ್ನೇ ಸುರಿಯುವ ಯಂತ್ರಗಳು.

ಆಹಾರ ಪ್ರಪಂಚದ ಇಂಥ ವಿರೋಧಾಭಾಸಗಳಿಗೆ ಕೊನೆ ಮೊದಲಿಲ್ಲ. ಭೂಮಿಯ ಮೇಲಿನ ಎಲ್ಲರೂ ತಿಂದು ತೇಗಬಹುದಾದಷ್ಟು ದವಸಧಾನ್ಯ ಪ್ರತಿವರ್ಷವೂ ಉತ್ಪಾದನೆ ಆಗುತ್ತಿದೆ. ಆದರೂ ಪ್ರತಿವರ್ಷ ಇಥಿಯೋಪಿಯಾ, ಸುಡಾನ್, ಅಂಗೋಲಾ, ಬಾಂಗ್ಲಾದೇಶ, ಮೊಝಾಂಬಿಕ್ ಮುಂತಾದ ದೇಶಗಳಲ್ಲಿ ಸುಮಾರು ಒಂದೂವರೆ ಕೋಟಿ ಜನರು ಹಸಿವೆಯಿಂದ ಆಸು ನೀಗುತ್ತಾರೆ. ಇದರ ಮೂರುಪಟ್ಟು ಹೆಚ್ಚು ಜನರು ಅರೆಹೊಟ್ಟೆಯಿಂದ ನಿತ್ರಾಣರಾಗಿ ದಿನ ನೂಕುತ್ತಾರೆ.

ಅಷ್ಟೆಲ್ಲ ಧಾನ್ಯ, ದವಸ, ಬೆಣ್ಣೆ ಮಾಂಸಗಳನ್ನು ಹಾಳುಮಾಡುವ ಬದಲು ಬಡರಾಷ್ಟ್ರಗಳಿಗೆ ದಾನ ಕೊಡಬಾರದೇಕೆ? ಅಥವಾ ಮುಂದಿನ ವರ್ಷ ಆಹಾರ ಉತ್ಪಾದನೆಯನ್ನು ಕಮ್ಮಿ ಮಾಡುವಂತೆ ರೈತರಿಗೆ ಹೇಳಬಾರದೇಕೆ?

ಇವೆರಡೂ ಕ್ರಮಗಳು ಸಾಧ್ಯವೇ ಇಲ್ಲ ಎನ್ನುವಷ್ಟರಮಟ್ಟಿಗೆ ಧನಿಕ ಪ್ರಪಂಚದ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿವೆ. ಇನ್ನೂ ಹೆಚ್ಚು ಬೆಳೆ ಬೆಳೆಯುವಂತೆ ರೈತರನ್ನು ಹುರಿದುಂಬಿಸಲಾಗುತ್ತಿದೆ. ಏಕೆಂದರೆ ಬೆಳೆ ಕಮ್ಮಿ ಮಾಡಿದರೆ ಬಲಾಢ್ಯ ಬಹುರಾಷ್ಟ್ರೀಯ ಕಂಪನಿಗಳ ರಸಗೊಬ್ಬರ, ಕೀಟನಾಶಕ, ಹೈಬ್ರಿಡ್ ಬೀಜ, ತೈಲ ಮತ್ತು ಯಂತ್ರೋಪಕರಣಗಳ ಮಾರಾಟ ಕಡಿಮೆಯಾಗಿ ಶೇರುಬೆಲೆ ಕುಸಿಯುತ್ತದೆ. ಹಾಗಾಗದಂತೆ ಅವು ಸರಕಾರಗಳ ಮೇಲೆ ನಿರಂತರ ಒತ್ತಡ ಹೇರುತ್ತಿವೆ.

ವಿಜ್ಞಾನ–ತಂತ್ರಜ್ಞಾನದಿಂದಾಗಿ ಕೃಷಿಕ್ಷೇತ್ರದಲ್ಲಿ ಅದ್ಭುತ ಪ್ರಗತಿಯಾದುದರ ವಿಕೃತ ಫಲ ಇದು. ಅಮೆರಿಕ, ಆಸ್ಟ್ರೇಲಿಯಾ ಮತ್ತು ಐರೋಪ್ಯ ರಾಷ್ಟ್ರಗಳು ಆಗಲೇ ಅಧಿಕ ಇಳುವರಿಗೆ ಹೆಸರಾಗಿವೆ. ಈಗ ಭಾರತ, ಚೀನಾ, ಮೆಕ್ಸಿಕೊ, ಬ್ರೆಝಿಲ್‌ನಂಥ ರಾಷ್ಟ್ರಗಳೂ ಹಸುರು ಕ್ರಾಂತಿಯ ನೆರವಿನಿಂದ ತಮ್ಮ ದೇಶಕ್ಕೆ ಬೇಕಾಗುವಷ್ಟು ಆಹಾರವನ್ನು ತಾವೇ

ಬೆಳೆದುಕೊಳ್ಳುತ್ತಿವೆ. ಮರಳುಗಾಡಿನ ಸೌದಿ ಅರೇಬಿಯಾದಂಥ ದೇಶ ತನ್ನ ರೈತರನ್ನು ಪುಸಲಾಯಿಸಲೆಂದು ಪೆಟ್ರೋಡಾಲರ್ ಸುರಿದು ಪಾತಾಳಕ್ಕೂ ಕೊಳವೆ ಬಾವಿ ಹಾಕಿಸಿ, ಗೋಧಿಯನ್ನು ಬೆಳೆಸಿ, ಮಾರುಕಟ್ಟೆ ಬೆಲೆಗಿಂತ ನಾಲ್ಕು ಪಟ್ಟು ಹೆಚ್ಚು ಬೆಲೆಗೆ ಖರೀದಿಸಿ ಕೂಡ ಗೋಧಿಯನ್ನು ರಫ್ತು ಮಾಡುತ್ತಿದೆ.

ಹಾಲುಹೈನದ ಉದ್ಯಮದಲ್ಲೂ ಪ್ರಗತಿ ನೋಡಿ : ೧೯೫೦ರಲ್ಲಿ ಅಮೆರಿಕದ ಹಸುಗಳು ಸರಾಸರಿ ೪೫೦೦ ಲೀಟರ್ ಹಾಲು ಕೊಡುತ್ತಿದ್ದವು. ತಳಿವೃದ್ಧಿ ಹಾಗೂ ಮೇವಿನ ಗುಣವರ್ಧನೆಯಿಂದಾಗಿ ಈಗ ಅಲ್ಲಿ ಪ್ರತಿ ಹಸುವಿನಿಂದ ವರ್ಷಕ್ಕೆ ೯೦೦೦ ಲೀಟರ್ ಹಾಲು ಲಭಿಸುತ್ತಿದೆ. ನಮ್ಮಲ್ಲಿ ಸರಾಸರಿ ೨೦೦ ಲೀಟರ್ ಹಾಲು ಸಿಗುತ್ತದೆ. ಅಲ್ಲಿನ ಕೆಲವು ಅಪರೂಪದ ತಳಿಗಳ ಪ್ರತಿ ಹಸುವೂ ವರ್ಷಕ್ಕೆ ೨೨ ಸಾವಿರ ಲೀಟರ್ ಹಾಲು ನೀಡುತ್ತದೆ.

ತಳಿತಂತ್ರಜ್ಞಾನದಿಂದಾಗಿ ಕೃಷಿಯಲ್ಲೂ ಅಪಾರ ಅಭಿವೃದ್ಧಿಯಾಗಿವೆ. ಹೆಚ್ಚು ಇಳುವರಿ ಕೊಡಬಲ್ಲ ರೋಗನಿರೋಧಕ ತಳಿಗಳು; ಒಣನೆಲದಲ್ಲಿ, ಜವುಗು ನೆಲದಲ್ಲಿ, ಉಪ್ಪುನೀರಿನಲ್ಲಿ ಕೂಡ ದಷ್ಟಪುಷ್ಟ ಬೆಳೆಯಬಲ್ಲ ತಳಿಗಳು, ಕುಲಾಂತರಿ ತಳಿಗಳು, ವಿವಿಧ ಬಗೆಯ ರಾಸಾಯನಿಕ ಗೊಬ್ಬರಗಳು, ಕೀಟನಾಶಕ ಹಾಗೂ ಕಳೆನಾಶಕಗಳು, ನೆಲ ಉತ್ತುವುದರಿಂದ ಹಿಡಿದು ಬೀಜ ಬಿತ್ತಿ, ಕಳೆ ಕಟಾವು ಮಾಡಿ, ಡಬ್ಬಿತುಂಬ ಲೇಬಲ್ ಹಚ್ಚುವವರೆಗಿನ ಎಲ್ಲ ಕೆಲಸವನ್ನೂ ಮಾಡುವ ಕೃಷಿಯಂತ್ರಗಳು ಇಂದು ಒಕ್ಕಲುತನವನ್ನೇ ಒಂದು ಬೃಹತ್ ಉದ್ಯಮವನ್ನಾಗಿ ಪರಿವರ್ತಿಸಿವೆ. ಹವಾಮುನ್ಸೂಚನೆ ಅರಿತು, ಮಾರುಕಟ್ಟೆಯ ಏರಿಳಿತ ನೋಡಿಕೊಂಡು, ಧಾನ್ಯದ ಬೀಜವನ್ನು ಆಯ್ಕೆ ಮಾಡಿ, ಮಣ್ಣಿನ ಹದ ನೋಡಿ, ರಸಗೊಬ್ಬರ ಪ್ರಮಾಣ ನಿಗದಿ ಮಾಡಿ, ಇಂತಿಂಥ ದಿನ ಇಂತಿಂಥ ದ್ರಾವಣ ಸಿಂಪರಣೆಗೆ ಸಲಹೆ ನೀಡುವ ಕಂಪ್ಯೂಟರ್‌ಗಳು ನೆಲವನ್ನೇ ಕಾರ್ಖಾನೆಯನ್ನಾಗಿ ಮಾಡಿವೆ. ಇಂಥ ತಾಂತ್ರಿಕ ಪ್ರಗತಿಯಿಂದಾಗಿ ಇಂದು ಅಮೆರಿಕದ ಮೂರು ಸದಸ್ಯರ ಒಂದು ಕುಟುಂಬ ಮೂವತ್ತು ಸಾವಿರ ಹೆಕ್ಟೇರ್ ಭೂಮಿಯಲ್ಲಿ ಫಸಲು ಬೆಳೆಯುತ್ತದೆ. ಇಡೀ ಜಗತ್ತಿನ ದ್ರಾಕ್ಷಿ ಫಸಲಿನ ಅರ್ಧದಷ್ಟನ್ನೂ ಕಿತ್ತಳೆ ಹಣ್ಣಿನ ಕಾಲು ಭಾಗವನ್ನೂ ಅಲ್ಲಿನ ಫ್ಲಾರಿಡಾ ರಾಜ್ಯವೊಂದರಲ್ಲೇ ಬೆಳೆಯಲಾಗುತ್ತದೆ, ಸಾವಿರ ಹೆಕ್ಟೇರ್ ಜಮೀನಿನಲ್ಲಿ ನೆಡಲು ಬೇಕಾದ ಏಕರೂಪದ ಕಿತ್ತಳೆ ಸಸಿಗಳನ್ನು ಅಂಗೈ ಅಗಲದ ಗಾಜಿನ ಬಟ್ಟಲಲ್ಲಿ ಅಂಗಾಂಶ ಕಸಿಯಿಂದ ಸೃಷ್ಟಿಸಲಾಗುತ್ತಿದೆ. ಕೊಂಬೆರೆಂಬೆಗಳು ಅನವಶ್ಯ ಪೋಷಕಾಂಶ ಹೀರಿಕೊಳ್ಳಬಾರದೆಂದು ಸಣಕಲು ಗಿಡಗಳೇ ಕ್ವಿಂಟಾಲ್‌ಗಟ್ಟಲೆ ಹಣ್ಣು ಬಿಡುವಂಥ ತಳಿಮಾರ್ಪಾಟು ಮಾಡಲಾಗಿದೆ. ಮೊಗ್ಗು ಬಿಡುವ ಕಾಲದಲ್ಲಿ ವಿಮಾನದ ಮೂಲಕ ಕೀಟನಾಶಕ ದ್ರವ್ಯಗಳ ಸಿಂಪರಣೆಯಂತೂ ಆಯಿತು; ಹಣ್ಣು ಮಾಗುವ ಸುಗ್ಗಿಯಲ್ಲಿ ನೊಣಗಳ ಹಾವಳಿ ತಗ್ಗಿಸಲೆಂದು ನಪುಂಸಕ ನೊಣಗಳನ್ನು ಆಕಾಶದಿಂದಲೇ ಸುರಿಯುವ ಯತ್ನವೂ ನಡೆದಿದೆ. ಮಿಡತೆಗಳ ದಂಡು ಯಾವ ಕಡೆ ಸಾಗುತ್ತಿದೆ ಎಂಬುದನ್ನು ಉಪಗ್ರಹಗಳ ಮೂಲಕವೇ ಗುರುತಿಸಿ ರೈತರಿಗೆ ಎಚ್ಚರಿಕೆ ನೀಡಲಾಗುತ್ತಿದೆ.

ಆಹಾರವನ್ನು ಬೆಳೆಯುವ ತಂತ್ರದಲ್ಲಷ್ಟೇ ಅಲ್ಲ, ಆಹಾರ ಉತ್ಪಾದನೆಯನ್ನು ನಿಯಂತ್ರಿಸುವ ತಂತ್ರಗಳಲ್ಲೂ ಪಾಶ್ಚಿಮಾತ್ಯ ದೇಶಗಳು ಅಮೋಘ ಪ್ರಗತಿ ಸಾಧಿಸಿವೆ. ಯಾವ ದೇಶದಲ್ಲಿ ಯಾವ ಬೆಳೆಯನ್ನು ಎಷ್ಟು ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ ಎಂಬುದನ್ನು ಬೇಹುಗಾರ ಉಪಗ್ರಹಗಳ ನೆರವಿನಿಂದ ಲೆಕ್ಕ ಹಾಕಿ, ತಮ್ಮ ರೈತರು ಈ ವರ್ಷ ಯಾವ ಫಸಲನ್ನು ಎಷ್ಟು ಜಮೀನಿನಲ್ಲಿ ಬೆಳೆಯಬೇಕೆಂಬ ನಿರ್ದೇಶನವನ್ನೂ ಅಲ್ಲಿಯ ಅಗ್ರಿ ಬಿಸಿನೆಸ್ ಕಂಪನಿಗಳು ಕೊಡುತ್ತವೆ. ಕರಾರುವಕ್ಕಾಗಿ ಈ ವರ್ಷ ಇಂತಿಷ್ಟು ಲಕ್ಷ ಹೆಕ್ಟೇರು ಭೂಮಿಯನ್ನು ಈ ವರ್ಷ ಬೀಳುಬಿಡಬೇಕೆಂದು ಕೃಷಿ ಇಲಾಖೆ ಸಲಹೆ ಮಾಡಿದರೆ ಅಥವಾ ಸೋಯಾ ಬೆಳೆಯನ್ನು ಈ ವರ್ಷ ಇಂತಿಷ್ಟು ಲಕ್ಷ ಟನ್‌ಗಳಿಗೆ ಏರಿಸಬೇಕೆಂದು ಸೂಚಿಸಿದರೆ ಅಲ್ಲಿನ ರೈತರು ಚಾಚೂ ತಪ್ಪದಂತೆ ಅದನ್ನು ಪಾಲಿಸುತ್ತಾರೆ. ಅಷ್ಟದಿಕ್ಪಾಲಕರನ್ನೇ ಬೇಕೆಂಬಂತೆ ದುಡಿಸಿಕೊಂಡು ಮಳೆ, ಗಾಳಿ, ಮಂಜು, ಮೋಡಗಳ ವೈಪರೀತ್ಯಗಳನ್ನೆಲ್ಲ ನಿವಾರಿಸಿಕೊಂಡು ಬೆಳೆ ಬೆಳೆಯುತ್ತಾರೆ. ಸೂಕ್ತ ಬೆಲೆ ಸಿಗುತ್ತೋ ಇಲ್ಲವೋ ಚಿಂತೆ ಇಲ್ಲ. ಏಕೆಂದರೆ ರೈತರಿಗೆ ನಷ್ಟವಾದರೆ ಸರಕಾರವೇ ಹಾನಿಯನ್ನು ತುಂಬಿಕೊಡುತ್ತದೆ. ಬೆಳೆದ ಬೆಳೆಯನ್ನು ತಾನೇ ಖರೀದಿಸಿ ತನಗಿಷ್ಟ ಬಂದ ರಾಷ್ಟ್ರಕ್ಕೆ ತನಗಿಷ್ಟ ಬಂದ ಬೆಲೆಗೆ ಸಾಗಹಾಕುತ್ತದೆ. ಈ ವಿಷಯದಲ್ಲಿ ಅಮೆರಿಕ, ಕೆನಡಾದಷ್ಟೇ ಐರೋಪ್ಯ ರಾಷ್ಟ್ರಗಳೂ ನಿರುಮ್ಮಳವಾಗಿ ತಮ್ಮ ಗಿಣ್ಣ–ಬೆಣ್ಣೆ– ತುಪ್ಪಗಳನ್ನು ಅವುಗಳ ಉತ್ಪಾದನಾ ವೆಚ್ಚದ ಶೇಕಡಾ ೧೦ರಷ್ಟು ಬೆಲೆಗೆ ಆಫ್ರಿಕದ ಇಲ್ಲವೆ ಪಶ್ಚಿಮ ಏಷ್ಯದ ದೇಶಗಳಿಗೆ ರಫ್ತು ಮಾಡುತ್ತವೆ.

ಆಹಾರದ ಅತಿ ಉತ್ಪಾದನೆ ಹಾಗೂ ಅದನ್ನು ನಷ್ಟಕ್ಕೆ ಮಾರುವ ಪೈಪೋಟಿ ಎಷ್ಟು ಗೊಂದಲಮಯವಾಗಿದೆ ಎಂದರೆ ಅಮೆರಿಕದ ಹಿಂದಿನ ಅಧ್ಯಕ್ಷ ರೇಗನ್ ಅವರು 'ಔದ್ಯಮಿಕ ರಾಷ್ಟ್ರಗಳ ಒಗ್ಗಟ್ಟಿಗೆ ಧಕ್ಕೆ ತರಬಲ್ಲ ಏಕಮೇವ ಭಯಾನಕ ಸಮಸ್ಯೆಯಾಗಿ ಈ ಕೃಷಿ ಉದ್ಯಮ ಬೆಳೆಯುತ್ತಿದೆ' ಎಂದು ವೆನಿಸ್ ಶೃಂಗಸಭೆಯಲ್ಲಿ ಹೇಳಿದ್ದರು. ಜರ್ಮನಿಯ

ರೈತಸಂಘದ ಅಧ್ಯಕ್ಷ ಹಿರಿಮನ್, 'ಹೀಗೆ ರಿಯಾಯ್ತಿ ದರದಲ್ಲಿ ಬೇರೆ ರಾಷ್ಟ್ರಗಳ ಮಾರುಕಟ್ಟೆಗೆ ಧಾನ್ಯ ಸುರಿಯುವ ಪೈಪೋಟಿಯಲ್ಲಿ ನಾವು ಪರಸ್ಪರರ ಬೆನ್ನಿಗೆ ಚೂರಿ ಇಕ್ಕುವುದು ಸರಿಯಲ್ಲ' ಎಂದು ಹೇಳಿದ್ದುಂಟು.

ಧನಿಕ ರಾಷ್ಟ್ರಗಳು ಆಹಾರವನ್ನು ಆಯುಧವಾಗಿ ಝಳಪಿಸುವುದೇ ಇಷ್ಟೆಲ್ಲ ಕ್ಲಿಷ್ಟ ವಿರೋಧಾಭಾಸಗಳಿಗೆ ಕಾರಣವಾಗಿದೆ. ಯಾವುದೇ ರಾಷ್ಟ್ರ ತಾನು ಬೆಳೆದ ಆಹಾರವನ್ನು ಬೇರೆ ದೇಶಕ್ಕೆ ಮಕ್ಕಟೆಯಾಗಿ ಇಲ್ಲವೆ ಬಿಸಾಕುಬೆಲೆಗೆ ನೀಡುತ್ತಿದೆಯೆಂದರೆ ಅಲ್ಲಿ ದಯೆ ಧರ್ಮದ ಅಂಶವನ್ನು ನಾವು ಹುಡುಕುವಂತಿಲ್ಲ. ದುರ್ಬಲ ರಾಷ್ಟ್ರಗಳು ತಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಅಂದರೆ ಖನಿಜ, ತೈಲ ಅಥವಾ ಮರಮುಟ್ಟುಗಳನ್ನು ಒತ್ತೆಯಾಗಿ ಇಡಬೇಕು; ಅಥವಾ ಆಹಾರ ಧಾನ್ಯಗಳನ್ನು ನೀಡಿದ ದೇಶದಿಂದಲೇ ಶಸ್ತ್ರಾಸ್ತ್ರಗಳನ್ನು, ಯಂತ್ರೋಪಕರಣಗಳನ್ನು ಖರೀದಿಸಬೇಕು. ಇಲ್ಲವೆ ದಾನ ಸ್ವೀಕರಿಸುವ ರಾಷ್ಟ್ರದ ದೊರೆಗಳು ಅನ್ನದಾತನ ರಾಜಕೀಯ ಧೋರಣೆಗಳಿಗೆ ಬಾಗಿ ನಡೆಯಬೇಕು.

ದೊರೆಗಳು ಬಾಗಿ ನಡೆಯಬೇಕು; ಹಸಿದ ಪ್ರಜೆಗಳು ಧನಿಕ ರಾಷ್ಟ್ರಗಳ ಚದುರಂಗದ ಆಟದ ಪೇದೆಗಳಾಗಬೇಕು.

ಹಸಿವೆಯ ಸ್ವರೂಪ ಎಂಥ ಭಯಾನಕವಾಗಿರುತ್ತದೆ ಎಂಬುದನ್ನು ಇಲ್ಲಿ ವಿವರಿಸುವ ಅಗತ್ಯವಿಲ್ಲ. ಸುಡಾನ್ ದೇಶದಲ್ಲಿ ೧೯೯೩ರ ಬರಗಾಲ ತೀರಾ ಭೀಕರವಾಗಿದ್ದಾಗ ಎಲ್ಲರ ಕರುಳು ಹಿಂಡುವ ಚಿತ್ರವೊಂದು 'ನ್ಯೂಯಾರ್ಕ್ ಟೈಮ್ಸ್' ದಿನಪತ್ರಿಕೆಯಲ್ಲಿ ಪ್ರಕಟವಾಯಿತು. ಒಣ ಬಯಲಿನಲ್ಲಿ ಅಶಕ್ತ ಒಂಟಿ ಮಗುವೊಂದು ಗಂಜೀಕೇಂದ್ರದ ಕಡೆ ತೆವಳಲು ಯತ್ನಿಸಿ ಕುಸಿದಿದೆ. ಮಗು ಸಾಯುವುದನ್ನೇ ಕಾದಿದೆ ಎಂಬಂತೆ ರಣಹದ್ದೊಂದು ತನ್ನ ಊಟಕ್ಕಾಗಿ ಮಗುವಿನ ಹಿಂದೆ ನಿಂತಿದೆ. ಈ ಚಿತ್ರವನ್ನು ಸೆರೆಹಿಡಿದ ಕೆವಿನ್ ಕಾರ್ಟರ್ ಎಂಬಾತನಿಗೆ ಆ ವರ್ಷದ ಪುಲಿಟ್ಜರ್ ಪ್ರಶಸ್ತಿ ಲಭಿಸಿತು. ಮರುವರ್ಷ ಆತನೂ ಖಿನ್ನತೆಯಿಂದಾಗಿ ಆತ್ಮಹತ್ಯೆ ಮಾಡಿಕೊಂಡ. ನಮ್ಮ ಒಡಿಶಾದ ಕಾಲಾಹಂಡಿ ಜಿಲ್ಲೆಯ ಮೂಲನಿವಾಸಿಗಳು ಹಸಿವೆಯ ಬಿಗಿಮುಷ್ಟಿಯಿಂದ ಬದುಕುಳಿಯುವ ಅಂತಿಮ ಯತ್ನವಾಗಿ ಮಣ್ಣನ್ನೇ ಕೊಂಚ ನೀರಿನಲ್ಲಿ ಕಲಕಿ ಕುಡಿಯುತ್ತಿದ್ದುದು ವರದಿಯಾಗಿತ್ತು.

ಅಪಾರ ಧಾನ್ಯದ ಸಮಸ್ಯೆ ತುಂಬ ಜಟಿಲವಾದದ್ದು, ಧನಿಕ ರಾಷ್ಟ್ರಗಳು ನೇರವಾಗಿ ಬಡದೇಶದ ಆಹಾರವನ್ನು ಹಂಚುವಂತಿಲ್ಲ. ಆಯಾ ಸರಕಾರಕ್ಕೆ ನೀಡಬೇಕು. ಈ ಸರಕಾರಗಳು ಧಾನ್ಯವನ್ನು ಪ್ರಜೆಗಳಿಗೆ ಉಚಿತ ಹಂಚುವ ಬದಲು ಬಹುಪಾಲನ್ನು ಮಾರುಕಟ್ಟೆಯಲ್ಲಿ ಮಾರಿ ಹಣ ಸಂಗ್ರಹಿಸುತ್ತವೆ. ಇನ್ನು ಕೆಲವು ಭಾಗವನ್ನು 'ಕೂಲಿಗಾಗಿ ಕಾಳು' ಮಾದರಿಯ ಯೋಜನೆಗೆ ಸುರಿಯುತ್ತವೆ. ಕೊಂಚ ಭಾಗವನ್ನು ಶಾಲಾ ಮಕ್ಕಳ ಉಪಹಾರಕ್ಕೆ ಹಾಗೂ ಅತ್ಯಲ್ಪ ಭಾಗವನ್ನು ಅಪಘಾತ/ದುರಂತಗಳ ತುರ್ತು ಪರಿಹಾರಕ್ಕೆ ಮೀಸಲಾಗಿಡುತ್ತವೆ. ಇವುಗಳಲ್ಲಿ ಒಂದೊಂದೂ ಬಡ ಕೃಷಿಕರನ್ನು ಇನ್ನಷ್ಟು ದುಃಸ್ಥಿತಿಗೆ ತಳ್ಳುತ್ತದೆ. ಉದಾಹರಣೆಗೆ, ಕಡಿಮೆ ಬೆಲೆಯ ವಿದೇಶೀ ಧಾನ್ಯ ಮಾರುಕಟ್ಟೆಗೆ ಬಂದಾಗ ಶ್ರಮಜೀವಿ ರೈತ ಕಂಗೆಡುತ್ತಾನೆ. ಆತ ಕಷ್ಟಪಟ್ಟು ಬೆಳೆದ ದವಸ ಧಾನ್ಯಕ್ಕೆ ಯಾವುದೋ ದೂರ ದೇಶದ ಧಾನ್ಯ ಪೈಪೋಟಿ ಒಡ್ಡುತ್ತದೆ. ರೈತ ತನ್ನ ಧಾನ್ಯವನ್ನು ನಷ್ಟಕ್ಕೆ ಮಾರಬೇಕಾಗುತ್ತದೆ. ಇಲ್ಲವೇ ಗಿರಾಕಿ ಸಿಗದೇ ಮನೆಗೆ ಮರಳಿ ಬರಬೇಕಾಗುತ್ತದೆ. ಒಂದು ಕಡೆ ಪ್ರತಿ ವರ್ಷವೂ ಬೆಲೆ ಹೆಚ್ಚಿಸಿಕೊಳ್ಳುವ ಗೊಬ್ಬರ, ಬೀಜ, ಕೂಲಿಯಂಥ ಒಳಸುರಿಗಳು. ಇನ್ನೊಂದೆಡೆ ಬೆಳೆದ ಫಸಲಿಗೆ ಅಸಲು ಬೆಲೆಯೂ ಸಿಗದಂಥ ಪರಿಸ್ಥಿತಿ. ರೈತನಿಗೆ ತನ್ನ ಅನ್ನವನ್ನು ತಾನೇ ಉಣ್ಣುವುದೂ ದುಬಾರಿಯಾಗುತ್ತದೆ. ಬೇಸಾಯವನ್ನು ಬಿಟ್ಟು ಕೂಲಿನಾಲಿಗೆ ಹೊರಡಬೇಕು, ಇಲ್ಲವೆ ನೇಣುಹಗ್ಗ ಹುಡುಕಿಕೊಳ್ಳಬೇಕು.

ಇಥಿಯೋಪಿಯಾದ ಉದಾಹರಣೆಯನ್ನೆ ನೋಡಿ : ಎರಡು ಲಕ್ಷ ಜನರು ೧೯೭೭-೭೮ರಲ್ಲಿ ಹಸಿವೆಯಿಂದ ಕೊನೆಯುಸಿರು ಎಳೆಯುತ್ತಿದ್ದಾಗ ಅಲ್ಲಿನ ಸರಕಾರಕ್ಕೆ ಅಂದಿನ ಸೋವಿಯತ್ ರಷ್ಯಾದಿಂದ ಶಸ್ತ್ರಾಸ್ತ್ರ ಪೂರೈಕೆ ಆಗಿದೆ ಎಂಬ ಕಾರಣದಿಂದಾಗಿ ಅಮೆರಿಕ-ಬ್ರಿಟನ್ ಎರಡೂ ದೇಶಗಳು ನೆರವು ನಿಲ್ಲಿಸಿದವು. ಆವರೆಗೆ ಸಿಕ್ಕ ನೆರವೂ ಮಧ್ಯವರ್ತಿಗಳ, ಮಿಲಿಟರಿಯ ಪಾಲಾಗಿತ್ತು. ಅಳಿದುಳಿದಿದ್ದು ಸರಕಾರಿ ವರಿಷ್ಠರ ಗೋದಾಮುಗಳಿಗೆ ಸೇರಿತ್ತು. ಸೋವಿಯತ್ ಸಂಘದಿಂದಲೂ ಅಷ್ಟೆ, ಕೃಷಿಕರಿಗೆ ಬೀಜ, ಗೊಬ್ಬರ, ಬೋರ್‌ವೆಲ್, ಕೃಷಿ ಸಲಕರಣೆಗಳನ್ನು ನೀಡುವ ಬದಲು ಮಷಿನ್ ಗನ್, ಬಾಂಬರ್ ಹಾಗೂ ಗ್ರೆನೇಡ್‌ಗಳ ನೆರವು ಬಂದಿತ್ತು. ಕ್ಷಾಮದ ದವಡೆಯಿಂದ ಪಾರಾಗಲಾರದವರ ತಲೆಯ ಮೇಲೆ ೪೦೦ ಕೋಟಿ ಡಾಲರ್ ಸಾಲದ ಹೊರೆಯೂ ಬಿತ್ತು. ಈಗೇನೋ ಅಮೆರಿಕದ ಧೋರಣೆ ಬದಲಾಗಿದೆ. ಧಾರಾಳ ಧಾನ್ಯ ಅಲ್ಲಿಂದ ಬರುತ್ತದೆ. ಆದರೆ ಧಾನ್ಯದ ಬದಲು ಸಂತ್ರಸ್ತರಿಗೆ ಮರುವಸತಿ ಕಲ್ಪಿಸಿ, ಅವರಿಗೆ ಬದುಕುಳಿಯಲು ನೆರವಾಗಬಲ್ಲ ಯಾವ ಯೋಜನೆಯನ್ನೂ ಪುರಸ್ಕರಿಸಿಲ್ಲ.

ಹೀಗೆ, ಧನಿಕ ದೇಶದ 'ಕೃಪೆ' ಎಂಬುದೇ ಆಹಾರದಾನ ಪಡೆಯುವ ದೇಶಕ್ಕೂ ಅದರ ಪ್ರಜೆಗಳಿಗೂ ಅವಕೃಪೆಯಾಗುತ್ತದೆ. ದಾನ ಪಡೆದ ರಾಷ್ಟ್ರ ಮತ್ತಷ್ಟು ಆಹಾರದಾನಕ್ಕಾಗಿ ಯಾಚಿಸಬೇಕಾಗುತ್ತದೆ. ಅಗತ್ಯವಿಲ್ಲದಿದ್ದರೂ ಖನಿಜ

ಅಗೆಯುವ ಯಂತ್ರಗಳನ್ನು, ಸರಕು-ಸಾಗಣೆ ಹಡಗುಗಳನ್ನು, ಶಸ್ತ್ರಾಸ್ತ್ರಗಳನ್ನು ಧನಿಕ ರಾಷ್ಟ್ರಗಳಿಂದ ಖರೀದಿಸಬೇಕಾಗುತ್ತದೆ. ಆಹಾರ ಬರುವುದೇ ಅನಿಶ್ಚಿತ. ಬಂದರೂ ಜನರಿಗೆ ಬೇಕಾದ ಅಹಾರ ಬರುವುದು ಇನ್ನೂ ಅನಿಶ್ಚಿತ. ೧೯೬೮ರಲ್ಲಿ ಸ್ವಿಟ್ಸರ್ಲೆಂಡ್‌ನಿಂದ ಬಯಾಫ್ರಾ ದೇಶಕ್ಕೆ (ಈಗ ಅದು ನೈಜೀರಿಯಾದ ಭಾಗ) ದಾನವಾಗಿ ಬಂದ ಸಹಸ್ರಾರು ಕ್ವಿಂಟಲ್ ಬೆಣ್ಣೆಗಿಣ್ಣವನ್ನು ಹೂಳಬೇಕಾಯಿತು, ಏಕೆಂದರೆ ಅದನ್ನು ತಿಂದವರೆಲ್ಲ ಹೊಟ್ಟೆ ಕೆಡಿಸಿಕೊಂಡು ವಾಂತಿ ಮಾಡಿಕೊಳ್ಳತೊಡಗಿದ್ದರು. ೨೦೦೨ರಲ್ಲಿ ಆಫ್ರಿಕದ ದಕ್ಷಿಣ ದೇಶಗಳ ಆಹಾರ ಬಿಕ್ಕಟ್ಟು ಇಡೀ ದಶಕದಲ್ಲೇ ಅತ್ಯಂತ ಭೀಕರವಾಗಿತ್ತು. ಸುಮಾರು ೧೪೫ ಲಕ್ಷ ಜನರು ಹಸಿವೆಯಿಂದಾಗಿ ಸಾವಿನಂಚಿಗೆ ಬಂದಿದ್ದರು. ಅನೇಕರಂತೂ ಕಾಡುಗಿಡಗಳ ಎಲೆತೊಗಟೆಗಳನ್ನೋ ಹಂದಿಗಳಿಗೆ ಮೀಸಲಾದ ಆಹಾರವನ್ನೋ ತಿಂದು ಜೀವ ಉಳಿಸಿಕೊಳ್ಳುವ ಸ್ಥಿತಿಗೆ ಬಂದಿದ್ದರು. ಅಮೆರಿಕದಿಂದ ಆಹಾರದ ಮೂಟೆಗಳು ಬಂದವು. ಆದರೆ ಝಾಂಬಿಯಾ ಸರಕಾರ ಅದನ್ನು ಸ್ವೀಕರಿಸಲು ನಿರಾಕರಿಸಿತು. ಏಕೆಂದರೆ ದಾನದ ರೂಪದಲ್ಲಿ ಬಂದಿದ್ದು ಕುಲಾಂತರಿ ಸೋಯಾ ಮತ್ತು ಜೋಳವಾಗಿತ್ತು. ಅಂಥ 'ವಿಷಾಹಾರ ನಮಗೆ ಬೇಡ' ಎಂದು ಝಾಂಬಿಯಾ ಅಧ್ಯಕ್ಷ ಲೆವಿ ಮಾನವಸಾ ಹೇಳಿಕೆ ನೀಡಿದರು. ಹಿಂದೆ ೧೯೮೬ರಲ್ಲಿ ಚೆರ್ನೊಬಿಲ್ ಅಣುಸ್ಥಾವರ ಸ್ಫೋಟಿಸಿ ಯುರೋಪಿನ ಧಾನ್ಯದ ಕಣಜಕ್ಕೆಲ್ಲ ವಿಕಿರಣ ಸೇರಿದ ಹೊಸದರಲ್ಲಿ ಅಲ್ಲಿಂದ ಹಲವಾರು ಸಾವಿರ ಟನ್ ಹಾಲಿನ ಪುಡಿ, ಬೆಣ್ಣೆ, ಗಿಣ್ಣವೆಲ್ಲ ಕಡಿಮೆ ಬೆಲೆಗೆ ಶ್ರೀಲಂಕಾ, ನೇಪಾಳ, ಪಾಕಿಸ್ತಾನ ಹಾಗೂ ಭಾರತಕ್ಕೆ ಬಂದವು. ಬಳಸುವಂತಿಲ್ಲ ನಿರಾಕರಿಸುವಂತಿಲ್ಲ. ನಿರಾಕರಿಸಿದರೆ ಇನ್ನೇನೇನೋ ವಹಿವಾಟುಗಳಿಗೆ ಧಕ್ಕೆ ಬರುತ್ತದೆ.

ಆಹಾರ ಧಾನ್ಯಕ್ಕೆ ಕೈಯೊಡ್ಡುವ ದೇಶಗಳನ್ನು ಧನಿಕ ರಾಷ್ಟ್ರಗಳು ಹೇಗೆ ಕುಣಿಸುತ್ತವೆ ಎಂಬುದು ೧೯೭೫-೭೬ರ ಒಂದು ವರ್ಷದ ಅವಧಿಯ ಅಮೆರಿಕದ ಕೃಷಿ ವಹಿವಾಟಿನ ವೈಖರಿಯನ್ನು ನೋಡಿದರೆ ಗೊತ್ತಾಗುತ್ತದೆ. ಬ್ರಝಿಲ್ ದೇಶದಿಂದ ಖರೀದಿಸುತ್ತಿದ್ದ ೧೦ ಕೋಟಿ ಡಾಲರ್ ಮೌಲ್ಯದ ಸಕ್ಕರೆಗೆ ಆ ವರ್ಷ ಅಮೆರಿಕ ನಿಷೇಧ ಹಾಕಿತು. ಫಿಲಿಪ್ಪೀನ್ಸ್‌ನಿಂದ ಸಕ್ಕರೆ ಆಮದನ್ನು ಮೂರು ಪಟ್ಟು ಹೆಚ್ಚಿಸಿತು. ಗಿನಿ ದೇಶದ ಕೋಕೋ ಖರೀದಿಯನ್ನು ನಿಲ್ಲಿಸಿ, ಮೆಕ್ಸಿಕೊದ ಹತ್ತಿ ಖರೀದಿಯನ್ನು ಅರ್ಧಕ್ಕರ್ಧ ಕಡಿಮೆ ಮಾಡಿ, ಭಾರತದ ಹತ್ತಿ ಆಮದನ್ನು ನಾಲ್ಕು ಪಟ್ಟು ಹೆಚ್ಚಿಸಿತು. ಪಾಕಿಸ್ತಾನದ್ದನ್ನು ಶೇಕಡಾ ೯೦ರಷ್ಟು ಕಡಿಮೆ ಮಾಡಿತು.

ಇದರರ್ಥ ಏನೆಂದರೆ ಶ್ರೀಮಂತ ದೇಶ ತನ್ನ ಬೆಳೆ-ಬೇಸಾಯ ವೈವಿಧ್ಯವನ್ನು ಬೇಕೆಂದಾಗ ಬದಲಾಯಿಸುವಷ್ಟೇ ಕರಾರುವಕ್ಕಾಗಿ ಇತರ ದೇಶಗಳಲ್ಲಿ ಯಾರು ಏನನ್ನು ಬೆಳೆಯಬೇಕೆಂಬುದನ್ನೂ ನಿರ್ಧರಿಸುತ್ತದೆ. ಕಾಫಿ, ಕೋಕೋ, ವೆನಿಲಾದಂಥ ವಾಣಿಜ್ಯ ಬೆಳೆಗಾರರಂತೂ ಸದಾ ಸೂತ್ರದ ಬೊಂಬೆಗಳಾಗಿಯೇ ಇರಬೇಕಾಗುತ್ತದೆ.

ಈ ದೃಷ್ಟಿಯಿಂದ ನೋಡಿದರೆ ಹಸಿವಿನ ಸಮಸ್ಯೆಯ ನಿವಾರಣೆಗೆ ಧನಿಕ ರಾಷ್ಟ್ರಗಳು ಸಹಕರಿಸುತ್ತವೆ ಎಂಬುದೇ ಭ್ರಮೆಯಾದೀತು. ಆಹಾರ ಧಾನ್ಯದ ವಿಷಯದಲ್ಲಿ ಅವುಗಳ ನೆರವನ್ನು ಕೇಳುವುದಿರಲಿ, ಅವು ತಾವಾಗಿ ಕೊಡುತ್ತೇವೆ ಎಂದು ಮುಂದೆ ಬಂದರೂ 'ಥ್ಯಾಂಕ್ಯೂ, ಗೋ ಬ್ಯಾಕ್' ಎನ್ನುವ ಜಪಾನೀ ನೀತಿಯನ್ನು ಮೈಗೂಡಿಸಿಕೊಳ್ಳುವುದೇ ಜಾಣತನವಾಗುತ್ತದೆ. ಜಪಾನಿನಲ್ಲಿ ಒಂದು ಕಿಲೊ ಜಪಾನೀ ಅಕ್ಕಿಯನ್ನು ಖರೀದಿಸಲು ಬೇಕಾದಷ್ಟು ಹಣದಲ್ಲಿ ಅಮೆರಿಕದ ನಾಲ್ಕು ಕಿಲೊ ಅಕ್ಕಿಯನ್ನು ಖರೀದಿಸಬಹುದು. ಆದರೆ ಜಪಾನೀ ರೈತರ ಬಿಗಿ ಲಾಬಿಯಿಂದಾಗಿ ಅಲ್ಲಿಗೆ ಒಂದು ಮೂಟೆ ಕೂಡ ವಿದೇಶೀ ಅಕ್ಕಿ ಬರುವಂತಿಲ್ಲ. ಬಳಕೆದಾರರೂ ತಮಗೆ ಅಗ್ಗದ ವಿದೇಶೀ ಅಕ್ಕಿ ಬೇಕೆಂದು ಬೇಡಿಕೆ ಇಡುವಂತಿಲ್ಲ. ಮುಕ್ತ ವ್ಯಾಪಾರ ನಿಯಮಗಳ ಪ್ರಕಾರ ಯಾವ ದೇಶವೂ ವಿದೇಶೀ ಸಾಮಗ್ರಿಯನ್ನು ನಿರಾಕರಿಸುವಂತಿಲ್ಲ ಎಂದು ಹೇಳಿ ಜಪಾನಿನ ಮೇಲೆ ಒತ್ತಡ ಹೇರಲು ಅಮೆರಿಕ ಯತ್ನಿಸಿತು. ಆದರೆ ಅಕ್ಕಿಯನ್ನು ಆಮದು ಮಾಡಿಕೊಂಡರೆ ತನ್ನ ಸಂಸ್ಕೃತಿಗೆ ಧಕ್ಕೆಯಾಗುತ್ತದೆ ಎಂಬ ಕಾರಣ ನೀಡಿ ಜಪಾನ್ ಎಲ್ಲ ಬಗೆಯ ಅಂತರರಾಷ್ಟ್ರೀಯ ಒತ್ತಡಗಳಿಗೆ ಎದೆಗೊಟ್ಟು ನಿಂತಿದೆ.

ಜಪಾನೀ ಮಾದರಿಯನ್ನು ಅನುಸರಿಸಲು ಎಲ್ಲ ದೇಶಗಳಿಗೂ ಸಾಧ್ಯವಾಗಲಾರದು. ಇಂದಿನ ಸ್ಥಿತಿ ಹೇಗಿದೆ ಎಂದರೆ ನೈಸರ್ಗಿಕ ಸಂಪತ್ತು ಸಾಕಷ್ಟು ಇದ್ದರೂ ಅಶ್ರೀಮಂತ ದೇಶಗಳು ಕ್ರಮೇಣ ಮಾನವ ನಿರ್ಮಿತ ಕ್ಷಾಮಕ್ಕೆ ತುತ್ತಾಗುತ್ತಿವೆ. ಇನ್ನೊಂದೆಡೆ ಪೆಟ್ರೋ ಧನಿಕರು ಪಾತಾಳಕ್ಕೂ ರಂಧ್ರ ಹಾಕಿ ಮರುಭೂಮಿಯಲ್ಲೂ ಬೆಳೆ ಬೆಳೆಯುತ್ತಿದ್ದಾರೆ. ಧನಬಲ ಇದ್ದಲ್ಲೇ ಧಾನ್ಯಬಲವೂ ಸಂಚಯವಾಗುತ್ತದೆ.

ಭಾರತದ 'ಹೆಮ್ಮೆಯ' ಹಸುರು ಕ್ರಾಂತಿ ಕೂಡ ಇದೇ ಬಗೆಯ ವಿರೋಧಾಭಾಸಗಳಿಂದ ಕೂಡಿದೆ. ನಮ್ಮಲ್ಲಿ ಕೃಷಿ ತಂತ್ರದ ಅಭಿವೃದ್ಧಿ ಆಯಿತೇ ವಿನಾ ಕೃಷಿಕನ ಅಭಿವೃದ್ಧಿ ಆಗಲಿಲ್ಲ. ಹೈಬ್ರಿಡ್ ತಳಿ, ದೊಡ್ಡ ಅಣೆಕಟ್ಟು ರಸಗೊಬ್ಬರ ಕಾರ್ಖಾನೆ, ಪೀಡೆನಾಶಕ ಸಿಂಪರಣಾ ತಂತ್ರ, ಟ್ರಾಕ್ಟರ್-ಟಿಲ್ಲರ್ ಮಷಿನರಿ ಬೋರ್‌ವೆಲ್, ತಂತ್ರಜ್ಞಾನ ಕೃಷಿಸಾಲದ ಬ್ಯಾಂಕಿಂಗ್ ವ್ಯವಸ್ಥೆಗಳೆಲ್ಲ ಸುಧಾರಿಸಿದವು; ರೈತನ ಸ್ಥಿತಿಗತಿ ಮಾತ್ರ ಸುಧಾರಿಸಿಲ್ಲ. ಅರಣ್ಯ ಒತ್ತುವರಿ, ಕೃಷಿಭೂಮಿ ವಿಸ್ತರಣೆ,

ನೀರಾವರಿ ವ್ಯವಸ್ಥೆಗಳ ವಿಸ್ತರಣೆಯ ಫಲವೂ ಬಡರೈತರ ನೆರವಿಗೆ ಬರಲಿಲ್ಲ. ಬದಲಿಗೆ ಹಿಂದೆಂದೂ ಕಾಣದಷ್ಟು ದೊಡ್ಡ ಸಂಖ್ಯೆಯಲ್ಲಿ ಕಳೆದ ಒಂದು ದಶಕದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡರು.

ಹಸುರು ಕ್ರಾಂತಿಯ ತುತ್ತೂರಿಯ ಗದ್ದಲದ ಮಧ್ಯೆ ಹಸಿವೆ, ಅರೆಹೊಟ್ಟೆಯಿಂದ ನರಳುವವರ ಸದ್ದೇ ಕೇಳದಂತಾಗಿದೆ. ೨೦೧೨ರ ಸಮೀಕ್ಷೆಯ ಪ್ರಕಾರ ಜಗತ್ತಿನ ಇತರೆಲ್ಲ ದೇಶಗಳ ಒಟ್ಟೂ ಬಡವರ/ಹಸಿದವರ ಸಂಖ್ಯೆಗಿಂತ ಭಾರತದಲ್ಲಿರುವ ಬಡವರ/ಹಸಿದವರ ಸಂಖ್ಯೆಯೇ ಹೆಚ್ಚಿಗೆ ಇದೆ. ಬಿಹಾರ, ಝಾರಖಂಡ್, ಛತ್ತೀಸಗಢ, ಮಧ್ಯ ಪ್ರದೇಶ, ಉತ್ತರ ಪ್ರದೇಶ, ಮಹಾರಾಷ್ಟ್ರ, ಒರಿಸ್ಸಾಗಳಲ್ಲಿ ಗ್ರಾಮೀಣ ಜೀವನ ದುರ್ಭರವಾಗಿದೆ. ಮಹಾರಾಷ್ಟ್ರದ ಮೇಲ್ಘಾಟ್, ಅಮರಾವತಿ, ಧುಲೆ ಮುಂತಾದ ಜಿಲ್ಲೆಗಳಲ್ಲಿ ೨೦೧೧ರಲ್ಲಿ ಹದಿನೆಂಟು ಸಾವಿರಕ್ಕೂ ಹೆಚ್ಚು ಮಕ್ಕಳು ಸತ್ತಿವೆಯೆಂದು ಸರಕಾರಿ ಅಂಕಿಸಂಖ್ಯೆಗಳೇ ಹೇಳುತ್ತವೆ. ಸಾವಿಗೆ ಅಮಶಂಕೆಯಂಥ ರೋಗರುಜಿನೆಗಳೇ ಕಾರಣವೆಂದು ಅಹಾರ ಸರಬರಾಜು ಸಚಿವರು ಹೇಳಿದರೆ ಹಸಿವೆಯೇ ಕಾರಣವೆಂದು ಆರೋಗ್ಯ ಸಚಿವರೂ, ಹಣಕಾಸು ಕೊರತೆ ಕಾರಣವೆಂದು ಆದಿವಾಸಿ ಕಲ್ಯಾಣ ಸಚಿವರೂ ಹೇಳುತ್ತ ನುಣುಚಿಕೊಳ್ಳಲು ಯತ್ನಿಸುತ್ತಾರೆ. ಅತ್ತ ಬಡ ಗ್ರಾಮೀಣ ರೈತರು ಕಂದಮೂಲ ಹುಡುಕುತ್ತಿದ್ದರೆ ಇತ್ತ ಧನಿಕ ಕಬ್ಬು ಬೆಳೆಗಾರರು ಇನ್ನಷ್ಟು ಬೆಂಬಲ ಬೆಲೆಗಾಗಿ ಸಚಿವರ ಮೇಲೆ ಒತ್ತಡ ಹೇರುತ್ತಿರುವಾಗ, ನಿಪ್ಪಾಣಿಯ ಧನಿಕ ದ್ರಾಕ್ಷಿ ಬೆಳೆಗಾರರು ಎಲ್ಲ ಬಗೆಯ ಕೃಷಿ ಸಾಲ ಮನ್ನಾ ಮಾಡಿಸಿಕೊಳ್ಳಲು ಲಾಬಿ ಮಾಡುತ್ತಿರುತ್ತಾರೆ. ಸಣ್ಣ ರೈತರ ಸಣ್ಣ ಸಾಲ ಮನ್ನಾ, ದೊಡ್ಡ ರೈತರ ದೊಡ್ಡ ಸಾಲ ಮನ್ನಾ ಆಗುತ್ತಿದೆ ವಿನಾ ಹಸಿದವರಿಗೆ ಆಹಾರ ನೀಡುವ ನಿಟ್ಟಿನಲ್ಲಿ ಸರಕಾರದ ದಕ್ಷತೆ ಸದಾ ಪ್ರಶ್ನಾರ್ಹವಾಗಿಯೇ ಇರುತ್ತದೆ. ನಮ್ಮ ರಾಷ್ಟ್ರೀಯ ಆಹಾರ ಉತ್ಪನ್ನದಲ್ಲಿ ಶೇಕಡಾ ೩೦ ಭಾಗ ಸಾಗಣೆಯಲ್ಲಿ, ಶೇಕರಣೆಯಲ್ಲೇ ಸೋರಿಹೋಗುತ್ತಿದೆ. ಗೋದಾಮುಗಳಲ್ಲಿ ಇಲಿಗಳ ಪಾಲಾಗಿ, ಇಲ್ಲವೆ ಕೊಳೆತು ಅಂದಾಜು ೫೮ ಸಾವಿರ ಕೋಟಿ ರೂಪಾಯಿ ಮೌಲ್ಯದ ಆಹಾರ ವಸ್ತುಗಳು ಪ್ರತಿ ವರ್ಷ ನಮ್ಮ ದೇಶದಲ್ಲಿ ಹಾಳಾಗಿ ಹೋಗುತ್ತಿರುವ ಕುರಿತು ೨೦೧೨ರಲ್ಲಿ ಸಂಸತ್ತಿನಲ್ಲಿ ಚರ್ಚೆಯಾಗಿತ್ತು. 'ಹೀಗೆ ಪೋಲು ಮಾಡುವ ಬದಲು ಆಹಾರವನ್ನು ಬಡಬಗ್ಗರಿಗೆ ಉಚಿತವಾಗಿ ಹಂಚಿ' ಎಂದು ಸರ್ವೋಚ್ಚ ನ್ಯಾಯಾಲಯವೂ ಕೇಂದ್ರ ಸರಕಾರಕ್ಕೆ ಖಚಿತ ಆದೇಶ ನೀಡಿತ್ತು. ಅದರ ಬೆನ್ನಿಗೇ ಇದೀಗ ಸಂಸತ್ತು 'ಆಹಾರದ ಹಕ್ಕು' ಕಾನೂನನ್ನು ಜಾರಿಗೆ ತಂದಿದೆ. ಈ ಕಾನೂನಿನ ಪ್ರಕಾರ ದೇಶದ ಸುಮಾರು ೮೦ ಕೋಟಿ ಜನರು ರಿಯಾಯ್ತಿ ದರದಲ್ಲಿ ಆಹಾರ ಧಾನ್ಯಗಳನ್ನು ಪಡೆಯಬಹುದಾಗಿದೆ.

ಆಹಾರ ಭದ್ರತೆಯಂತೂ ನಮಗೆ ಸಿಕ್ಕೀತೆಂದು ಆಶಿಸೋಣ. ಆದರೆ ಆಹಾರ ಉತ್ಪಾದನೆ ಮತ್ತು ವಿತರಣೆಯನ್ನು ನಿಯಂತ್ರಿಸುವಲ್ಲಿ ಬಲಾಢ್ಯ ಬಹುರಾಷ್ಟ್ರೀಯ ಕಂಪನಿಗಳು ಬಹುದೊಡ್ಡ ಪಾತ್ರವನ್ನು ನಿರ್ವಹಿಸುತ್ತಿವೆ. ಶಕ್ತ ಸರಕಾರಗಳನ್ನೂ ತಮಗೆ ಬೇಕೆಂದಂತೆ ಕುಣಿಸಬಲ್ಲ ಇವು ಕೃಷಿಕರ ಬೀಜ ಸ್ವಾತಂತ್ರ್ಯವನ್ನು ಕಸಿದು ತಮ್ಮ ಮುಷ್ಟಿಯಲ್ಲೇ ಇಟ್ಟುಕೊಳ್ಳಲು ಸದಾ ಹವಣಿಸುತ್ತಿವೆ. ಭಾರತದ ಹತ್ತಿ ಬೆಳೆಯಲ್ಲಿ ನಾವಿದನ್ನು ಸ್ಪಷ್ಟವಾಗಿ ನೋಡಬಹುದು. ಹಿಂದೆಲ್ಲ, ಜಯಧರ, ವರಲಕ್ಷ್ಮಿ ಮುಂತಾದ ಸ್ಥಳೀಯ ತಳಿಗಳ ಬೀಜಗಳು ರೈತರಿಗೆ ಸುಲಭವಾಗಿ ಲಭ್ಯವಾಗುತ್ತಿತ್ತು. ಈಗ 'ಬಿಟಿ ಹತ್ತಿ' ಎಂಬ ಕುಲಾಂತರಿ ತಳಿ ಬಂದ ಮೇಲೆ ನಮ್ಮ ದೇಶದ ಸುಮಾರು ೩೦ ಹತ್ತಿ ತಳಿಗಳು ಕಣ್ಮರೆಯಾಗಿವೆ. ಒಂದೇ ಕಂಪನಿಯ ಸ್ವಾಮ್ಯಕ್ಕೆ ಸೇರಿದ ಬಿಟಿ ಹತ್ತಿ ತಳಿ ಇಡೀ ದೇಶದ ಶೇಕಡಾ ೯೫ ಪಾಲು ಹತ್ತಿಯ ಹೊಲಗಳನ್ನು ಆಕ್ರಮಿಸಿದೆ. ಬಿಟಿ ಹತ್ತಿಯ ದುಬಾರಿ ಬೀಜಕ್ಕಾಗಿ ರೈತರು ದಿನರಾತ್ರಿ ಸಾಲುಗಟ್ಟಿ ನಿಲ್ಲಬೇಕಾಗಿ ಬಂದಿದೆ. ಹತ್ತಿಯ ಬೀಜ ಮತ್ತು ಬೆಲೆಯ ವಿಷಯದಲ್ಲಿ ರೈತರ ಸ್ವಾತಂತ್ರ್ಯವಷ್ಟೇ ಅಲ್ಲ, ಸರಕಾರದ ಸ್ವಾತಂತ್ರ್ಯವೂ ಹರಣವಾದಂತಾಗಿದೆ. ಹತ್ತಿಯನ್ನು ದಾಟಿ ಅಹಾರ ಬೆಳೆಯಲ್ಲೂ ಕುಲಾಂತರಿ ತಳಿಗಳನ್ನು ಪರಿಚಯಿಸಲು ಬಹುರಾಷ್ಟ್ರೀಯ ಕಂಪನಿಗಳು ತುದಿಗಾಲಲ್ಲಿ ನಿಂತಿವೆ. 'ಜಗತ್ತಿನ ಎಲ್ಲ ಜನರಿಗೆ ಬೇಕಿದ್ದಕ್ಕಿಂತ ಹೆಚ್ಚು ಆಹಾರ ಉತ್ಪಾದನೆಯಾಗುತ್ತಿದೆ. ಹೊಸ ತಂತ್ರಜ್ಞಾನ ಅಗತ್ಯವೂ ಇಲ್ಲ, ಕೃಷಿಭೂಮಿ ವಿಸ್ತರಣೆಯ ಅಗತ್ಯವೂ ಇಲ್ಲ. ಆಹಾರ ಎಲ್ಲರಿಗೂ ನ್ಯಾಯಯುತ ಬೆಲೆಯಲ್ಲಿ ಲಭ್ಯವಾಗುವಂತೆ ಸವಾಲನ್ನು ಸರಕಾರಗಳು ಕೈಗೆತ್ತಿಕೊಳ್ಳುವ ಅಗತ್ಯವಿದೆ' ಎಂದು ೨೦೧೩ರಲ್ಲಿ ವಿಶ್ವಸಂಸ್ಥೆಯ ಅಂಗವಾದ ಆಹಾರ ಮತ್ತು ಕೃಷಿ ಸಂಸ್ಥೆ ಹೇಳಿದೆ. ಲಭ್ಯವಾಗುವಂತೆ ಮಾಡಿದರೆ ಸಾಲದು, ಲಭ್ಯ ಆಹಾರವಸ್ತುಗಳು ವ್ಯರ್ಥವಾಗದಂತೆ ನೋಡಿಕೊಳ್ಳುವುದೂ ಅಷ್ಟೇ ಮುಖ್ಯವಾಗುತ್ತದೆ. ಅದಕ್ಕೆ ೨೦೧೩ನೇ ಇಸವಿಯನ್ನು 'ಆಹಾರ ಮಿತವ್ಯಯದ ವರ್ಷ'ವೆಂದು ವಿಶ್ವಸಂಸ್ಥೆ ಘೋಷಿಸಿದೆ.

ಆಹಾರ ವಿತರಣೆ, ಮಿತವ್ಯಯಗಳೆಲ್ಲ ನಮ್ಮ ನಮ್ಮ ಸರಕಾರಗಳ, ನಮ್ಮ ಪ್ರಜೆಗಳ ಮುಷ್ಟಿಯಲ್ಲಿದೆ. ಆದರೆ ಉತ್ಪಾದನೆಯು ಯಾರ ಮುಷ್ಟಿಯಲ್ಲಿದೆ? ಬಲಿಷ್ಠ ಬಹುರಾಷ್ಟ್ರೀಯ ಕಂಪನಿಗಳ ಕಾರ್ಯಾಚರಣೆ ಕುರಿತು ೨೦೧೨ರ ಕೊನೆಯಲ್ಲಿ ಅಂತರರಾಷ್ಟ್ರೀಯ 'ಸ್ಥಾಯೀ ಜನತಾ ನ್ಯಾಯಪಂಚಾಯಿತಿ' ತನ್ನ ವಿಚಾರಣೆಯನ್ನು ಬೆಂಗಳೂರಿನಲ್ಲೇ ಆರಂಭಿಸಿತ್ತು. ಈ ನ್ಯಾಯ ವಿಚಾರಣೆಯನ್ನು ಅಂತರಜಾಲದಲ್ಲಿ ನೇರ ಬಿತ್ತರಣೆ ಮಾಡಲಾಗಿತ್ತು. ಇಡೀ ಭೂಮಂಡಲದ ಆಹಾರ ವ್ಯವಸ್ಥೆಯನ್ನೇ ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಹವಣಿಸುತ್ತಿರುವ ಆರು ಕೃಷಿವಾಣಿಜ್ಯ ಕಂಪನಿಗಳ ಬಗ್ಗೆ

ನ್ಯಾಯಾಲಯ ತನ್ನೆದುರಿನ ಎಲ್ಲ ಸಾಕ್ಷ್ಯಗಳನ್ನು ಮುಂದಿಟ್ಟು ಖಾರವಾದ ತೀರ್ಪನ್ನು ಕೊನೆಯಲ್ಲಿ ನೀಡಿತು. ಆ ಕಂಪನಿಗಳೆಂದರೆ ಮೊನ್ಸಾಂಟೊ, ಡೌ ಕೆಮಿಕಲ್ಸ್, ಸಿಂಜೆಂಟಾ, ಬಾಯರ್, ಡ್ಯೂಪಾಂಟ್ ಮತ್ತು ಬಿಎಎಸ್‌ಎಫ್. ಜಗತ್ತಿನ ಬಹುಪಾಲು (ಶೇಕಡಾ ೭೬ರಷ್ಟು) ಕೃಷಿ ವಾಣಿಜ್ಯದ ಮೇಲೆ ತಮ್ಮ ಪ್ರಭುತ್ವವನ್ನು ಹೇರಿರುವ ಇವು ತಮ್ಮ ಲಾಭಕ್ಕಾಗಿ ಇಡೀ ಪೃಥ್ವಿಯ ಬೆಳೆ ವೈವಿಧ್ಯವನ್ನು ಏರುಪೇರು ಮಾಡುತ್ತಿವೆ. ಬೆಳೆಯನ್ನು ವಿಷಮಯ ಮಾಡುತ್ತಿವೆ; ದುರ್ಬಲರನ್ನು ಸದೆಬಡಿಯುತ್ತಿವೆ; ಕಾನೂನಿಗೆ ವಂಚನೆ ಮಾಡುತ್ತಿವೆ; ಆಡಳಿತ ಯಂತ್ರಗಳಿಗೆ ಚಳ್ಳೆಹಣ್ಣು ತಿನ್ನಿಸುತ್ತಿವೆ; ತಮಗೆ ಬೇಕಿದ್ದ ವಿಜ್ಞಾನಿಗಳನ್ನು ಊಳಿಗಕ್ಕಿಟ್ಟುಕೊಂಡು, ಸತ್ಯವಂತ ವಿಜ್ಞಾನಿಗಳನ್ನು ದಮನ ಮಾಡಿ, ಎಲ್ಲ ರಾಷ್ಟ್ರಗಳ ಉನ್ನತ ವಲಯದ ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಆಮಿಷವೊಡ್ಡಿ ಜೀವಲೋಕಕ್ಕೆ ಕಂಟಕಪ್ರಾಯವಾಗಿವೆ' ಎಂದು ತೀರ್ಪು ನೀಡಿತು.

ಅಧಿಕಾರದ ಗದ್ದುಗೆಯಲ್ಲಿದ್ದವರಿಗೆ ಆಹಾರದ ಮಹತ್ವ ಗಮನಕ್ಕೇ ಬಾರದಂತೆ ಬೇರೆ ಬೇರೆ ವಿಷಯಗಳು ಸುತ್ತಿಕೊಂಡಿರುತ್ತವೆ. ಪ್ರಜ್ಞಾವಂತ, ಅನುಕೂಲಸ್ಥ ನಾಗರಿಕರೂ ಆಹಾರದ ವಿಷಯದಲ್ಲಿ ಹೊಣೆಗೇಡಿಗಳಾಗುತ್ತಾರೆ ಎಂಬುದಕ್ಕೆ ನಮ್ಮ ಸುತ್ತಮುತ್ತ ಸಾಕಷ್ಟು ನಿದರ್ಶನಗಳು ಸಿಗುತ್ತವೆ. ಬೆಂಗಳೂರಿನ ಗಾಂಧೀ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಒಟ್ಟು ಕಳೆದ ವರ್ಷ (ಅಂದರೆ ೨೦೧೨ರಲ್ಲಿ) ರಾಜಧಾನಿಯ ೭೨ ಕಲ್ಯಾಣ ಮಂದಿರಗಳ ಸಮೀಕ್ಷೆ ಮಾಡಿದ್ದರು. ಅವರು ಕಲೆಹಾಕಿದ ವಿವರಗಳ ಪ್ರಕಾರ ಬೆಂಗಳೂರು ನಗರದಲ್ಲಿ ಪ್ರತಿವರ್ಷ ಮದುವೆ ಊಟದ ಸಂದರ್ಭದಲ್ಲಿ ೯೪೩ ಟನ್ ಆಹಾರ ಪದಾರ್ಥಗಳು ತಿಪ್ಪೆಗೆ ಹೋಗುತ್ತಿವೆ. ಮದುವೆ ಊಟ ಎಂದ ಮೇಲೆ ಉತ್ಕೃಷ್ಟ ಗುಣಮಟ್ಟದ ಊಟವೇ ಆಗಿರಬೇಕು. ಅಂದಾಜು ಲೆಕ್ಕಾಚಾರದ ಪ್ರಕಾರ ಪ್ರತಿವರ್ಷ ಈ ನಗರವೊಂದರಲ್ಲೇ ಸುಮಾರು ೩೩೯ ಕೋಟಿ ರೂಪಾಯಿಗಳ ಮೌಲ್ಯದ ಆಹಾರ ಗೊಬ್ಬರಗುಂಡಿಗೆ ಹೋಗುತ್ತಿದೆ. ಅಷ್ಟು ಹಣದಲ್ಲಿ ೨೬೦ ಲಕ್ಷ ಜನರಿಗೆ ಮಾಮೂಲು ಊಟ ಹಾಕಬಹುದಿತ್ತು.

ಈಗ ಈ ಲೇಖನದ ಆರಂಭವನ್ನು ಮತ್ತೊಮ್ಮೆ ಓದಿ, ಅಲ್ಲಿ ವಿವರಿಸಿದ ಆ ದೃಶ್ಯವನ್ನು ವಿಡಿಯೊಗ್ರಫಿ ಮಾಡಬೇಕೆಂದರೆ ನಾವೀಗ, ವಿದೇಶಕ್ಕೆ ಹೋಗಬೇಕಾಗಿಲ್ಲ. ನಮ್ಮ ಹಿತ್ತಲಲ್ಲೇ ಅದು ಸಿಗುತ್ತದೆ. ಅಂದ ಹಾಗೆ, ಈಗ ವಿಶ್ವದ ಜನಸಂಖ್ಯೆ ೭೦೦ ಕೋಟಿ ದಾಟಿದೆ.

**ಲೇಖಕರ ಪರಿಚಯ: ನಾಗೇಶ ಹೆಗಡೆ:** ಕನ್ನಡದ ಪ್ರಸಿದ್ಧ ಜನಪ್ರಿಯ ವಿಜ್ಞಾನ ಹಾಗೂ ಪರಿಸರ ವಿಜ್ಞಾನ ಬರಹಗಾರರಾದ ನಾಗೇಶ ಹೆಗಡೆಯವರು ಉತ್ತರ ಕನ್ನಡ ಜಿಲ್ಲೆಯ ಬಕ್ಕೆಮನೆ ಎನ್ನುವ ಗ್ರಾಮದಲ್ಲಿ ೧೯೪೮ರಲ್ಲಿ ಜನಿಸಿದರು. ಇವರು ಶಿರಸಿಯ ಮೋಟಿನಸರ ಸ್ಮಾರಕ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಭೂವಿಜ್ಞಾನ ವಿಷಯದಲ್ಲಿ ಬಿಎಸ್.ಸಿ ಪದವಿಯನ್ನು, ಖರಗಪುರ ಐಐಟಿಯಲ್ಲಿ ಆನ್ವಯಿಕ ಭೂವಿಜ್ಞಾನ ವಿಷಯದಲ್ಲಿ ಎಂಎಸ್.ಸಿ ಪದವಿ ಹಾಗೂ ದೆಹಲಿಯ ಜವಹರ್‌ಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಪರಿಸರ ವಿಜ್ಞಾನದಲ್ಲಿ ಎಂಫಿಲ್ ಪದವಿ ಪಡೆದಿದ್ದಾರೆ. ಶಿಕ್ಷಕ, ಪರಿಸರವಾದಿ ಹಾಗೂ ಪತ್ರಕರ್ತರಾಗಿ ಕಾರ್ಯನಿರ್ವಹಿಸಿರುವ ಇವರು ೨೫ಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇರುವುದೊಂದೇ ಭೂಮಿ, ನಮ್ಮೊಳಗಿನ ಬ್ರಹ್ಮಾಂಡ, ಅಭಿವೃದ್ಧಿಯ ಅಂಧಯುಗ, ಮುಷ್ಠಿಯಲ್ಲಿ ಮಿಲೆನಿಯಂ, ಶತ್ರುವಿಲ್ಲದ ಸಮರ, ಪ್ರತಿದಿನ ಪರಿಸರ ದಿನ, ಭೂಮಿಯೆಂಬ ಗಗನನೌಕೆ ಗಗನಸಖಿಯರ ಸೆರಗಹಿಡಿದು, ಗ್ರೆತಾ ಥನ್‌ಬರ್ಗ್, ಮೊದಲಾದವು ಇವರ ಪ್ರಮುಖ ಕೃತಿಗಳು. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ; ಸಾಹಿತ್ಯ ಅಕಾಡೆಮಿ, ವಿಜ್ಞಾನ ಸಾಹಿತ್ಯ ಬಹುಮಾನ ('ಇರುವುದೊಂದೇ ಭೂಮಿ') ಮತ್ತು ಶಿವರಾಮಕಾರಂತ ಪ್ರಶಸ್ತಿ ಮೊದಲಾದವು ದೊರೆತಿವೆ.

**ಪ್ರಶ್ನೆಗಳು**

೧. ಕೃಷಿ ಇಂದು ಹೇಗೆ ಒಂದು ಬೃಹತ್ ಉದ್ದಿಮೆಯಾಗಿ ಪರಿವರ್ತನೆಯಾಗಿದೆ? ವಿವರಿಸಿ

೨. ಪಾಶ್ಚಾತ್ಯ ರಾಷ್ಟ್ರಗಳು ಆಹಾರ ಉತ್ಪಾದನೆಯನ್ನು ನಿಯಂತ್ರಿಸುವುದಕ್ಕಾಗಿ ಅನುಸರಿಸುತ್ತಿರುವ ಕ್ರಮಗಳೇನು? ವಿವರಿಸಿ

೩. 'ಆಹಾರ ಆಯುಧ' ಎಂದರೇನು? ಇದನ್ನು ಹೇಗೆ ಬಳಸಲಾಗುತ್ತಿದೆ? ವಿವರಿಸಿ

೪. ಶ್ರೀಮಂತ ರಾಷ್ಟ್ರಗಳ ಆಹಾರ ಪೂರೈಕೆ ನೀತಿಯಿಂದ ಬಡರಾಷ್ಟ್ರಗಳು ಅನುಭವಿಸುತ್ತಿರುವ ತೊಂದರೆಗಳೇನು? ನಿರೂಪಿಸಿ

೫. 'ಹಸಿರು ಕ್ರಾಂತಿ' ರೈತರ ಮೇಲೆ ಉಂಟು ಮಾಡಿದ ಪರಿಣಾಮಗಳೇನು? ನಿರೂಪಿಸಿ

೬. ಆಹಾರ ಬೆಳೆ ಪದ್ಧತಿ ಹಾಗೂ ಆಹಾರದ ವ್ಯವಸ್ಥೆಯನ್ನು ಬಹುರಾಷ್ಟ್ರೀಯ ಕಂಪನಿಗಳು ಹೇಗೆ ನಿಯಂತ್ರಿಸುತ್ತಿವೆ? ವಿವರಿಸಿ

## ಘಟಕ : ೩

# ೧. ಮೊದಲಗಿತ್ತಿ

**–ಅಂಬಿಕಾತನಯದತ್ತ**

**ಆಶಯ:** ಇಂದಿಗೂ ಭೌಗೋಳಿಕವಾಗಿ ಅದೆಷ್ಟೋ ಬದಲಾವಣೆ ಆಗುತ್ತಿದೆ. ಆದರೆ ಆಧುನಿಕ ಮನುಕುಲ ಭೂಮಿಗೆ ಅನಾಚಾರಗಳನ್ನು ಎಸಗುತ್ತಿದೆ. ಕ್ಷಮಯಾಧರಿತ್ರಿ ಕೋಪಿಸಿಕೊಂಡಾಗ ಭೂಕಂಪ, ಸುನಾಮಿ, ಚಂಡಮಾರುತ, ಜ್ವಾಲಾಮುಖಿ ಇತ್ಯಾದಿ ಪ್ರಕೃತಿ ವಿಕೋಪಗಳೆಲ್ಲ ಆಗಿವೆ. ಬದಲಾಗಬೇಕಾಗಿರುವುದು ಮನುಷ್ಯ ಮಾತ್ರ.

ಮೊದಲಗಿತ್ತಿಯಂತೆ ಮೆರೆಯುವಿಯೇ ಆಯಿ !
ಮೊದಲಗಿತ್ತಿಯಂತೆ ಮೆರೆಯುತಿಹೆ ॥ಪಲ್ಲವಿ॥

೧.
ಹಿಂಡಾಗಿ ಪುಂಡರು ಅಂಡಲೆಯಲು ನಿನ್ನ
ನೆತ್ತರು ಒರೆ ಹಚ್ಚಿ ನೋಡಿರುವೆ
ಪಾತಾಳ ಕಂಡರು ಕೆಲ ತಾಯ್ಗಂಡರು
ಅವರನ್ನೂ ಮಡಿಲಾಗ ಮಡಗಿಸಿಹೆ
ಹದಿನಾರು ರಾಜರು ತಲೆಕೆಳಗಾದರು
ಆದರೂ ತಲೆಯೆತ್ತಿ ನಿಂತಿರುವೆ
ನಿನ್ನ ತೇಜದ ಮುಂದೆ ರಾಜತೇಜವು ಕೂಸು
ಮೊದಲಗಿತ್ತಿಯು ನೀನು ಮೆರೆಯುತಿಹೆ.

೨.
ಒಕ್ಕುಡಿತೆ ಅರೆಮುಕ್ಕು ಎನುತೆನುತೆ ಹಲಕೆಲವು
ಪಾನಿಪತ್ತುಗಳನ್ನು ಮುಕ್ಕಳಿಸುವೆ
ಕೊಡಲಿ ರಾಮನು ಎರೆದ ಕೆನ್ನೀರ ಜಳಕಕ್ಕೆ
ಕೂದಲು ನೆನೆಯಲಿಲ್ಲೆನ್ನುತಿಹೆ
ಅವತಾರಕ್ಕೊಂದೊಂದು ಅಭಿಷೇಕ ಮಾಡಿದರು
ಎಣ್ಣೆಮಜ್ಜನ ಬೇರೆ ಬೇಕೆನುವೆ
ನೆತ್ತರ ಮೀಯಿಸುವ ಕೆಂಚರ ಕೈಯಿಳಿಸಿ
ಮೆದಲಗಿತ್ತಿಯೆ ನೀನು ಮೆರೆಯುತಿಹೆ.

೩.
ಹಾಲಿನ ಹೃದಯಕ್ಕೆ ಕುಬುಸವನು ತೊಡಿಸಿ
ಹೂ ಮುಡಿಸಿಕೊಂಡೆಂದು ನೀ ನಲಿವೆ?
ಬಸಿರು ತುಂಬಲು ಹಸಿರುಡುಗೆಯನುಟ್ಟೆಂದು
ವನವಾಸ ನವಮಾಸ ತೀರಿಸುವೆ?
ಮುನ್ನಿಲ್ಲ ಇನ್ನಾರೆ ಮಕ್ಕಳದಿನವೆಂದು
ಮೂಡೀತು ಹೇಳವ್ವ ಬಿನ್ನವಿಸುವೆ.
ಎಂದು ಮಂಗಲ ನಿನ್ನ ದೇವಗರ್ಭಕೆ?– ಇನ್ನೂ
ಮೊದಲಗಿತ್ತಿಯಂತೆ ಮೆರೆಯುತಿಹೆ!

**ಕವಿ ಪರಿಚಯ:** ದ. ರಾ. ಬೇಂದ್ರೆ (೧೮೯೬–೧೯೮೧ ಧಾರವಾಡ) ಬೆರಗುಗೊಳಿಸುವಷ್ಟು ವಿಪುಲವಾದ ಸಾಹಿತ್ಯ ಸೃಷ್ಟಿ ಮಾಡಿದವರು. ಕನ್ನಡ ಕಾವ್ಯದಲ್ಲಿ ಇವರ ಭಾವತೀವ್ರತೆ ವಿರಳವಾದುದು. ಗರಿ, ಕಾಮಕಸ್ತೂರಿ, ನಾದಲೀಲೆ, ಅರಳು ಮರಳು, ನಾಕುತಂತಿ ಇತ್ಯಾದಿ ಕವನ ಸಂಕಲನಗಳು, ಸಾಹಿತ್ಯ ಮತ್ತು ವಿಮರ್ಶೆ, ಸಾಹಿತಿ, ಸಂಶೋಧನೆ ಇವು ಅವರ ಚಿಂತನ ಕೃತಿಗಳು. ಅನುವಾದ, ನಾಟಕ, ಪ್ರಬಂಧಗಳನ್ನು ಬರೆದಿದ್ದು ಸಾಹಿತ್ಯದ ವಿರಾಟ್ ಸ್ವರೂಪ ಪ್ರಮುಖ ಕೃತಿಯಾಗಿದೆ.

**ಪ್ರಶ್ನೆಗಳು:**

೧. ಎಷ್ಟು ರಾಜರು ತಲೆಕೆಳಗಾದರು?

೨. ಮಣ್ಣಿಗಾಗಿ ಹಲವು ನಡೆದ ಹೋರಾಟಗಳು ನಡೆದಿರುವುದನ್ನು ಮೊದಲಗಿತ್ತಿ ಹೇಗೆ ಚಿತ್ರಿಸಿದೆ?

೩. ಮೊದಲಗಿತ್ತಿ ಹೇಗೆ ಮೆರೆಯುತ್ತಿದ್ದಾಳೆ?

೪. ಭೂಮಿಯ ಬಾಹ್ಯ ಲಕ್ಷಣ ವಿವರಿಸಿ.

# ೨. ಪ್ರಾಯಶ್ಚಿತ್ತ

**–ಗೊರೂರು ರಾಮಸ್ವಾಮಿ ಅಯ್ಯಂಗಾರ್**

**ಆಶಯ:** ನಮ್ಮ ಜನಪದರು 'ಬೆಳಗಾಗ ಎದ್ದೊಂದು ಗಳಿಗೆ ಭೂಮಿತಾಯಿಯನ್ನು ನೆನೆಯುವ' ಮಾತನ್ನು ಹೇಳಿದ್ದಾರೆ. ಸಕಲವನ್ನೂ ಕೊಟ್ಟಿರುವ ನಮ್ಮ ನೆಲದ ಬಗೆಗಿನ ಅಭಿಮಾನವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಸಾಧ್ಯವಾದರೆ ನಮ್ಮ ಭೂಮಿಗಾಗಿ ಎಂಥದ್ದೇ ತ್ಯಾಗಕ್ಕೂ ಸಿದ್ಧರಾಗಬೇಕು ಎಂಬ ಆಶಯ ಇಲ್ಲಿದೆ.

ಕೃಷ್ಣರಾಯ ಪೊಲೀಸ್ ಇನ್‌ಸ್ಪೆಕ್ಟರ್ ಆಗಿ ಇನ್ನೂ ಒಂದು ತಿಂಗಳಾಗಿದ್ದಿತು. ಅವನಿಗೆ ಅಧಿಕಾರದ ಹೆಮ್ಮೆಯೂ ವಿಶೇಷವಾಗಿದ್ದಿತು. ಯಾಕೆಂದರೆ, ಅವನ ಜತೆಯ ಒಂಭೈನೂರ ಇಪ್ಪತ್ತು ಅರ್ಜಿದಾರರ ಪೈಕಿ ಹುದ್ದೆ ದೊರಕಿದ್ದುದು ಅವನೊಬ್ಬನಿಗೇಯೆ! ಹೊಸದಾಗಿ ಸರ್ಕಾರಿ ನೌಕರರಿಗೆ ಸೇರುವವರಿಗೆಲ್ಲಾ ಇರುವಂತೆ ತಾನು ರಾಜ್ಯದಲ್ಲಿ ಅತ್ಯುಚ್ಚವಾದ ಪದವಿಗೆ ಏರುವೆನೆಂಬ ಆಶೆ ಅವನಿಗೂ ಇದ್ದಿತು.

ಕೃಷ್ಣರಾಯನಿಗೆ ಬಾಳಿನಲ್ಲಿ ಮೂರು ಹಂಬಲಗಳಿದ್ದವು. ಮೊದಲನೆಯದು, ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕೆಂಬುದು; ಎರಡನೆಯದು, ಪೊಲೀಸ್ ಇನ್‌ಸ್ಪೆಕ್ಟರ್ ಆಗಬೇಕೆಂಬುದು; ಮೂರನೆಯದು, ನಿವೃತ್ತ ಪೊಲೀಸ್ ಮುಖ್ಯಾಧಿಕಾರಿ ವೆಂಕಟರಾಯರ ಮಗಳು ಜಾನಕಿಯನ್ನು ಮದುವೆಯಾಗಬೇಕೆಂಬುದು. ಅವನ ಮೂರನೆಯ ಆಸೆ ಉಳಿದ ಎರಡು ಆಸೆಗಳಿಗಿಂತ ಪ್ರಬಲವಾಗಿದ್ದಿತು. ಉಳಿದ ಆಸೆಗಳು ಆ ಗುರಿಗೆ ಪೋಷಕಗಳಾಗಿದ್ದವು ಮಾತ್ರ. ಜಾನಕಿ ತನ್ನ ಹೆಂಡತಿಯಾದರೆ ತನ್ನ ಜೀವನದ ಸಾಧನೆಗಳು ಸಿದ್ಧಿಸಿದಂತೆ ಎಂದು ಕೃಷ್ಣರಾಯನು ನಂಬಿದ್ದನು. ಆ ಕಾರ್ಯ ಸಿದ್ಧಿಸುವವರೆಗೆ ತಾನು ಕೃತಕೃತ್ಯನಲ್ಲ ಎಂಬುದು ಅವನ ಭಾವವಾಗಿದ್ದಿತು.

ಕೃಷ್ಣರಾಯನಿಗೆ ನಿವೃತ್ತ ಪೊಲೀಸ್ ಶಾಖಾಧಿಕಾರಿ ವೆಂಕಟರಾಯರ ಮಗಳು ಜಾನಕಿ ಕನಸಿನಲ್ಲಿ ಕಂಡ ಪ್ರತ್ಯಕ್ಷ ಸುಂದರಿಯಾಗಿದ್ದಳು. ಅವಳನ್ನು ಜ್ಞಾಪಿಸಿಕೊಂಡರೇ ಕೃಷ್ಣರಾಯನಿಗೆ ರೋಮಾಂಚನವಾಗುತ್ತಿದ್ದಿತು. ಅವನು ಅವಕಾಶವಾದಾಗಲೆಲ್ಲಾ ಅವಳ ಹೆಸರನ್ನು ಉಚ್ಚರಿಸುತ್ತಾ ಚಪ್ಪರಿಸುತ್ತಾ ಅದರ ಸವಿಯನ್ನು ಸವಿಯುತ್ತಿದ್ದನು. ಜಾನಕಿ ಒಳ್ಳೆಯ ದೇವತೆಯಂತಹ ಹುಡುಗಿ. ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಳು. ಗಂಧರ್ವಕನ್ನಿಕೆಯಂತೆ ಹಾಡುತ್ತಿದ್ದಳು. ಕೃಷ್ಣರಾಯನಿಗಂತೂ ಇಂತಹ ಹೆಣ್ಣು ಈ ಲೋಕದಲ್ಲಿ ಬೇರೆ ಯಾರೂ ಇಲ್ಲ ಎಂಬುದು ಖಂಡಿತವಾಗಿದ್ದಿತು. ಜಾನಕಿಗಾಗಿ ಅವನು ಯಾವ ಸಾಹಸವನ್ನಾಗಲಿ ಮಾಡಲು ಸಿದ್ಧವಾಗಿದ್ದನು. ಅವಳಿಗಾಗಿ ಯಾವ ಬಾವಿಯನ್ನು ಹಾರಲಿ, ಯಾವ ಸಿಡಿಲನ್ನು ಪೊಟ್ಟಣದಲ್ಲಿ ಕಟ್ಟಿ ತಂದುಕೊಡಲಿ, ಯಾವ ರಾಕ್ಷಸರನ್ನು, ಕ್ರೂರಮೃಗಗಳನ್ನು ಕೊಂದು ಇವಳ ಪಾದದ ಮೇಲೆ ಕೆಡವಲಿ, ಎಂಬುದೇ ಕೃಷ್ಣರಾಯನ ಹಂಬಲವಾಗಿದ್ದಿತು. ಅವನು ಜಾನಕಿಗಾಗಿ ತನ್ನ ಅಧಿಕಾರದ ಹೊರತು ಪ್ರಪಂಚದಲ್ಲಿ ಮತ್ತಾವುದನ್ನೂ ಬಿಡಲು ಸಿದ್ಧನಾಗಿದ್ದನು. ಅಧಿಕಾರವನ್ನೇ ಬಿಡಬೇಕಾಗಿ ಬಂದಿದ್ದರೆ ಆಗ ಹೇಗೆ ಮಾಡುತ್ತಿದ್ದನೊ ಅವನಿಗೆ ತಿಳಿಯದು. ಆದರೆ ಅದು ಅಸಂಭವವಾದುದರಿಂದ ಅವನು ಆ ಪ್ರಶ್ನೆಯನ್ನು ಕುರಿತು ಯೋಚಿಸಿರಲಿಲ್ಲ.

ನಿವೃತ್ತ ಪೊಲೀಸ್ ಮುಖ್ಯಾಧಿಕಾರಿ ವೆಂಕಟರಾಯನಿಗೆ, ಕೃಷ್ಣರಾಯ ತಮ್ಮ ಮಗಳ ಸೀರೆಯ ಸೆರಗು ಸುತ್ತಾ ಸುಳಿಯುತ್ತಿರುವುದು ಗೊತ್ತಾಗದೆ ಇರಲಿಲ್ಲ. ಆದರೆ ಆ ಪುಷ್ಪಕ್ಕೆ ಈ ಬಗೆಯ ಭ್ರಮರಗಳು ಮುತ್ತುವುದು ಅಪರೂಪವಲ್ಲದುದರಿಂದ ಅವರು ಮೊದಮೊದಲು ಆ ಉತ್ಸಾಹಿಗಳನ್ನು ಗಮನಿಸಲೇ ಇಲ್ಲ. ಕೃಷ್ಣರಾಯ ಬಿ.ಎ. ಪ್ಯಾಸು ಮಾಡಿದ ಆನಂತರ ಅವರಿಗೆ ಸ್ವಲ್ಪ ಅವನ ಕಡೆ ದೃಷ್ಟಿ ಹೋಯಿತು. ಕೃಷ್ಣರಾಯ ಇನ್ಸ್‌ಪೆಕ್ಟರ್ ಆದಮೇಲೆಯಂತೂ ಅವನ ಇನ್ನೂ ಅಳಿಯನನ್ನಾಗಿ ಮಾಡಿಕೊಳ್ಳಬಹುದೆಂದು ವೆಂಕಟರಾಯರು ತೀರ್ಮಾನಿಸಿದರು. ಅವರು ತಮ್ಮ ಸಮ್ಮತಿಯನ್ನು. ಕೃಷ್ಣರಾಯನ ತಂದೆಗೆ ತಿಳಿಸಿದರು. ಪ್ರತ್ಯಕ್ಷವಾದ ದೇವತೆಯನ್ನು ಪೂಜಿಸಲು ಹೋಗುವ ಭಕ್ತನಂತೆ ಅಂದು ಕೃಷ್ಣರಾಯ ಜಾನಕಿಯನ್ನು ನೋಡಲು ಹೋದನು. ಆಕೆ ಗಂಭೀರವಾಗಿ ಕೃಷ್ಣರಾಯನ ಹುದ್ದೆಯನ್ನೂ ಅವನ ಜರ್ಬನ್ನೂ ಅವನ ಪೊಲೀಸ್ ಉಡುಪನ್ನೂ ಕುರಿತು ಸರಸವಾಗಿ ಹಾಸ್ಯ ಮಾಡಿದಳು. ಕೃಷ್ಣರಾಯ ತಾನೂ ಸರಸವಾದ ಭಾಷಣ ಮಾಡಬೇಕೆಂದು ಬಯಸಿ ಇದೆಲ್ಲಾ ದೇವಿಯರ ತೃಪ್ತ್ಯಾರ್ಥವಾಗಿಯೇ ಎಂದನು. ಜಾನಕಿ ನಗುತ್ತಾ" ನೀವು ಪೊಲೀಸ್ ಇನ್‌ಸ್ಪೆಕ್ಟರ್ ಆಗಬೇಕೆಂದು ನಾನು ಕೇಳಿದೆನೇ" ಎಂದಳು. ಕೃಷ್ಣರಾಯ "ನೀನಲ್ಲ. ನಿಮ್ಮ ತಂದೆಗೆ ಬೇಕಾಗಿದ್ದಿತು" ಎಂದನು.

ಜಾನಕಿ ಕುಹಕದಿಂದ "ಹಾಗಾದರೆ ನಮ್ಮ ತಂದೆಯನ್ನು ಮದುವೆಯಾಗಿ" ಎಂದಳು. ಕೃಷ್ಣರಾಯ ಏನೂ ತೋರದೆ "ನೀನು ಬೇಡ ಎಂದರೆ ಈ ಕೆಲಸಕ್ಕೆ ರಾಜೀನಾಮೆ ಕೊಡುತ್ತೇನೆ" ಎಂದು ಹೇಳಿ ಆಕೆಯ ಕೈಯಿಂದ ಪಾರಾದನು.

ಕೃಷ್ಣರಾಯನಿಗೂ ಜಾನಕಿಗೂ ವಿವಾಹ ನಿಶ್ಚಯವಾಯಿತು. ಆದರೆ ಲಗ್ನಕಾಲ ಸಮೀಪಿಸಿರಲಿಲ್ಲವಾಗಿ ಇನ್ನೂ ಮದುವೆಯಾಗಿರಲಿಲ್ಲ. ಹೊಸ ವರುಷದ ಮೊದಲನೆಯ ಲಗ್ನದಲ್ಲಿಯೇ ಮದುವೆ ಮಾಡಿಬಿಡಬೇಕೆಂದು ವಧೂವರರ ಮಾತಾಪಿತೃಗಳು ನಿಶ್ಚಯಿಸಿಕೊಂಡರು. ಕೃಷ್ಣರಾಯನಿಗೆ ಪ್ರಪಂಚದಲ್ಲಿ ಸುಖ ಸೌಂದರ್ಯ ಶಾಂತಿಗಳ ಹೊರತೂ ಮತ್ತೇನೂ ಇರುವುದು ತೋರಲೇ ಇಲ್ಲ.

ಆ ವೇಳೆಗೆ ಭಾರತದಲ್ಲಿ "ಬ್ರಿಟಿಷರೆ, ಭಾರತದಿಂದ ತೊಲಗಿ" ಎಂಬ ಕೂಗು ಎದ್ದಿತು. ಭಾರತದ ಜೀವನ ಅಲ್ಲೋಲಕಲ್ಲೋಲವಾಯಿತು. ಭಾರತ ತಾನು ಸ್ವತಂತ್ರವೆಂದು ಸಾರಿತು. ಅದರಂತೆ ನಡೆಯತೊಡಗಿತು. ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಶಾಲೆ ಕಾಲೇಜುಗಳನ್ನು ಬಿಟ್ಟು ಭಾರತ ಸ್ವತಂತ್ರವೆಂದುಕೊಂಡು ಧೀರರಾಗಿ ಹೊರಟರು. ಕಾರ್ಖಾನೆಗಳ ಕೂಲಿಗಳು ಜೀವದ ಹಂಗು ತೊರೆದು ದೇಶದ ಸ್ವಾತಂತ್ರ್ಯದ ಕರೆಯಲ್ಲಿ ಈಡಾದರು. ಭಾರತ ಹಿಂದೆಂದೂ ತೋರಿಸದ ತ್ಯಾಗವನ್ನು ಪ್ರಕಟಿಸಿತು. ಅದಕ್ಕೆ ವಿರುದ್ಧವಾಗಿ ಪಶುಶಕ್ತಿಗಳು ಎದ್ದು ವಿಕಾರ ರೂಪದಲ್ಲಿ ನರ್ತನಮಾಡಿದವು.

ನಗರದ ಗಾಂಧಿ ಮೈದಾನದಲ್ಲಿ ಶಾಲೆ ಕಾಲೇಜುಗಳಿಂದ ಹೊರಕ್ಕೆ ಬಂದಿದ್ದ ವಿದ್ಯಾರ್ಥಿನಿಯರ ಪ್ರಚಂಡ ಸಭೆ ನೆರೆದಿತ್ತು. ಮಹಿಳೆಯರು ರಜಪೂತ ರಮಣಿಯರಂತೆ ಸಿಂಹಗರ್ಜನೆ ಮಾಡುತ್ತಾ "ಇನ್ನು ಈ ಅನ್ಯಾಯ ಕೊನೆಯಾಗಲಿ, ಈ ಠಕ್ಕರ ಮೋಸದ ಮಾತುಗಳನ್ನು ನಂಬುವುದು ಸಾಕು. ನಾವು ಸ್ವತಂತ್ರರು, ನಮ್ಮನ್ನು ಆಳಲು ನಾವೇ ಅರ್ಹರು" ಎಂದು ಭಾಷಣ ಮಾಡುತ್ತಿದ್ದರು. ಒಬ್ಬೊಬ್ಬ ಹುಡುಗಿಯೂ ಒಂದೊಂದು ಶಕ್ತಿದೇವತೆಯಾಗಿ ತೋರಿದಳು. ಸಾಧುಗಳ ಯಜ್ಞವನ್ನು ಕೆಡಿಸಲು ಪೂರ್ವಕಾಲದಲ್ಲಿ ಬರುತ್ತಿದ್ದ ರಾಕ್ಷಸರಂತೆ, ಅಲ್ಲಿಗೆ ಕಾಕಿ ಉಡುಪಿನವರು ಬಂದರು. ಅವರ ಕೈಯಲ್ಲಿ ಲಾಠಿಗಳಿದ್ದವು. ಯಾವುದೋ ಹೇಡಿತನದ ಕೆಲಸವನ್ನು ಮಾಡಲು ಹೊರಟವರಂತೆ ಅವರ ಮುಖದಲ್ಲಿ ಪ್ರೇತಕಳೆ ಸುರಿಯುತ್ತಿದ್ದಿತು. ಆ ಗುಂಪಿನಲ್ಲಿ ಕೃಷ್ಣರಾಯನೂ ಕೈಯಲ್ಲಿ ಒನಕೆಯನ್ನು ಹಿಡಿದು ನಿಂತಿದ್ದನು.

ಸಭೆಯ ವೇದಿಕೆಯಲ್ಲಿ ಭಾಷಣದ ಸುರಿಮಳೆ ಪ್ರಾರಂಭವಾಯಿತು: "ಹಿಟ್ಲರ್ ಯುದ್ಧದ ಅಪರಾಧಿಯಾದರೆ ಚರ್ಚಿಲ್ ಸಹ ಯುದ್ಧದ ಅಪರಾಧಿಯೆ. ೪೦ಕೋಟಿ ಭಾರತೀಯರನ್ನು ಗುಲಾಮಗಿರಿಯಲ್ಲಿಟ್ಟವನ ಅಪರಾಧ ಹಿಟ್ಲರ್ನದಕ್ಕಿಂತ ಕಡಿಮೆಯಿಲ್ಲ. ಭಾರತದ ಗುಲಾಮಗಿರಿ ಜಗತ್ತಿನ ಮೂರನೆಯ ಮಹಾಯುದ್ಧಕ್ಕೆ ದಾರಿ,"

ಸಭೆಯಲ್ಲಿ ಹತ್ಯಾಕಾಂಡವನ್ನು ಪ್ರಾರಂಭಿಸಬೇಕಾಗಬಹುದೆಂದು ಅಲ್ಲಿಗೆ ಪೊಲೀಸ್ ಸೂಪರಿಂಟೆಂಡೆಂಟರೇ ಬಂದಿದ್ದರು. ನಮ್ಮ ದೇಶದಲ್ಲಿ ಸಾಧಾರಣವಾಗಿ ಯಾವ ಪೊಲೀಸ್ ಜವಾನ ಬೇಕಾದರೂ ಲಾಠಿ ಪ್ರಯೋಗಕ್ಕೆ ಅಪ್ಪಣೆ ಕೊಡಬಹುದು. ಭಾಷಣಗಳ ಕಾವು ವೇಗವಾಗುತ್ತಿರುವುದನ್ನು ನೋಡಿ ಸೂಪರಿಂಟೆಂಡೆಂಟರು ಕೃಷ್ಣರಾಯನಿಗೆ ಮೃದುವಾಗಿ ಲಾಠಿ ಚಾರ್ಜು ಮಾಡಿ ಎಂದರು. ಕೃಷ್ಣರಾಯ " ಛೇ ಛೇ, ಬೇಡಿ ಸಾರ್, ಬರಿಯ ಸ್ತ್ರೀಯರು. ಒಂದು ಘಳಿಗೆ ಕೂಗಿಕೊಂಡು ಹೋಗುತ್ತಾರೆ" ಎಂದನು. ಸೂಪರಿಂಟೆಂಡೆಂಟರಿಗೆ ತಮ್ಮ ಮಾತನ್ನು ಹೀಗೆ ಪ್ರತಿಭಟಿಸಿದನಲ್ಲ ಎಂಬ ಕೋಪವುಂಟಾಯಿತು. ಸಾಧಾರಣವಾಗಿ ಪೊಲೀಸ್ ದಫೇದಾರರಿಗೇ ತಾವು ಪ್ರಾಜ್ಞರೆಂಬ ಭಾವ ಇರುತ್ತದೆ; ಇನ್ನು ಸೂಪರಿಂಟೆಂಡೆಂಟರವರನ್ನು ಕೇಳಬೇಕೆ? ಅವರು "ಕಾನೂನಿನ ದೃಷ್ಟಿಯಲ್ಲಿ ಹೆಣ್ಣು ಗಂಡು ಎಲ್ಲಾ ಒಂದೇ" ಎಂದರು. ಆ ವೇಳೆಗೆ ವೇದಿಕೆಯಿಂದ ಮತ್ತೊಂದು ಸಿಂಹಿಣಿ "ಇಂಗ್ಲೆಂಡ್ ಫ್ರಾಂಕೋವಿಗೆ ಆಯುಧವನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದಾಗ ಜವಹರಲಾಲ್ ನೆಹ್ರು ಸ್ಪೈಯಿನ್ ರಿಪಬ್ಲಿಕ್‌ಗೆ ಸಹಾಯ ಮಾಡಬೇಕೆಂದು ವಾದಿಸುತ್ತಿದ್ದರು. ಇಂಗ್ಲೆಂಡ್, ಅಮೇರಿಕಾ, ಜಪಾನಿಗೆ ಗುಟ್ಟಾಗಿ ಸಹಾಯ ಮಾಡುತ್ತಿದ್ದರೂ ನೆಹ್ರೂ ಚೀಣಾವಿಗೆ ಬೇಕಾದ ಸಹಾಯ ಕೊಟ್ಟರು. ಒಂದು ವೈದ್ಯಪಡೆಯನ್ನು ಕಳುಹಿಸಿದರು. ಯುದ್ಧ ಜಗತ್ತಿನ ಸ್ವಾತಂತ್ರ್ಯಕ್ಕೆ ಎಂಬುದು ಠಕ್ಕರ ಮಾತು" ಎಂದು ಗರ್ಜಿಸಿತು. ಸೂಪರಿಂಟೆಂಡೆಂಟರಿಗೆ ಪಿತ್ತ ನೆತ್ತಿಗೆ ಏರಿತು. ಅವರು ಮಾರೀಕೋಣವನ್ನು ಕಡಿಯುವವನ ಆವೇಶದಿಂದ "ಛಾರ್ಜ್" ಎಂದು ಕೂಗಿದರು. ಪೊಲೀಸ್ ವೀರರು ದೊಣ್ಣೆಗಳೊಂದಿಗೆ ಮಹಿಳೆಯ ಮೇಲೆ ಬಿದ್ದರು.

ಇದ್ದಕ್ಕಿದ್ದಂತೆ ಗುಂಪಿನಲ್ಲಿ ಗೊಂದಲ ಹಾಹಾಕಾರ ಉಂಟಾದವು. ಪೊಲೀಸರು ಮತ್ತರಾಗಿ ಓಡುತ್ತಿದ್ದವರನ್ನೂ ಹೊಡೆದರು. ಸೊಂಟದಿಂದ ಕೆಳಕ್ಕೆ ಲಾಠಿ ಪ್ರಯೋಗಿಸಬಾರದೆಂದು ನಿಯಮವಿದ್ದರೂ ಮಹಿಳೆಯರ ತಲೆಗಳಿಗೆ ಹೊಡೆದರು ಕೃಷ್ಣರಾಯ ನೂ ತನ್ನ ಕರ್ತವ್ಯವನ್ನು ಒಳ್ಳೆಯ ದಕ್ಷತೆಯಿಂದಲೇ ಮಾಡಿದನು. ಧೀರನಾದವನು ಕತ್ತಿಯನ್ನು ತಿರುಗಿಸುವಂತೆ ತನ್ನ ಕೈಯಲ್ಲಿದ್ದ ದೊಣ್ಣೆಯನ್ನು ನಾನಾ ಕಡೆಗೆ ತಿರುಗಿಸಿದನು. ಓಡುತ್ತಿದ್ದ ಒಂದು ಗುಂಪನ್ನು ಅಟ್ಟಿಸಿಕೊಂಡು ಹೋಗಿ ಮೊದಲು ಸಿಕ್ಕಿದ ಸ್ತ್ರೀಯ ತಲೆಯ ಮೇಲೆ ಕೃಷ್ಣರಾಯ ಒಂದು ಬಡಿದನು. ಆಕೆ ಅಯ್ಯೋ ಎಂದುಕೊಂಡು ಕೆಳಕ್ಕೆ ಬಿದ್ದಳು.

ಆ ಧ್ವನಿಯನ್ನು ಕೇಳಿ  ಕೃಷ್ಣರಾಯ ಬೆಚ್ಚಿಬಿದ್ದನು. ಮೂರ್ಛೆಹೋಗುವುದಕ್ಕೆ ಮುಂಚೆ ಜಾನಕಿಯೂ ಕೃಷ್ಣರಾಯನನ್ನು ಗುರುತಿಸಿದಳು. ಆ ನೋಟದಲ್ಲಿ ಕಂಡ ತಿರಸ್ಕಾರ ಕೃಷ್ಣರಾಯನಿಗೆ ಬರೆ ಹಾಕಿದಂತೆ ಆಯಿತು.

ಆ ಗಳಿಗೆಯಿಂದ ಮುಂದೆ ಕೃಷ್ಣರಾಯನಿಗೆ ಬುದ್ಧಿ ಸ್ವಾಧೀನದಲ್ಲಿರಲಿಲ್ಲ. ಆಮೇಲೆ ಏನು ನಡೆಯಿತೋ ಸರಿಯಾಗಿ ಜ್ಞಾಪಕವಿಲ್ಲ. ಅವನು ಮನೆಗೂ ಹೋಗಲಿಲ್ಲ. ಕಛೇರಿಗೂ ಹೋಗಲಿಲ್ಲ. ನಾನು ಪಾಪಿ,ನಾನು ಹೇಡಿ ಎಂದುಕೊಂಡು ಅವನು ಕೆರೆಯ ಕಡೆಗೆ ಹೋದನು. ಇನ್ನು ಜಾನಕಿಗೆ ಹೇಗೆ ಮುಖ ತೋರಿಸಲಿ? ಕೆರೆಗೆ ಬಿದ್ದುಸಾಯುತ್ತೇನೆ ಎಂಬುದು ಅವನ ತೀರ್ಮಾನವಾಯಿತು. ಆದರೆ ಕೆರೆಯ ಏರಿಯ ಮೇಲೆ ಒಂದು ಘಂಟೆ ಕುಳಿತು ಶಾಂತವಾಗಿ ಯೋಚನೆ ಮಾಡಿದಾಗ "ಹೀಗೆ ಪ್ರಾಣ ಕಳೆದುಕೊಳ್ಳುವುದು ಹೇಡಿತನ. ಈ ಬಾಳನ್ನು ಇನ್ನೂ ಉತ್ತಮ ಸೇವೆಗೆ ಉಪಯೋಗಿಸಬಹುದು. ನಾನು ಹೇಡಿಯಾದುದರಿಂದಲೇ ಭಾರತ ಸ್ವಾತಂತ್ರ್ಯ ದೇವತೆಗಳ ಮೇಲೆ ದೊಣ್ಣೆ ಎತ್ತಿದೆ. ಈ ಪಾಪಕ್ಕೆ ಭಾರತದ ಸೇವೆಯೇ ಪ್ರಾಯಶ್ಚಿತ್ತ. ಈ ದೇಹ ಇನ್ನು ನನ್ನದಲ್ಲ. ಇದನ್ನು ಭಾರತದ ಸೇವೆಗೆ ಮೀಸಲು ಮಾಡಿದೆ" ಎಂಬುದು ಅವನ ನಿಶ್ಚಯವಾಯಿತು. ಈ ತೀರ್ಮಾನ ಕೃಷ್ಣರಾಯನಿಗೆ ಹಿಂದಾವುದೂ ಕೊಡದ ವಿಚಿತ್ರವಾದ ಆನಂದವನ್ನೂ ಶಾಂತಿಯನ್ನೂ ಕೊಟ್ಟಿತು. ಅವನ ಹಿಂದಿನ ಆಸೆ ಆಕಾಂಕ್ಷೆಗಳು ಈ ತೀರ್ಮಾನದ ದೃಷ್ಟಿಯಲ್ಲಿ ಅತ್ಯಲ್ಪವಾಗಿ ತೋರಿದವು. ಮೊದಲೇ ಇದು ನನಗೆ ಹೊಳೆಯಲಿಲ್ಲವಲ್ಲಾ ಎಂದು ಅವನಿಗೆ ತನ್ನಲ್ಲಿಯೇ ತಿರಸ್ಕಾರ ಉಂಟಾಯಿತು. ಅವನನ್ನು ಕರ್ತವ್ಯಕ್ಕೆ ಎಚ್ಚರಿಸುವಂತೆಯೋ ಎಂಬಂತೆ ಸ್ವಯಂ ಸೇವಕರ ಗುಂಪು "ಜೈ ಸ್ವತಂತ್ರ ಭಾರತ" ಭಾರತದ ಕಳ್ಳರನ್ನು ಹೊರದೂಡಿ" ಎಂದುಕೊಂಡು ರಾಷ್ಟ್ರ ಭಾವುಟವನ್ನು ಹಿಡಿದುಕೊಂಡು ಆ ದಾರಿಯಲ್ಲಿ ಬಂದರು. ಕೃಷ್ಣರಾಯ ತನ್ನ ಕಾಕಿ ಉಡುಪುಗಳನ್ನು ಕೆರೆಗೆ ಎಸೆದನು. ಸ್ವಯಂಸೇವಕರಿಂದ ಒಂದೊಂದು ಖಾದಿ ಬಟ್ಟೆಗಳನ್ನು ಕಿತ್ತು ಧರಿಸಿಕೊಂಡು "ಜೈ ಸ್ವತಂತ್ರ ಭಾರತ" ಎಂದುಕೊಂಡು ಮುಂದೆ ಹೊರಟನು.

ಆ ದಿನ ಸೆರೆಮನೆಗೆ ಸಂದರ್ಶನಕ್ಕಾಗಿಯೂ, ಬಂಧುಗಳನ್ನು ನೋಡಲೂ ಬಂದವರ ಸಂಖ್ಯೆ ಹೆಚ್ಚು. ತನ್ನನ್ನು ನೋಡಲು ಮಹಿಳೆಯೊಬ್ಬಳು ಬಂದಿರುವುದನ್ನು ಕೇಳಿ ಕೃಷ್ಣರಾಯನಿಗೆ ಆಶ್ಚರ್ಯವಾಯಿತು. ಅವನು ಅರ್ಧ ಆಶೆಯಿಂದಲೂ ಅರ್ಧ ಭಯದಿಂದಲೂ ಹೊರಕ್ಕೆ ಬಂದನು. ಜಾನಕಿಯನ್ನು ನೋಡಿ ಅವನಿಗೆ ಏನೂ ಮಾತನಾಡಲು ಬಾಯಿ ಬರಲಿಲ್ಲ. ಅವಳ ನೆತ್ತಿಯ ಗಾಯಕ್ಕೆ ಕಟ್ಟಿದ ಬಟ್ಟೆ ಹಾಗೆಯೇ ಇದ್ದಿತು. ಕೃಷ್ಣರಾಯ ನಾಚಿಕೆಯಿಂದಲೂ ತಿರಸ್ಕಾರದಿಂದಲೂ ತನ್ನ ಕೈ ನೋಡಿಕೊಂಡನು. ಜಾನಕಿ ಹೆಮ್ಮೆಯಿಂದ "ಇದು ಯಾಕೆ ಹೀಗೆ ಮಾಡಿದಿರಿ?" ಎಂದಳು. ಕೃಷ್ಣರಾಯ ಒಂದು ಗಳಿಗೆ ಸುಮ್ಮನಿದ್ದು "ಇದು ಪ್ರಾಯಶ್ಚಿತ್ತ" ಎಂದನು.

ಆ ದಿನದ ಪತ್ರಿಕೆಯಲ್ಲಿ ಸೂಪರಿಂಟೆಂಡೆಂಟರು ಮಹಿಳೆಯರ ಮೇಲೆ ಮಾಡಿಸಿದ್ದ ಲಾಠಿ ಛಾರ್ಜನ್ನು ಕುರಿತು ಹೀಗೆ ಪ್ರಕಟವಾಗಿದ್ದಿತು: "ಮಹಿಳೆಯರು ಪೊಲೀಸಿನವರ ಮೇಲೆ ಕಲ್ಲೆಸೆದರು. ಸೂಪರಿಂಟೆಂಡೆಂಟರು ಮೃದುವಾಗಿ ಬೆತ್ತದ ಹೊಡೆತದ ಆರ್ಡರ್ ಕೊಟ್ಟರು"

ಕೃಷ್ಣರಾಯ "ಹೇಡಿಗಳು" ಎಂದುಕೊಂಡು ಪತ್ರಿಕೆಯನ್ನು ಬಿಸಾಡಿದನು.

**ಕತೆಗಾರರ ಪರಿಚಯ:** ಗೊರೂರು ರಾಮಸ್ವಾಮಿ ಅಯ್ಯಂಗಾರ್ ಇವರು ೧೯೦೪ರಲ್ಲಿ ಅರಕಲಗೂಡು ತಾಲ್ಲೂಕಿನ ಗೊರೂರು ಗ್ರಾಮದಲ್ಲಿ ಜನಿಸಿದರು. ಕಾವ್ಯನಾಮ–ಸೀತಾತನಯ. ಹಳ್ಳಿಯ ಚಿತ್ರಗಳು, ನಮ್ಮೂರಿನ ರಸಿಕರು, ಹಳ್ಳಿಯ ಹಾಡುಗಳು, ಗರುಡು ಗಂಬದ ದಾಸಯ್ಯ, ಹಳ್ಳಿಯ ಬಾಳು– ಇವು ಇವರ ಕೆಲವು ಕಥೆ/ಪ್ರಬಂಧ/ ವಿನೋದ ಚಿತ್ರಗಳಾಗಿವೆ. ಹೇಮಾವತಿ, ಊರ್ವಶಿ ಪ್ರಮುಖ ಕಾದಂಬರಿಗಳಾಗಿವೆ.

**ಪ್ರಶ್ನೆಗಳು:**

೧. ಕೃಷ್ಣರಾಯನಿಗಿದ್ದ ಹಂಬಲಗಳಾವುವು?
೨. ಜಾನಕಿಯನ್ನು ಕುರಿತ ಕೃಷ್ಣರಾಯರ ಪ್ರೇಮವನ್ನು ವಿವರಿಸಿ.
೩. ಈ ಕಥೆಯಲ್ಲಿ ಮೂಡಿಬಂದಿರುವ ಸ್ವಾತಂತ್ರ್ಯಾ ಚಳುವಳಿ ಹೋರಾಟದ ಪರಿಯನ್ನು ವಿವರಿಸಿ.
೪. ಕೃಷ್ಣರಾಯರು 'ಪ್ರಾಯಶ್ಚಿತ್ತ' ಪಟ್ಟ ಬಗೆ ಹೇಗೆ?

# ೩. ಬಾ ಇಲ್ಲಿ ಸಂಭವಿಸು

**–ಆನಂದತೀರ್ಥ ಪ್ಯಾಟಿ**

**ಆಶಯ:** ವ್ಯವಸಾಯ ಮಾನವನ ಅತ್ಯಂತ ಮಹತ್ವದ ಅನ್ವೇಷಣೆ. ಅದು ಮನುಷ್ಯನ ಜೀವಕ್ಕೆ ಅಗತ್ಯವಾದ ಆಹಾರವನ್ನು ಪೂರೈಸುವುದಷ್ಟೇ ಅಲ್ಲದೆ; ಒಂದು ರಾಷ್ಟ್ರದ ಸಮಗ್ರ ಬೆಳವಣಿಗೆಗೆ ಬೇಕಾಗುವ ಅನೇಕ ಸಂಪನ್ಮೂಲಗಳನ್ನು ಒದಗಿಸುವ ಪ್ರಧಾನವಾದ ಕ್ಷೇತ್ರ ಕೂಡಾ ಆಗಿದೆ. ಅಲ್ಲದೆ ಒಂದು ದೇಶದ ಸಂಸ್ಕೃತಿಯನ್ನು ರೂಪಿಸುವಲ್ಲಿ ಕೃಷಿ ವಹಿಸುವ ಪಾತ್ರ ಮಹತ್ತರವಾದುದು. ಆದ್ದರಿಂದಲೇ ಕೃಷಿ ಸಂಸ್ಕೃತಿ ಎನ್ನುವ ಪರಿಕಲ್ಪನೆ ಹುಟ್ಟಿರುತ್ತದೆ. ಆದರೆ ಬಂಡವಾಳಶಾಹಿಯ ಕೈಗಾರಿಕೀಕರಣ ಮತ್ತು ವ್ಯಾಪಾರೀಕರಣದಿಂದಾಗಿ ಕೃಷಿ ಇಂದು ತನ್ನ ಮೂಲಸ್ವರೂಪವನ್ನು ತೀವ್ರವಾಗಿ ಕಳೆದುಕೊಂಡಿದೆ. ಅಧಿಕ ಇಳುವರಿಯ ಆಧುನಿಕ ರಾಸಾಯನಿಕ ಕೃಷಿ ಪದ್ಧತಿಯಿಂದಾಗಿ ಮನುಷ್ಯ ಹಾಗೂ ಪರಿಸರದ ಮೇಲೆ ಸುಲಭವಾಗಿ ಸರಿಪಡಿಸಲಾಗದಂಥ ದುಷ್ಪರಿಣಾಮಗಳು ಉಂಟಾಗುತ್ತಿವೆ. ಸಾವಿರಾರು ವರ್ಷಗಳಿಂದ ಮನುಷ್ಯನ ವಿವೇಕ ಕಾಪಾಡಿಕೊಂಡು ಬಂದಿದ್ದ ಬೀಜಗಳು, ತಳಿಗಳು ಹಾಗೂ ಅರ್ಥಪೂರ್ಣ ವ್ಯವಸಾಯ ವಿಧಾನಗಳು ಇಂದು ಕಣ್ಮರೆಯಾಗಿವೆ. ಪರಿಸರ ನಾಶವೇ ಆಧುನಿಕ ಕೃಷಿಯ ಮೂಲಮಂತ್ರವೆನ್ನುವಂತಾಗಿದೆ. ಇದನ್ನು ಶೀಘ್ರವಾಗಿ ಕೊನೆಗೊಳಿಸಿ ಪರಂಪರೆಯ ಜ್ಞಾನವನ್ನು ಬೆನ್ನೆಲುಬಾಗಿ ಹೊಂದಿರುವ ಪರಿಸರ ಪೂರಕವಾದ ಸಾಂಪ್ರದಾಯಿಕ ಸುಸ್ಥಿರ ಕೃಷಿ ಪದ್ಧತಿಯನ್ನು ಪುನರುಜ್ಜೀವನಗೊಳಿಸುವುದರಿಂದ ಮನುಕುಲ ಇಂದು ಎದುರಿಸುತ್ತಿರುವ ದೊಡ್ಡ ಗಂಡಾಂತರಗಳಿಂದ ಪಾರುಮಾಡಬಹುದಾಗಿದೆ.

ಕಗ್ಗತ್ತಲನ್ನು ಭೇದಿಸಿ ಬಸ್ ಮುನ್ನುಗ್ಗುತ್ತಿತ್ತು. ಒಡಿಶಾದ ರಾಜಧಾನಿಯಿಂದ ಬರೀ ನೂರೈವತ್ತು ಕಿಲೋಮೀಟರ್ ದೂರದ ಊರು, ಥೇಟ್ ಕೊಳಚೆಗುಂಡಿಯಂತಿದ್ದ ಭುವನೇಶ್ವರ ಬಸ್ ನಿಲ್ದಾಣದಲ್ಲಿ ರಾತ್ರಿ ಬಸ್‌ನಲ್ಲಿ ಕುಳಿತಾಗ, 'ಕೊಹಾಂ?' ಎಂಬ ಕಂಡಕ್ಟರ್ ಪ್ರಶ್ನೆಗೆ 'ಸಂಭವ ಆಶ್ರಮ' ಎಂದು ಹೇಳಿ ಟಿಕೆಟ್ ಪಡೆದಿದ್ದೆವು. ಐದು ತಾಸು ಪಯಣಿಸಿದರೂ ಸ್ಥಳ ಬಂದಿರಲಿಲ್ಲ. ಡ್ರೈವರ್ ಕಂಡಕ್ಟರ್ ಬಳಿ ಹತ್ತಾರು ಸಲ ಕೇಳಿದರೂ 'ಇನ್ನೂ ಬಂದಿಲ್ಲ.... ಇರಿ' ಎಂಬರ್ಥದ ಸನ್ನೆ ಮಾಡುತ್ತಿದ್ದರು. ನಡುರಾತ್ರಿ ಒಂದೂವರೆ ಗಂಟೆಗೆ ಡ್ರೈವರ್ ದಿಢೀರ್ ಬ್ರೇಕ್ ಹಾಕಿದಾಗ, ಒಬ್ಬ ವ್ಯಕ್ತಿ ಟಾರ್ಚ್ ಹಿಡಿದುಕೊಂಡು ಬಸ್‌ನೊಳಗೆ ಎರಡು ಮೆಟ್ಟಿಲು ಹತ್ತಿ 'ಕರ್ನಾಟಕ..?' ಎಂದ ಕೂಡಲೇ ಲಗೇಜ್‌ನೊಂದಿಗೆ ಧಡಬಡ ಇಳಿದೆವು. ಬಸ್ ಮುಂದೆ ಹೋಗಿ, ಕಣ್ಮರೆಯಾದ ತಕ್ಷಣ ಮತ್ತೆ ಕಗ್ಗತ್ತಲು. ಟಾರ್ಚ್‌ನ ಕ್ಷೀಣ ಬೆಳಕಿನಲ್ಲಿ ಹೊರಟಾಗ, ಅಕ್ಕಪಕ್ಕ ಕಾಡು. 'ಎಂಥ ಕಡೆ ಬಂದ್ ಇದ್ದಾರಲ್ಲ ಮಾರಾಯ!' ಎಂಬ ಉದ್ಗಾರ ಹೊರಟಿತು. ಮೂರ್ನಾಲ್ಕು ತಾಸು ನಿದ್ದೆ ಮಾಡಿ ಎದ್ದಾಗ ಕೇಳಿಸಿದ್ದು ನವಿಲು, ಮಂಗಗಳ ಕೂಗು. ಕೊಠಡಿ ಹಿಂದೆಯೇ ಹತ್ತಾರು ಜಿಂಕೆಗಳು ಓಡಿಹೋದ ಸದ್ದು. ನಾನಾ ಪಕ್ಷಿಗಳ ಕಲರವ 'ಹ್ವಾ ಒಳ್ಳೇ ಜಾಗ! ಎಂಬ ಮೆಚ್ಚುಗೆ ಎಲ್ಲರದ್ದೂ, 'ಅರ್ಧ ಒಂದು ಅಡಿ ಎತ್ತರದ ಹುಲ್ಲು ಬಿಟ್ಟರೆ ಬೇರೇನೂ ಬೆಳೆಯದ ಈ ಜಾಗ ಇಂದು ಈ ಸ್ಥಿತಿಗೆ ಬಂದಿದೆ' ಎಂಬ ದನಿ ಕೇಳಿ ಹಿಂದೆ ನೋಡಿದಾಗ, ಸಬರಮತಿ ಮುಗುಳ್ನಗುತ್ತ ನಿಂತಿದ್ದರು.

ಆಂಧ್ರಪ್ರದೇಶದ ಹಿರಿಯ ಐಎಎಸ್ ಅಧಿಕಾರಿಯೊಬ್ಬರ ಮಗಳು ಒಡಿಶಾದ ಮೂಲೆಯೊಂದರಲ್ಲಿ ಬುಡಕಟ್ಟು ಸಮುದಾಯದವರ ಜತೆ ಸೇರಿಕೊಂಡು, ಜೀವ ವೈವಿಧ್ಯ ರಕ್ಷಣೆಗೆ ಶ್ರಮಿಸುತ್ತಿರುವ ಬಗ್ಗೆ ಮಿತ್ರ ಜಿ.ಕೃಷ್ಣಪ್ರಸಾದ್ ಹೇಳಿದಾಗ ಹಲವು ಪ್ರಶ್ನೆಗಳು ಮೂಡಿದ್ದವು. ತಿರುಪತಿಯಲ್ಲಿ ನಡೆದ 'ಬೀಜ ಸಂರಕ್ಷಕರ ಮೇಳ'ಕ್ಕೆ ತನ್ನೂರಿನ ವೈಶಿಷ್ಟ್ಯಪೂರ್ಣ ಭತ್ತದ ತೆನೆಗಳನ್ನು ಹೊತ್ತು ತಂದಿದ್ದ ಸಬರಮತಿ ತಮ್ಮ ಕೆಲಸದ ಬಗ್ಗೆ ಹೆಚ್ಚೇನೂ ಹೇಳದೇ, 'ನಮ್ಮೂರಿಗೆ ಬನ್ನಿ' ಎಂದು ಆಹ್ವಾನಿಸಿದ್ದರು. ನಂತರ ಭುವನೇಶ್ವರದಲ್ಲಿ ನಡೆದ 'ಭತ್ತ ಉಳಿಸಿ ಆಂದೋಲನ'ದ ಕಾರ್ಯಕ್ರಮದಲ್ಲಿ, ಒಡಿಶಾದ ಮೂಲ ತಳಿಗಳ ಅವನತಿ ಹಾಗೂ ಕೃಷಿಯಲ್ಲಿ ಮಹಿಳೆಯರ ಪಾತ್ರದ ಕಣ್ಮರೆ ಕುರಿತು ಅವರು ಕಳವಳದಿಂದಲೇ ಮಾತಾಡಿದ್ದರು. 'ಒಬ್ಬೊಬ್ಬ ರೈತ ಒಂದೊಂದು ತಳಿ ದತ್ತು ಪಡೆದು, ಪೋಷಿಸುತ್ತಾ ಹೋದರೆ ಸಾವಿರಾರು ತಳಿಗಳು ರೈತರ ಹೊಲದಲ್ಲೇ ಸುರಕ್ಷಿತವಾಗಿರುತ್ತವಲ್ಲ?' ಎಂದಿದ್ದರು. ತಾವು ಮಾಡುತ್ತಿರುವುದು ಅಂಥ ವಿನೂತನ ಪ್ರಯತ್ನವನ್ನೇ ಎಂದೂ ಹೇಳಿದ್ದರು. ಅದನ್ನು ನೋಡಲೆಂದು ಕರ್ನಾಟಕದ ರೈತರೊಂದಿಗೆ ರೋಹಿಬಂಕಾ ಗ್ರಾಮಕ್ಕೆ ಬಂದಿಳಿದಾಗ ಕಂಡಿದ್ದು ಸುತ್ತ ಕುರುಚಲು ಕಾಡು, ಬುಡಕಟ್ಟು ಹಳ್ಳಿಗಳು, ಉನ್ನತ ಪದವಿ ಪಡೆದ ಯುವತಿಯೊಬ್ಬಳು ಏಕಾಂಗಿಯಾಗಿ ಇಂಥ ಪ್ರದೇಶಕ್ಕೆ ಬಂದು ಅವರೊಂದಿಗೇ ಇದ್ದು, ಪರಿವರ್ತನೆಯ ದಾರಿಯಲ್ಲಿ ಜನರನ್ನು ಕೊಂಡೊಯ್ಯುವುದು ಸುಲಭವೇನೂ ಅಲ್ಲವಲ್ಲ?

ಇದು ಅಸಂಭವ....

ರಾಧಾಮೋಹನ್ ಸರ್ಕಾರದಲ್ಲಿ ಉನ್ನತ ಹುದ್ದೆಯಲ್ಲಿದ್ದ ಅಧಿಕಾರಿ, ಪರಿಸರ ಹಾಗೂ ಕೃಷಿಕರ ಬಗೆಗೆ ಅವರು ಮಾಡುತ್ತಿದ್ದ ಚಿಂತನೆ ಹಾಗೂ ಅನುಷ್ಠಾನದ ಪ್ರಯತ್ನಗಳು ಅವರ ಪುತ್ರಿ ಸಬರಮತಿ ಮೇಲೆ ಪ್ರಭಾವ ಬೀರಿದವು. ಅರ್ಥಶಾಸ್ತ್ರದಲ್ಲಿ ಪದವಿ, ನಂತರ ಗ್ರಾಮೀಣಾಭಿವೃದ್ಧಿಯಲ್ಲಿ ಸ್ನಾತಕೋತ್ತರ ಪದವಿ ಪಡೆದ ಸಬರಮತಿ ತಮ್ಮ ಮುಂದಿನ ಗುರಿಯನ್ನು ಅದಾಗಲೇ ನಿರ್ಧರಿಸಿದ್ದರು. ಕಾರ್ಮಿಕರ ಕುರಿತು ಅವರು ಪಿಎಚ್.ಡಿ ಮಾಡುವಾಗ ವ್ಯಾಪಕ ಅಧ್ಯಯನ ನಡೆಸುತ್ತಿದ್ದ ಸಂದರ್ಭದಲ್ಲಿ ಕೃಷಿ ಒಳನೋಟಗಳು ಅವರನ್ನು ಕಂಗೆಡಿಸಿದವು. ನಯಾಗಢ ಜಿಲ್ಲೆಯ ರೋಹಿಬಂಕಾ ಎಂಬ ಹಳ್ಳಿಯನ್ನು ಆಯ್ದುಕೊಂಡು, ತಂದೆಯ ನೆರವಿನೊಂದಿಗೆ ಕೃಷಿ ಹಾಗೂ ಪರಿಸರ ಸಂರಕ್ಷಣೆಗೆ ಹಲವು ಯೋಜನೆಗಳನ್ನು ಅನುಷ್ಠಾನ ಮಾಡಲು ಅಲ್ಲಿಗೆ ಬಂದಿಳಿದರು.

ಅದು ೧೯೮೮ ಜನವರಿ ತಿಂಗಳ ಒಂದು ದಿನ ಸುತ್ತಲಿನ ಹಳ್ಳಿಗಳಲ್ಲಿ ಕೆಲಸ ಮಾಡುತ್ತಿದ್ದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಂಘಟನೆಗಳ ಸದಸ್ಯರನ್ನು ಒಗ್ಗೂಡಿಸಿ ರೋಹಿಬಂಕಾದಲ್ಲಿ ಸಭೆ ನಡೆಸಿದರು. ನಾಲ್ಕಡಿ ಎತ್ತರದ ಹುಲ್ಲು ಗರಿಕೆ ಬಿಟ್ಟರೆ ಬೇರೇನೂ ಇಲ್ಲದ ನೆಲ ಅದು. ರಾಸಾಯನಿಕಗಳ ಅಬ್ಬರದಲ್ಲಿ ಕೃಷಿ ಆಗ ಕವಲು ದಿಕ್ಕಿನಲ್ಲಿ ಸಾಗುತ್ತಿತ್ತು. ರಾಸಾಯನಿಕ ಕೃಷಿಯ ಅಪಾಯಗಳೇನು? ಸುಸ್ಥಿರ ನೈಸರ್ಗಿಕ ಕೃಷಿ ಅಳವಡಿಸಿಕೊಳ್ಳುವುದು ಹೇಗೆ? ಇತ್ಯಾದಿ ಮಾಹಿತಿ ನೀಡಿದ ಸಬರಮತಿ, ರೋಹಿಬಂಕಾ ಗ್ರಾಮವನ್ನು ಜೀವ ವೈವಿಧ್ಯ ರಕ್ಷಣೆ ತಾಣವನ್ನಾಗಿ ಮಾಡುವ ಕನಸು ಮುಂದಿಟ್ಟರು. ಎಲ್ಲೆಡೆ ಸಿಗುವಂತೆ, ನಿರಾಸೆಯ ಪ್ರತಿಕ್ರಿಯೆಗಳೇ ಸಾಕಷ್ಟಿದ್ದವು. ಎಲ್ಲಕ್ಕೂ ಕೊನೆಯೆಂಬಂತೆ, ಅಲ್ಲಿದ್ದ ವೃದ್ಧನೊಬ್ಬ ನಿರಾಸಕ್ತಿಯಿಂದ ನುಡಿದ: 'ಇಲ್ಲ... ಇದು ಅಸಂಭವ', **"ಅಂದೇ ನಮ್ಮ ಸಂಸ್ಥೆಯ ಹೆಸರು 'ಸಂಭವ'** ಎಂಬುದಾಗಿ ನಾಮಕರಣ ಮಾಡಿದೆವು. ಅಸಂಭವ ಎನ್ನುವುದನ್ನೇ ಸವಾಲಾಗಿ ತೆಗೆದುಕೊಂಡು, ಅದೇ ಮನೋಭಾವದ ರೈತರ ಜತೆ ಸೇರಿ ಕೆಲಸ ಆರಂಭಿಸಿದೆವು. ನೀವೀಗ ನೋಡುತ್ತಿರುವುದು ಎರಡು ದಶಕಗಳ ಸತತ ಪರಿಶ್ರಮದ ಫಲಿತಾಂಶ" ಎಂದು ಹೇಳಿದರು ಸಬರಮತಿ. ೧೯೮೮ರ ಮಾರ್ಚ್ ೮ರಂದು (ಮಹಿಳಾ ದಿನಾಚರಣೆಯಂದು) 'ಸಂಭವ' ನೊಂದಣಿಯಾಯಿತು.

**ಬೊಗಸೆ ತುಂಬ ಬೀಜ:** ಅನುಪಯುಕ್ತ ಎಂದು ಪರಿಗಣಿಸುವ ಜಮೀನನ್ನು ಬೇರೆಯವರಿಗೆ ಅಲ್ಪ ಅಥವಾ ದೀರ್ಘಾವಧಿ ಗುತ್ತಿಗೆ ಮೇಲೆ ಕೊಡಬಹುದಾದ ಅವಕಾಶ ಒರಿಸ್ಸಾದಲ್ಲಿದೆ. ಆ ಭೂಮಿಯಲ್ಲಿ ಏನಾದರೂ ಬೆಳೆದುಕೊಳ್ಳಬಹುದೇ ಹೊರತು ಒಡೆತನ ಸಾಧಿಸುವಂತಿಲ್ಲ. ಇದನ್ನೇ ಬಳಸಿಕೊಂಡು, ೨೨ ಎಕರೆ ಜಮೀನು (ಪ್ರತಿ ಎಕರೆಗೆ ಐನೂರು ರೂಪಾಯಿ) ಪಡೆದ 'ಸಂಭವ' ಸಂಸ್ಥೆ, ಅಲ್ಲಿ ವಿವಿಧ ಸಸಿ ನಾಟಿ ಮಾಡಿತು. ಪಕ್ಕದಲ್ಲೇ ಒಂದೂವರೆ ಎಕರೆ ಗದ್ದೆ ಖರೀದಿಸಿ, ಸಾಂಪ್ರದಾಯಿಕ ಭತ್ತ ಸಂರಕ್ಷಣೆಗೆ ಮುಂದಾಯಿತು. ನಮಿತಾ ಎಂಬ ಕಾರ್ಯಕರ್ತೆಯ ಜತೆ ಹಳ್ಳಿಹಳ್ಳಿಗಳಲ್ಲಿ ತಿರುಗಾಡಿದ ಸಬರಮತಿ, ಮನೆಗಳ ಅಟ್ಟಗಳಲ್ಲಿ ಅಡಗಿಸಿಟ್ಟಿದ್ದ ಬೊಗಸೆ ಬೀಜಗಳನ್ನು ತಂದು ಜತನದಿಂದ ಊರಿದರು. 'ಸದ್ಯ ನಮ್ಮಲ್ಲಿ ನಾನ್ನೂರಕೂ' ಹೆಚ್ಚು ತಳಿಗಳಿವೆ; ನೀವು ಇನ್ನೊಂದಷ್ಟು ತಳಿ ಕೊಟ್ಟರೆ ಆ ಸಂಖ್ಯೆ ಇನ್ನಷ್ಟಾಗುತ್ತದೆ' ಎಂದು ನಗುತ್ತಲೇ ಕೋರಿಕೆ ಇಟ್ಟರು ಸಬರಮತಿ. ಭತ್ತದ ಲೋಕ ಅರಳಿದ ಜಾಗ ಅಚ್ಚರಿ ಮೂಡಿಸಿತು. ಒಂದೊಂದು ತಳಿಗೂ ಒಂದೊಂದು ವಿಶೇಷ ಗುಣ, ಎತ್ತರ, ಗಿಡ್ಡ, ಹೆಚ್ಚು ತೆಂಡೆ, ಉದ್ದನೆಯ ಕಾಳು, ಸುವಾಸಿತ... ಒಣಗುತ್ತಿದ್ದ ಭತ್ತದ ಪೈರು ನೋಡಿದ ನಮ್ಮ ರೈತನೊಬ್ಬ 'ಇದಕ್ಕೆ ಒಂದಷ್ಟು ಗಂಜಲ ಸ್ಪ್ರೇ ಮಾಡಿದ್ರ ಬೆಳೆ ಬೆಸ್ಟ್ ಬರ್ತದ' ಎಂಬ ಸಲಹೆ ನೀಡಿದ. 'ಇಲ್ಲ, ಇಲ್ಲ, ಈ ಭಾಗದಲ್ಲಿ ಕ್ಷಾರ ನೆಲದಲ್ಲಿ ಬೆಳೆಯುವ ನಾಲ್ಕು ತಳಿ ಹಾಕಿದ್ದೇವೆ. ಅದರಲ್ಲಿ ಯಾವುದು ಸದೃಢವಾಗಿ ಬೆಳೆಯುತ್ತದೆ ಎಂಬ ಪರೀಕ್ಷೆ ನಡೆದಿದೆ. ಇಂಥ ಸ್ವಭಾವದ ಮಣ್ಣಿಗೆ ಹೊಂದಿ ಬೆಳೆಯುವ ತಳಿ ಆಯ್ದು, ನಂತರ ಅದನ್ನು ರೈತರಿಗೆ ವಿತರಿಸುವ ಯೋಜನೆ ನಮ್ಮದು' ಎಂದು ಅಧ್ಯಯನದ ವಿವರ ನೀಡಿದರು ಸಬರಮತಿ.

ಸಾಂಪ್ರದಾಯಿಕ **ತಳಿಗಿಂತ ಹೈಬ್ರಿಡ್ ಅಧಿಕ ಇಳುವರಿ ಕೊಡುತ್ತದೆ** ಎಂಬ ಆಧುನಿಕ ಕೃಷಿ ವಿಜ್ಞಾನದ 'ಕಥೆ'ಯನ್ನು ಸಬರಮತಿ ಸಾರಾಸಗಟಾಗಿ ತಳ್ಳಿ ಹಾಕುತ್ತಾರೆ. 'ನಮ್ಮಲ್ಲಿ ಇರುವ ತಳಿಯೊಂದು ಹೆಕ್ಟೇರ್‌ಗೆ ೮ ಟನ್ ಇಳುವರಿ ಕೊಡುತ್ತದೆ; ಅದೂ ಹೆಚ್ಚಿನ ಒಳಸುರಿಯಿಲ್ಲದೇ. ಇನ್ನು ಕೆಲವು ತಳಿಗಳಿವೆ; ಜವಳು ನೆಲದಲ್ಲಿ ಬೆಳೆಯುವುದು, ಆಳನೀರಿನಲ್ಲಿ ಮುಳುಗಿದರೂ ಬದುಕಿ ಇಳುವರಿ ಕೊಡುವಂಥದು, ಉಪ್ಪುನೀರಿನ ಭತ್ತ... ಹೀಗೆ ಸಾವಿರಾರು ವರ್ಷಗಳಿಂದಲೂ ಆಯಾ ಪ್ರದೇಶಕ್ಕೆ ಹೊಂದಿಕೊಂಡು, ಕಡಿಮೆ ಖರ್ಚಿನಲ್ಲಿ ಸದೃಢವಾಗಿ ಬೆಳೆಯುವ ತಳಿ ಸಂರಕ್ಷಿಸದೇ ಹೆಚ್ಚು ರಾಸಾಯನಿಕ ಬಳಕೆಯಾಗುವ ಹೈಬ್ರಿಡ್ ತಳಿಗೇಕೆ ಮನ್ನಣೆ? ಕೋಟ್ಯಂತರ ರೂಪಾಯಿ ವೆಚ್ಚದ ಕುಲಾಂತರಿ ತಳಿಯತ್ತ ಯಾಕಷ್ಟು ಆದ್ಯತೆ?' ಎಂದವರು ಪ್ರಶ್ನಿಸುತ್ತಾರೆ.

ಗುತ್ತಿಗೆ ಆಧಾರದ ಮೇಲೆ ಸರ್ಕಾರ ನೀಡಿದ ಹಾಗೂ ಸಂಸ್ಥೆಯ ವತಿಯಿಂದ ಖರೀದಿಸಿದ ಜಮೀನು ಸೇರಿದಂತೆ ಒಟ್ಟು ೯೦ ಎಕರೆ ಪ್ರದೇಶ ಪರಿಸರಪೂರಕ ಚಟುವಟಿಕೆಗಳ ತಾಣ. ಒಂದೆಡೆ ಭತ್ತ ಸಂರಕ್ಷಣೆ. ಇನ್ನೊಂದೆಡೆ ಬಹುಮಹಡಿ

ಕೃಷಿ ವಿಧಾನ, ಸಾಂಪ್ರದಾಯಿಕ ಕೃಷಿ ಪದ್ಧತಿ ಅಳವಡಿಕೆ. ಮತ್ತೊಂದೆಡೆ ಆಸಕ್ತರಿಗೆ ಮಾಹಿತಿ ನೀಡಲು ತರಬೇತಿ ಸಭಾಂಗಣ, ಮಳೆಗೆ ಮೇಲ್ಮಣ್ಣು ಸಂಪೂರ್ಣ ಕೊಚ್ಚಿ ಹೋಗಿ ಬರಡಾಗಿದ್ದ ಜಮೀನು ಈಗಂತೂ ದಟ್ಟ ಕಾಡು. ಹೀಗಾಗಿದ್ದು ಹೇಗೆ? ಅರಣ್ಯ ಇಲಾಖೆ ಕೊಟ್ಟ ಸಸಿ ತಂದು ಹಚ್ಚಿದೆವು. ನಾಲ್ಕಾರು ಅಡಿ ಎತ್ತರಕ್ಕೆ ಬೆಳೆಯುತ್ತಿದ್ದ ಕುರುಚಲು ಹುಲ್ಲು ಕತ್ತರಿಸಿ ಅಲ್ಲೇ ಬಿಡುತ್ತಿದ್ದೆವು. ಮಳೆಗಾಲದಲ್ಲಿ ಅದು ಕೊಳೆತು ಗಿಡಗಳಿಗೆ ಗೊಬ್ಬರವಾಗುತ್ತಿತ್ತು. ಏಳೆಂಟು ವರ್ಷಗಳ ಬಳಿಕ ಅಪರಿಚಿತ ಗಿಡಗಳು ಬೆಳೆಯುತ್ತಿರುವುದು ಗಮನಕ್ಕೆ ಬಂತು. ವೃದ್ಧ ರೈತರನ್ನು ಕರೆಸಿ ಅವುಗಳ ಬಗ್ಗೆ ಕೇಳಿದಾಗ, ಅವು ನಾಲ್ಕಾರು ದಶಕಗಳ ಹಿಂದೆ ಬೆಳೆಯುತ್ತಿದ್ದ ಕರ್ಪೂರ, ರುದ್ರಾಕ್ಷಿ ಗಿಡ ಎಂಬ ಕುತೂಹಲದ ಮಾಹಿತಿ ಸಿಕ್ಕಿತು.

ಹಾಗೆ ನೋಡಿದರೆ, ಅಪರೂಪದ ಗಿಡಗಳನ್ನು ನಾವು ಹಚ್ಚಿಯೇ ಇಲ್ಲ. ಪಕ್ಷಿಗಳಿಗೆ ಆಶ್ರಯ ಕೊಟ್ಟಿದ್ದಕ್ಕೆ ಅವು ಪ್ರತಿಯಾಗಿ ನಮಗೆ ಇಂಥ ಉಪಕಾರ ಮಾಡಿವೆ'. ಕಾಡು ರೂಪುಗೊಳ್ಳುತ್ತಲೇ ಮೊದಲು ಇಲ್ಲಿಗೆ ಬಂದಿದ್ದು ಜಿಂಕೆಗಳ ಹಿಂಡು. ಅವುಗಳಿಗೆ ಬೇಕಾದ ಮೇವು ಇಲ್ಲಿ ಧಾರಾಳ ಇತ್ತು. ಅವುಗಳ ಹಿಂದೆಯೇ ಹಣ್ಣು ತಿನ್ನಲು ಮಂಗಗಳ ದಾಳಿ! ಈಗಂತೂ ಕರಡಿ, ನರಿ, ತೋಳ ಬರುತ್ತಿವೆ. 'ಇಲ್ಲಿ ನೋಡಿ... ಆನೆ ಲದ್ದಿ ನಿನ್ನೆಯಷ್ಟೇ ಈ ಕಡೆ ಬಂದಿರಬಹುದು ಎಂದು ಕಾಣುತ್ತದೆ' ಎಂದು ಸಬರಮತಿ ತೋರಿಸಿದಾಗ ಕೊಂಚ ಭಯವಾಯಿತು!

ಹಣ್ಣು ಕೀಳಲು ಮೊದಲು ಎಲ್ಲ ಕಡೆ ಹೋಗುತ್ತಿದ್ದ ಕಾರ್ಮಿಕರಿಗೆ ಈಗ ಒಂದಷ್ಟು ನಿರ್ಬಂಧ. ಅರಣ್ಯದ ಒಂದು ಭಾಗವನ್ನು ಮೀಸಲಿಟ್ಟು, ಅಲ್ಲಿ ಯಾರೂ ಸುಳಿಯದ ಹಾಗೆ ನೋಡಿಕೊಳ್ಳಲಾಗುತ್ತಿದೆ. ಕಾಡು ಪ್ರಾಣಿಗಳಿಗಷ್ಟೇ ಅದು ಮೀಸಲು. ಅಲ್ಲಿಂದ ಏನನ್ನೂ ತೆಗೆದುಕೊಳ್ಳುವ ಹಾಗಿಲ್ಲ. ಅಲ್ಲಿಂದಲೇ ಕೆಲವೊಮ್ಮೆ ಬೆಳೆಗಳತ್ತ ಧಾವಿಸುವ ನವಿಲು, ಮಂಗ, ಜಿಂಕೆಗಳು ಸಿಕ್ಕಿದ್ದನ್ನೆಲ್ಲ ತಿನ್ನುತ್ತವೆ; ಅದಕ್ಕಿಂತ ಹೆಚ್ಚು ಹಾಳು ಮಾಡುತ್ತವೆ! ಈ ಹಾವಳಿಗೆ ತಡೆ ಹೇಗೆ? 'ಓಡಿಸುತ್ತೇವೆ ಅಷ್ಟೇ' – ಚುಟುಕು ಪ್ರತಿಕ್ರಿಯೆ ಅವರದು.

ಅಂದಹಾಗೆ, ಸರ್ಕಾರದ ಅನುದಾನಕ್ಕಾಗಿ 'ಸಂಭವ' ಎಂದೂ ಕೈಯೊಡ್ಡಿದ್ದಿಲ್ಲ. ಸಂಘಸಂಸ್ಥೆಗಳ ತರಬೇತಿ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು, ಅಲ್ಲಿ ಪಡೆಯುವ ಹಣದಿಂದಲೇ 'ಸಂಭವ' ಕಾರ್ಯನಿರ್ವಹಿಸುತ್ತಿದೆ. ಅರಣ್ಯದಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಹಣ್ಣುಗಳ ಮಾರಾಟದಿಂದ ಸಾಕಷ್ಟು ಆದಾಯ ಸಿಗುತ್ತಿದೆ. ಇಲ್ಲಿನ ಐವತ್ತಕ್ಕೂ ಹೆಚ್ಚು ತಳಿಗಳ ಮಾವಿನ ಹಣ್ಣಿಗೆ ಸಾಕಷ್ಟು ಬೇಡಿಕೆಯಿದೆ. ಕಡಿಮೆ ನೀರು ಬಿತ್ತನೆ ಬೀಜ ಬಳಸಿ ಭತ್ತ ಬೆಳೆಯುವ 'ಎಸ್‌ಆರ್‌ಐ' (ಮಡಗಾಸ್ಕರ್) ವಿಧಾನದಲ್ಲಿ 'ಸಂಭವ'ದ ಕಾರ್ಯಕರ್ತೆ ನಮಿತಾ ಪರಿಣಿತೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಜ್ಞಾನಿಗಳಿಗೆ ಸರಿಸಮನಾಗಿ ಪ್ರಬಂಧ ಮಂಡಿಸುವಷ್ಟರ ಮಟ್ಟಿಗೆ ಅವರು ಸಾಮರ್ಥ್ಯ ಪಡೆದಿದ್ದಾರೆ! ಅರಣ್ಯ ಪುನರುತ್ಥಾನ, ಸಾವಯವ ಕೃಷಿ, ಬಹುಬೆಳೆ ವಿಧಾನದ ತರಬೇತಿ 'ಸಂಭವ'ದಲ್ಲಿ ಲಭ್ಯ. ಇಂಥ ಕಾರ್ಯಾಗಾರಗಳಿಗೆಂದು ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ವಿವಿಧೆಡೆಗಳಿಂದ ಕೃಷಿ ಸಂಸ್ಥೆಗಳು ಇಲ್ಲಿಗೆ ಕೃಷಿಕರನ್ನು ಕಳಿಸಿ ತರಬೇತಿ ಕೊಡಿಸುತ್ತಿವೆ.

ಒಡಿಶಾದ ಬುಡಕಟ್ಟು ರೈತರ ಕೃಷಿ ವಿಧಾನವೆಂದರೆ, ಮನೆಗೆ ಬೇಕಾಗುವ ಎಲ್ಲ ಆಹಾರ ಧಾನ್ಯಗಳನ್ನೂ ಬೆಳೆದುಕೊಳ್ಳುವುದು. ಇದಕ್ಕಾಗಿ ಅವರು ರಾಗಿ, ಭತ್ತ, ಸಿರಿಧಾನ್ಯ, ತರಕಾರಿ, ಎಣ್ಣೆಕಾಳು, ಬೇಳೆಕಾಳು ಸೇರಿದಂತೆ ಸುಮಾರು ೧೫ ಬಗೆಯ ಧಾನ್ಯಗಳ ಬೀಜಗಳನ್ನು ಬೆರೆಸಿ ಬಿತ್ತುತ್ತಾರೆ. ತರಕಾರಿ ಒಂದು ತಿಂಗಳಿಗೆ ಕಟಾವಾದರೆ, ಮೂರನೇ ತಿಂಗಳಲ್ಲಿ ಎಣ್ಣೆಕಾಳು, ಭತ್ತ, ನಂತರ ರಾಗಿ, ತದನಂತರ ಬೇಳೆಕಾಳು... ಹೀಗೆ ಆರು ತಿಂಗಳವರೆಗೂ ಸತತ ಆ ಜಮೀನಿನಲ್ಲಿ ರಾಶಿ ನಡೆಯುತ್ತಲೇ ಇರುತ್ತದೆ. ಕಟಾವಿಗೆ ಬಂದ ಧಾನ್ಯದ ತೆನೆ ಮಾತ್ರ ಕತ್ತರಿಸಿ ಉಳಿದ ತ್ಯಾಜ್ಯವನ್ನು ಅಲ್ಲಿಯೇ ಬಿಡುತ್ತಾರೆ. ಅದು ಮುಂದಿನ ಬೆಳೆಗೆ ಗೊಬ್ಬರವಾಗಿ ಮಾರ್ಪಾಡಾಗುತ್ತದೆ. ನೆಲದ ಫಲವತ್ತತೆಗೆ ಬೇರೇನೂ ಅಗತ್ಯವಿಲ್ಲ.

ಏಕಬೆಳೆಯಿಂದಾಗಿ ಕ್ರಮೇಣ ತೆರೆಮರೆಗೆ ಸರಿದ ಕೃಷಿ ವಿಧಾನದತ್ತ ರೈತರನ್ನು ಮತ್ತೆ ಕರೆತಂದದ್ದು 'ಸಂಭವ'. ರೈತರಿಗೆ ಬೇಕಾದ ಬಿತ್ತನೆ ಬೀಜ ಒದಗಿಸಿದ ಸಂಸ್ಥೆಯು, ರೈತರ ಜಮೀನಿನ ಒಂದು ಭಾಗದಲ್ಲಿ ಈ ಪದ್ಧತಿ ಅಳವಡಿಕೆಗೆ ಮನವೊಲಿಸಿತು. ಆರಂಭದಲ್ಲಿ ಒಲ್ಲದ ಮನಸ್ಸಿನಿಂದಲೇ ಈ ಬೇಸಾಯ ಶುರು ಮಾಡಿದ ರೈತರು, ಈಗ ಅದನ್ನು ಇಡೀ, ಜಮೀನಿಗೆ ಅಳವಡಿಸಿಕೊಂಡಿದ್ದಾರೆ. 'ಸುಮಾರು ಇಪ್ಪತ್ತು ವರ್ಷದ ಹಿಂದೆ ನಮ್ಮ ತಂದೆ ಮಾಡುತ್ತಿದ್ದ ಈ ಕೃಷಿ ನೆನಪಿದೆ. ಎಷ್ಟೋ ದಿನಗಳ ಬಳಿಕ ಈಗ ಮತ್ತೆ ಶುರು ಮಾಡಿದ್ದೇನೆ. ಭತ್ತ ಬಿಟ್ಟರೆ ಬೇರೇನೂ ನಾವು ಬೆಳೆಯುತ್ತಿರಲಿಲ್ಲ. ಈಗ ಮನೆಗೆ ಬೇಕಾದ ಎಲ್ಲವೂ ನಮ್ಮ ನೆಲದಲ್ಲೇ ಸಿಗುತ್ತದೆ. ನನಗೇ ಅಚ್ಚರಿಯಾಗುತ್ತಿವೆ. ಇಷ್ಟು ದಿನ ಯಾಕೆ ಮರೆತಿದ್ದೆವೋ ಈ ಬೇಸಾಯವನ್ನು?!' ಎಂದು ರೋಕಿಂಕ್ ಬರಾಮ್ ಹೆಸರಿನ ಕೃಷಿಕ ತಲೆ ತುರಿಸಿಕೊಂಡ. 'ಸಂಭವ' ಸಂಸ್ಥೆಯಲ್ಲಿ ಸಹ ಅದನ್ನೇ ಅಳವಡಿಸಿದ್ದಾರೆ. ಎರಡು ವರ್ಷಗಳ ಹಿಂದೆ ಇಲ್ಲಿ ಬರ ಬಿದ್ದಾಗಲೂ (ಇಲ್ಲಿನ ಮಳೆ ಪ್ರಮಾಣವೇ ವಾರ್ಷಿಕ ೫೦ ಸೆಂ.ಮೀ) ಸಾಂಪ್ರದಾಯಿಕ ತಳಿ ಧಾನ್ಯಗಳ ಮಿಶ್ರಬೆಳೆ ವಿಧಾನ ಕೈಕೊಡಲಿಲ್ಲ.

ನಯಾಗಢ ಸೇರಿದಂತೆ ಹಲವು ಜಿಲ್ಲೆಗಳ ಬುಡಕಟ್ಟು ಪ್ರದೇಶಗಳಲ್ಲಿ ಆಗಾಗ್ಗೆ ನಡೆಯುವ ಪಂಚಾಯತ್‌ಗಳಲ್ಲಿ ಪುರುಷರೇ ಅಧಿಪತ್ಯ. ಮಹಿಳೆಗೆ ಏನಾದರೂ ಅನ್ಯಾಯವಾದರೆ ಆಕೆ ಬಂದು ದೂರು ಕೊಡುವುದು ಕಡಿಮೆ. ದೂರು ಕೊಟ್ಟರೂ, ಆಕೆಯ ಪರ ನ್ಯಾಯ ಸಿಗುವುದು ಇನ್ನೂ ದೂರ. ಏಕೆಂದರೆ ಪಂಚಾಯತ್‌ಗಳಲ್ಲಿ ಕುಳಿತ ಐವರೂ ಪುರಷರೇ! ಈಗ ಆ ಸಂಖ್ಯೆಯಲ್ಲಿ ಕನಿಷ್ಠ ಇಬ್ಬರಾದರೂ ಮಹಿಳೆಯರು ಇರುವಂತೆ ಮಾಡಿರುವುದು 'ಸಂಭವ'ದ ಹೆಗ್ಗಳಿಕೆ. 'ಇದು ಬುಡಕಟ್ಟು ವಾಸಿಗಳ ಆಂತರಿಕ ವಿಷಯ. ಅವರ ಮಧ್ಯೆ ಪ್ರವೇಶಿಸುವುದು ಸರಿಯೇ?' ಎಂಬ ಪ್ರಶ್ನೆ ಸಬರಮತಿಗೆ ಕಾಡಿತ್ತು. ಆದರೆ ತಮ್ಮ ಮೇಲೆ ನಡೆಯುವ ದೌರ್ಜನ್ಯದ ಬಗ್ಗೆ ಮಹಿಳೆಯರು ಅಪರೂಪಕ್ಕೆ ದೂರು ಕೊಟ್ಟರೂ ನ್ಯಾಯ ಸಿಕ್ಕಿದ್ದು ಕಡಿಮೆ. ಖಂಡಿತವಾಗ್ಯೂ ನಾನು ಈ ಜಾತಿ ಪಂಚಾಯಿತ್ ವ್ಯವಸ್ಥೆ ಒಪ್ಪುವುದಿಲ್ಲ. ಆದರೆ ಅದು ಆ ಸಮುದಾಯದ ವಿಚಾರ. ಹಾಗೆಯೇ ಮಹಿಳೆಯರು ದೂರು ಕೊಟ್ಟರೆ ಅದಕ್ಕೆ ಸ್ಪಂದಿಸಲು ಪಂಚಾಯತ್‌ನಲ್ಲಿ ಮಹಿಳೆಯರೂ ಇರಬೇಕಲ್ಲವೇ? ಇದಕ್ಕಾಗಿ ನಡೆಸಿದ ಹೋರಾಟ ಕಡಿಮೆಯಲ್ಲ. ಕೊನೆಗೂ ನಾವು ಅದರಲ್ಲಿ ಸಫಲರಾಗಿದ್ದೇವೆ. ಪ್ರತಿ ಪಂಚಾಯತ್ ನಡೆಯುವಾಗಲೂ ಐವರು ತೀರ್ಪುಗಾರರ ಪೈಕಿ ಕನಿಷ್ಠ ಇಬ್ಬರು ಮಹಿಳೆಯರು ಇರುತ್ತಾರೆ. ನಯಾಗಢ ಜಿಲ್ಲೆಯ ಈ ಹೋರಾಟ ರಾಜ್ಯದ ಗಮನ ಸೆಳೆದಿದೆ. ಬೇರೆ ಕಡೆಯೂ ಇದು ನಿಧಾನವಾಗಿ ಜಾರಿಯಾಗುತ್ತದೆ ಎಂದು ಸಬರಮತಿ ಹೇಳುತ್ತಾರೆ. ರೈತರು ಆದಿವಾಸಿಗಳ ಜತೆ ಎರಡು ದಶಕಕ್ಕೂ ಹೆಚ್ಚು ಕಾಲದಿಂದ ಬದುಕುತ್ತಿರುವ ಸಬರಮತಿ, ಈಗ ಅಲ್ಲಿನವರೇ ಆಗಿಬಿಟ್ಟಿದ್ದಾರೆ. ಅರಣ್ಯದ ಬಗ್ಗೆ ಮೂಡಿದ ಜಾಗೃತಿಯಿಂದ ಸುತ್ತಲಿನ ಸಾವಿರಕ್ಕೂ ಹೆಚ್ಚು ಎಕರೆ ಪ್ರದೇಶ ದಟ್ಟ ಅರಣ್ಯವಾಗಿದೆ. ಬೆಳೆ ವೈವಿಧ್ಯವನ್ನು ಮರೆತಿದ್ದ ರೈತರಿಗೆ ಈಗ ಊಟಕ್ಕೆ ಬೇಕಾದ್ದೆಲ್ಲ ಅವರ ತುಂಡು ಜಮೀನಿನಲ್ಲಿ ಬೆಳೆಯುತ್ತಿದೆ. 'ಸಂಭವ' ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು ಈ ಅನುಭವಿ ರೈತರೇ!

ಜೀವ ವೈವಿಧ್ಯ, ಅರಣ್ಯ ರಕ್ಷಣೆ, ಸಾಂಪ್ರದಾಯಿಕ ಕೃಷಿಯನ್ನೇ ಸದಾ ಧ್ಯಾನಿಸುವ ಸಬರಮತಿ, ವೈಯುಕ್ತಿಕ ಜೀವನಕ್ಕೆ ಮಹತ್ವವನ್ನು ಕೊಟ್ಟೇ ಇಲ್ಲ. ಅದರ ಬಗ್ಗೆ ಮಾತಾಡಲೂ ಬಯಸುವುದಿಲ್ಲ. ಇಲ್ಲಿರುವ ರೈತರೇ ತನ್ನ ಕುಟುಂಬದ ಸದಸ್ಯರು ಎನ್ನುತ್ತಾರೆ. ಕಳೆದ ವಾರವಷ್ಟೇ ಫೋನ್‌ನಲ್ಲಿ ಮಾತನಾಡಿದಾಗ – ನೈಸರ್ಗಿಕ ಸಂಪನ್ಮೂಲ ಹಾಗೂ ಗ್ರಾಮೀಣಾಭಿವೃದ್ಧಿ ಕುರಿತು ಪಿಎಚ್.ಡಿ ಪದವಿ ಸ್ವೀಕರಿಸಲು ನೆದರ್‌ಲ್ಯಾಂಡಿನ ವ್ಯಾನಿಂಗ್ ಯೂನಿವರ್ಸಿಟಿಗೆ ತೆರಳುವ ಸಿದ್ಧತೆಯಲ್ಲಿ ಸಬರಮತಿ ಅವರಿದ್ದರು. ಅಂತರರಾಷ್ಟ್ರೀಯ ಖ್ಯಾತಿಯ ಆ ವಿಶ್ವವಿದ್ಯಾಲಯದಲ್ಲಿ ಗೌರವ ಡಾಕ್ಟರೇಟ್‌ಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮುನ್ನ ಅವರ ಪೂರ್ವಾಪರವನ್ನು ಕೂಲಂಕುಶ ಪರಿಶೀಲಿಸಲಾಗುತ್ತದೆ. 'ಅಭಿನಂದನೆ....' ಎಂದು ಇತ್ತಲಿಂದ ಹೇಳುತ್ತಿದ್ದಂತೆ, ಆ ಮಾತನ್ನು ಅಷ್ಟಕ್ಕೇ ಕತ್ತರಿಸಿ – 'ಅಲ್ಲಿಂದ ವಾಪಸಾಗುವ ಹೊತ್ತಿಗೆ, ನೀವು ಕಳೆದ ವರ್ಷ ಕೊಟ್ಟಿದ್ದ ಭತ್ತದ ಹತ್ತಾರು ತಳಿಗಳು ತೆನೆ ಹೊತ್ತು ನಿಂತಿರುತ್ತವೆ. ನೋಡಲು ಎಷ್ಟು ಖುಷಿ ಅಲ್ಲವೇ! ಎಂದವರು ಉದ್ಧರಿಸಿದರು!

**ಲೇಖಕರ ಪರಿಚಯ:** ಆನಂದತೀರ್ಥ ಪ್ಯಾಟಿ ಮೂಲತಃ ಕೊಪ್ಪಳ ಜಿಲ್ಲೆಯವರಾದ ಆನಂದತೀರ್ಥ ಪ್ಯಾಟಿಯವರು ಬಳ್ಳಾರಿಯ ಸರ್ಕಾರಿ ಪಾಲಿಟೆಕ್ನಿಕ್‌ನಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಷಯದಲ್ಲಿ ಡಿಪ್ಲೊಮೊ ಪದವಿ ಪಡೆದಿದ್ದಾರೆ. 'ಸಂಯುಕ್ತ ಕರ್ನಾಟಕ' ಮತ್ತು 'ಪ್ರಜಾವಾಣಿ' ದಿನಪತ್ರಿಕೆಗಳಲ್ಲಿ ಪತ್ರಕರ್ತರಾಗಿ ಕಾರ್ಯನಿರ್ವಹಿಸಿದ್ದಾರೆ. 'ಈ–ಟಿವಿ' ವಾಹಿನಿಯಲ್ಲಿ ಸುದ್ದಿ ತಂತ್ರಜ್ಞರಾಗಿ ಸೇವೆ ಸಲ್ಲಿಸಿರುತ್ತಾರೆ. ಸುಸ್ಥಿರ ಕೃಷಿ, ಜಲಸಂರಕ್ಷಣೆ ಹಾಗೂ ಪರಿಸರ ಕಾಳಜಿ ಇವರ ಮುಖ್ಯ ಆಸಕ್ತಿಯ ವಿಚಾರಗಳು. 'ಸಾವಯವ ಕೃಷಿಯತ್ತ ಹತ್ತು ಹೆಜ್ಜೆಗಳು', 'ನಿರ್ಮಾಣ ಕಲೆ', 'ಶ್ರೀ ಎಂಬ ಸಿರಿಭತ್ತ', 'ಸ್ಲೋಫುಡ್', 'ಹುಲ್ಲು ಹಾಸಿನ ಮೇಲೆ ಹಸಿರು ಹೊದಿಕೆ, 'ಪನ್ ಪನ್ ಸಂತ', 'ಆಹಾ! ಇಸ್ರೇಲಿ ಕೃಷಿ' ಮತ್ತು ಥಾಯ್ಲೆಂಡ್ ಕೃಷಿ ಪ್ರವಾಸ ಇವರ ಪ್ರಮುಖ ಕೃತಿಗಳು ಕರ್ನಾಟಕ ಸರ್ಕಾರ ನೀಡುವ ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ಪ್ರಶ್ನೆಗಳು:**

೧. ಸಂಪ್ರದಾಯಿಕ ಭತ್ತದ ತಳಿಗಳ ಸಂರಕ್ಷಣೆಗೆ 'ಸಂಭವ' ಸಂಸ್ಥೆ ಅನುಸರಿಸಿದ ಕ್ರಮಗಳೇನು? ವಿವರಿಸಿ

೨. ರೋಹಿಬಂಕಾ ಹಸಿರಿನ ಜೀವವೈವಿಧ್ಯ ತಾಣವಾಗಿ ಹೇಗೆ 'ಸಂಭವ' ಪ್ರಯತ್ನಿಸಿತು?

೩. ಕೃಷಿ ವಿಧಾನದ ಲಕ್ಷಣಗಳು ಹಾಗೂ ಅದರ ಮಹತ್ವವನ್ನು ನಿರೂಪಿಸಿ

೪. ಸಬರಮತಿಯವರ ವ್ಯಕ್ತಿತ್ವ ಹಾಗೂ ಸಾಧನೆಯನ್ನು ನಿರೂಪಿಸಿ

೫. ಆಧುನಿಕ ಮತ್ತು ಸಾಂಪ್ರದಾಯಿಕ ಕೃಷಿ ಪದ್ಧತಿಗಳ ನಡುವೆ ಇರುವ ಪ್ರಮುಖ ವ್ಯತ್ಯಾಸಗಳೇನು?

೬. ಕೃಷಿಯ ಇಂದಿನ ಬಿಕ್ಕಟ್ಟುಗಳು ಮತ್ತು ಪರಿಹಾರಗಳನ್ನು ವಿವರಿಸಿ.

## ಘಟಕ : ೪

# ೧. ಊರೆಗೋಲು

**–ಡಾ. ಲೋಕೇಶ ಅಗಸನಕಟ್ಟೆ**

**ಆಶಯ:** ಧರ್ಮವು ಮಾನವರ ನೆಮ್ಮದಿಗೆ ಊರೆಗೋಲಾಗಬೇಕಿತ್ತು. ಮಾನವೀಯತೆಗೆ ದೃಷ್ಟಾಂತವಾಗಬೇಕಿತ್ತು. ಸದ್ಯ ಅದು ಕನಸು. ಧರ್ಮಗಳೇನೆ ಮಾನವರನ್ನು ಗುಂಪಾಗಿಸಿವೆ. ದೂರ ಮಾಡಿವೆ. ಪರಸ್ಪರ ಹಣಿಯಲು ಪ್ರೇರೇಪಿಸುತ್ತವೆ.

ಆ ಮುದುಕರು
ಅಲ್ಲಿ ಹೋಗುತ್ತಿದ್ದಾರಲ್ಲಾ......!
ಎಲ್ಲಿಗೆ ಹೋಗುತ್ತಿದ್ದಾರೆ
ಬೆನ್ನು ಹಿಡಿದು ಹೊರಟೆ

ಅವರು ಹೋಗುವ ದಾರಿಯ ಕೊನೆಯಲ್ಲೊಂದು
ಪ್ರಪಾತವಿದೆ
ಜಾರಿಬಿದ್ದರೂ, ಬೇಕೆಂದೇ ಬಿದ್ದರೂ
ಯಾರಾದರೂ ದಬ್ಬಿದರೂ
ಮತ್ತವರು ಮರಳಲಾರರು; ಬಾಯ್ತೆರೆದು ನುಂಗಿಬಿಡುತ್ತದೆ.

ಅಲ್ಲೇ... ಅಲ್ಲೇ... ಅಲ್ಲೊಂದು ಚರ್ಚಿದೆ
ಪಾದ್ರಿಯಿದ್ದಾನೆ.

ಪಿತನ ಕುರಿತು ದಿನವೂ ಉಪನ್ಯಾಸ ಕುಟ್ಟುತ್ತಾನೆ.

ಆ ದಾರಿಯ ಬಲಕ್ಕೇನಾದರೂ ಅವರು ಹೊರಳಿದರೆ
ಕೊನೆ ಕಾಣದ ಮರುಭೂಮಿಯಿದೆ; ನೀರೇ ಕೈ ಮಾಡಿ ಕರೆವಂತೆ
ಮರೀಚಿಕೆಗಳು ತೆರೆಯ ಉಯ್ಯಾಲೆಯಾಡುತ್ತವೆ.
ಬೀಸಿ ಬರುವ ಬಿರುಗಾಳಿಯಲ್ಲಿ
ಮರಳಿನ ಕಣದ ಧೂಳೆದ್ದು ಕಣ್ಣು ತುಂಬಿಬಿಡುತ್ತವೆ
ಏನೆನೂ ಕಾಣಿಸದಂತೆ ಪಾಪೆಗಳ ತುಂಬುತ್ತವೆ.

ಅಲ್ಲೇ...... ಅಲ್ಲೊಂದು ಮಸೀದಿಯಿದೆ. ನಮಾಜಿಗೆ ಹಾಸಿದ
ಚಾಪೆಯಿದೆ. ಇನ್ನೇನು ಕೊನೆಯ ಹನಿಯ ಹನಿಸುವೆನೆಂದು
ಮೂಲೆಯಲ್ಲಿಟ್ಟ ಮಡಕೆಯಿಂದ ಒಂದೊಂದು ತೊಟ್ಟು
ನೀರು ತೊಟ್ಟಿಕ್ಕುತ್ತಿದೆ.

ಆ ಮುದುಕರು
ಆ ದಾರಿಯೆಂದೇನಾದರೂ ಎಡಕ್ಕೆ ಹೊರಳಿದರೆ
ಅಲ್ಲೊಂದು ಕಗ್ಗಾಡಿದೆ.
ಗವ್ವೆನ್ನುವ ಕತ್ತಲೆ; ಗಬ್ಬುನಾತ ಪುರಾಣ ಕೂಪದಿಂದೆದ್ದು ಬರುವ
ಹೆಣದ ನಾತ.
ಕಣ್ಣಿಗೆ ಟಾರ್ಚುಗಳ ಕಟ್ಟಿಕೊಂಡು ಅತ್ತಿತ್ತ ಹರಿದಾಡುವ
ಮಾಯಕದ ಬೆಳಕು.
ಕಣ್ಣನ್ನು ಮೆಳ್ಳೆಗಣ್ಣಾಗಿಸುವ ಬೆಳಕು.

ಅಲ್ಲೊಂದು ಮಠವಿದೆ.
ಕುಂಕುಮಧಾರಿ ಶಿಷ್ಯಗಣವಿದೆ.
ಮಣಿಹಾರಗಳ ರಾಶಿ – ಭಗವದ್ಧ್ವಜದ ಮೂಟೆಮೂಟೆ
ಕಿವಿಗಡಚಿಕ್ಕುವ ಜೈಕಾರದ ನಿಲ್ಲದ ಕೂಗು.

ಮುಂಜಾನೆ ಅವರ ಬೆನ್ನು ಹತ್ತಿದ ನಾನು
ಸಂಜೆವರೆಗೂ ಅವರ ಬೆನ್ನುಬಿಡದಾದೆ.

ಮಸೀದಿಯ ಮುಂದೆ, ಚರ್ಚು ಮುಂದೆ
ಮಠದ ಮುಂದೆ
ಚಣ ಹೊತ್ತು ನಿಲ್ಲುವರು ಉಸಿರು ತೆಗೆದುಕೊಳ್ಳುವರು.

ಕೈಯಲ್ಲಿ ಹಿಡಿದ ಊರೇಗೋಲುಗಳೇ
ಅವರಿಗೀಗ ವಜ್ಜೆಯಾದಂತೆ ತೋರುತ್ತಿವೆ
ರಕ್ತಕಂಟಿದ ರೋಗದಂತೆ ಬಿಡದೇ ಪೀಡಿಸುತ್ತಿದ್ದಂತೆ ತೋರುತ್ತಿವೆ.

ನೋಡುನೋಡುತ್ತಿದ್ದಂತೆ
ಮೂವರು ರಕ್ತ ಬಸಿದು ಊರೆಗೋಲುಗಳ ಹಿಡಿದು
ಪ್ರಪಾತಕ್ಕೆಸೆದರು
ಕೈಕೈ ಹಿಡಿದುಕೊಂಡು ನದಿಗೆ ಇಳಿದರು
ಕ್ರಾಸನ್ನು, ಟೋಪಿಯನ್ನು, ಮಣಿಯನ್ನು ಹರಿದು ನದಿಗೆ ಎಸೆದರು
ನದಿಯಲ್ಲಿ ಕೈಬೀಸಿ ಕರೆವ ಲಾಂಛನಗಳ ಜೊತೆ ಸೇರಿ
ಅವೂ ಹರಿದವು: ಇವರು ನಕ್ಕರು.

ಹರಿವ ನದಿಯ ನೀರು ಕುಡಿದು
ಹುಲ್ಲುಹಾಸಿನ ಮೇಲೆ ಅಂಗಾತವಾದರು.
ಮೋಡ ಆವರಿಸಿ ಮಳೆಯ ಭ್ರಮೆ ಹುಟ್ಟಿಸುತ್ತಿದ್ದ
ಆಕಾಶವೂ ಈಗ ನೀಲಿ ನೀಲಿ
ಎಲ್ಲವೂ ಬಯಲು

ನಾನೂ ನದಿ ನೀರು ಕುಡಿದೆ
ಹುಲ್ಲು ಹಾಸಿನ ಮೇಲೆ ಅಂಗಾತವಾದೆ.

**ಕವಿ ಪರಿಚಯ:** ಡಾ. ಲೋಕೇಶ ಅವಿಭಜಿತ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲ್ಲೂಕಿನ ಅಗಸನಕಟ್ಟೆಯವರು (೧೯೫೮). ಕವಿ, ಕತೆಗಾರ, ಕಾದಂಬರಿಕಾರ, ವಿಮರ್ಶಕ. ಮನೆಯಂಗಳದ ಮರ, ಮತ್ತೆ ಸೂರ್ಯ ಬರುತ್ತಾನೆ ಇವರ ಕವನ ಸಂಕಲನಗಳು. ಹಟ್ಟಿಯೆಂಬ ಭೂಮಿಯ ತುಣುಕು ಕಥಾ ಸಂಕಲನ. ನೀರೊಳಗಿನ ಕಿಚ್ಚು, ಅಭಿಮುಖ ವಿಮರ್ಶಾ ಸಂಕಲನ.

**ಪ್ರಶ್ನೆಗಳು:**

೧. ಮುದುಕರು ಹೊರಟಿದ್ದು ಎಲ್ಲಿಗೆ?
೨. ಮುದುಕರನ್ನು ಹಿಂಬಾಲಿಸಿದ್ದು ಯಾರು?
೩. ಮುದುಕರು ಇಳಿದದ್ದು ಎಲ್ಲಿ?

# ೭. ಬಿಕರಿ ಮಾಲುಗಳು

**–ಸಾರಾ ಅಬೂಬಕರ್**

**ಆಶಯ:** ಇಸ್ಲಾಂ ಸಮುದಾಯದ ಹೆಣ್ಣಿನ ಭಾವಕೋಶವನ್ನು ಅವಳ ತುಮುಲಗಳನ್ನು –ಪುರುಷರು ಹೆಣ್ಣಿನ ಮೇಲೆ ಕೌಟುಂಬಿಕ ಮೌಲ್ಯಗಳು ಹಾಗೂ ಧಾರ್ಮಿಕ ಪಾವಿತ್ರ್ಯತೆಯ ಹೆಸರಿನಲ್ಲಿ ಸಾಧಿಸಿದ ಹಿಡಿತ ಹಾಗೂ ನಡೆಸಿದ ಶೋಷಣೆಯ ಹಲವು ಮುಖಗಳನ್ನು ಅತ್ಯಂತ ನಿರ್ಭಿಡೆಯಿಂದ ಕನ್ನಡ ಕಥಾ ಜಗತ್ತಿಗೆ, ಕಾದಂಬರಿ ಜಗತ್ತಿಗೆ ಪರಿಚಯಿಸಿದ ಅಪರೂಪದ ದಿಟ್ಟ ಬರಹಗಾರ್ತಿ ಸಾರಾ ಅಬೂಬಕರ್. ಪ್ರಸ್ತುತ ಕಥೆಯ ಹೆಣ್ಣು ಬಿಕರಿಗಿಟ್ಟ ಮಾಲು ಎಂದು ನಂಬಲಾಗಿರುವ ಸಮುದಾದಲ್ಲೇ ಹೆಣ್ಣು ಹೆತ್ತ ತಂದೆಯೊಬ್ಬನು ತನ್ನ ಪ್ರಗತಿಪರ ನಿಲುವು ಆಧುನಿಕ ವೈಚಾರಿಕ ಪ್ರಜ್ಞೆಗಳ ಮೂಲಕ ತನ್ನ ಮಗಳು ಬಿಕರಿಗಿಟ್ಟ ಮಾಲಲ್ಲ. ಅವಳು ಎಲ್ಲ ಪುರುಷರಿಗೆ ಸರಿಸಾಟಿಯಾಗಿ ಕಾಲೇಜು ವಿದ್ಯಾಭ್ಯಾಸ ನಡೆಸಿ ತನ್ನ ಸ್ವಾವಲಂಬಿ ಬದುಕನ್ನು ನಡೆಸಲೆಂದು ಆಶಿಸುವ ನಿಲುವನ್ನು ಹೊಂದಿದ್ದಾನೆ.

ಅಬ್ಬಾಸ್ ಹಾಜಿಯವರಿಗೆ ಮಗನ ಓಡಾಟದ ಕುರಿತು ಮೊದಲೆಲ್ಲ ಯಾವ ಅಭ್ಯಂತರವೂ ಇರಲಿಲ್ಲ. ಹನೀಫ್ ವಕೀಲರ ಮಕ್ಕಳ ಒಡನಾಟದಿಂದ ಮಗನಿಗೆ ಒಳಿತಲ್ಲದೆ ಕೆಡಕೇನೂ ಆಗದು ಎಂಬುದು ಅವರಿಗೆ ಗೊತ್ತು. ಹಾಗೆ ನೋಡಿದರೆ ಮಗನು ಅತ್ಯುತ್ತಮ ಗುಣ ನಡತೆಯ ಆ ಮಕ್ಕಳೊಡನೆ ಓಡಾಡಿಕೊಂಡು ಇರುವುದು ಒಂದು ರೀತಿಯಲ್ಲಿ ಸಮಾಧಾನ ಆಗಿತ್ತು. ಆದರೆ ಈ ಒಡನಾಟ ಕಳೆದೊಂದು ವರ್ಷದಿಂದ ಅವರ ಮನಃಶಾಂತಿಯನ್ನು ನಾಶ ಮಾಡಿತ್ತು. ಅದಕ್ಕೆ ಕಾರಣ ಹನೀಫ್ ವಕೀಲರ ಮಗಳು ಸುಹರಾ...

'ಲೇ... ಇವಳೇ... ಸಲ್ಮಾನ್ ಎಲ್ಲಿ?' ಎಂದು ಕೇಳುತ್ತಲೇ ಅಬ್ಬಾಸ್ ಹಾಜಿ ಒಳ ಬಂದರು. ಅವರ ಹೆಂಡತಿ ಜುಲೇಕಮ್ಮಳಿಂದ ಉತ್ತರ ಬರದಿದ್ದಾಗ ಹಾಜಿಯವರು ಮತ್ತೊಮ್ಮೆ ಗಡುಸಾಗಿ ಕೂಗಿದರು.

'ಲೇ... ಇವಳೇ..., ಎಲ್ಲಿ ಸತ್ತೇ?'

'ಹಾಂ... ಬಂದೇ' ಜುಲೇಕಮ್ಮ ಅಡಿಗೆ ಮನೆಯಿಂದ ಹೊರಬಂದು ನಡುಮನೆಗೆ ಓಡಿದವಳು, ಕರೆದಿರಾ?' ಎಂದು ಮೆತ್ತಗೆ ಕೇಳಿದಳು.

'ಇಲ್ಲ..., ಕರೀಲಿಲ್ಲ, ಸಂಗೀತ ಹಾಡಿದೆ' ವ್ಯಂಗ್ಯವಾಗಿ ನುಡಿದ ಹಾಜಿ 'ನಿನ್ನ ಮಗ ಎಲ್ಲಿ?' ಇನ್ನೂ ಎದ್ದಿಲ್ಲವಾ?'ಎಂದು ಅಸಹನೆಯಿಂದಲೇ ಕೇಳಿದರು.

'ಬೆಳಿಗ್ಗೆ ಬಂದವನು ಸ್ವಲ್ಪ ಹೊತ್ತು ಮಲಗಿ ಎದ್ದು ಅಜೀಜ್ ಮನೆಗೆ ಹೋಗಿ ಬರ್ತೇನೇಂತ ಹೋದ ಎಂದಳು.

ಈಗ ಅಬ್ಬಾಸ್ ಹಾಜಿ ಯಕ್ಷಗಾನದ ಕುಣಿತ ಪ್ರಾರಂಭಿಸಿದರು. 'ಯಾಕೆ ಹೋದ ಅಲ್ಲಿಗೆ? ಅಲ್ಲೇನು ಕೋತಿ ಕುಣಿಯುತ್ತಾ ಇದೆಯೇ? ಬೆಂಗಳೂರಿನಿಂದ ಬಂದವನಿಗೆ ನನ್ನನ್ನು, ಅವನಪ್ಪ ನನ್ನೊಮ್ಮೆ ಮಾತನಾಡಿಸಬೇಕೆಂದೂ ಹೊಳೆಯಲಿಲ್ಲವಾ? ಹೂಂ ಹೇಗೆ ಹೊಳೆದೀತು? ಆ ಸ್ನೇಹಿತನ ಮನೆಯಲ್ಲಿ ಅದೊಂದು ಚೆಂದದ ಹಕ್ಕಿ ಇದೆಯಲ್ಲಾ? ಅದಕ್ಕೇ ಈ ದೂರದ ಬೆಂಗಳೂರಿನ ಕಾಲೇಜಿನಿಂದ ಆಗಾಗ ಊರಿಗೆ ಬರುತ್ತಿರುವುದು, ಇನ್ನೇನು ನನ್ನ, ನಿನ್ನ ಮುದಿ ಮುಖ ನೋಡುವುದಕ್ಕೆ ಬರ್ತಾನು ಎಂದು ಕೊಂಡೆಯಾ? ಇಲ್ಲವಾದರೆ, ಬಂದೊಡನೆ ಹಗ್ಗ ಕಿತ್ತ ಕರುವಿನಂತೆ ಅಲ್ಲಿಗೆ ಓಡುತ್ತಾನಾ?' ಗುಡುಗು, ಸಿಡಿಲುಗಳ ಅಬ್ಬರವನ್ನು ಜುಲೇಕಮ್ಮ ಕಣ್ಣು ಬಾಯಿ ಬಿಟ್ಟು ನೋಡಿದಳು. ಬಳಿಕ ನಿಧಾನವಾಗಿ,

'ನೀವು ಏನು ಹೇಳ್ತೀರೊ ನನಗೊಂದು ಅರ್ಥವಾಗುತ್ತಾ ಇಲ್ಲ. ನೀವು ಬನ್ನಿ, ಊಟ ಮಾಡಿ' ಎನ್ನುತ್ತಾ ಒಳಗಡಿ ಇಟ್ಟಳು.

'ನಿನಗೆ ಅರ್ಥವಾಗುತ್ತದೆ. ನೀನು ಗೋರಿಯೊಳಗೆ ಹೋದ ಮೇಲೆ' ಎಂದು ಸಿಡುಕಿನ ಅಬ್ಬಾಸ್ ಹಾಜಿ ಬಟ್ಟೆ ಬದಲಿಸತೊಡಗಿದರು. ಅವರ ಚಿಂತೆ ಗೆಳೆಯ ನ್ಯಾಯವಾದಿ ಹನೀಫ್ ವಕೀಲರೆಡೆಗೆ ಹರಿಯಿತು.

ಇಬ್ಬರೂ ಚಿಕ್ಕಂದಿನಲ್ಲಿ ಒಟ್ಟಿಗೇ ಬೆಳೆದವರಾದರೂ ಬರಬರುತ್ತಾ ಹನೀಫ್ ವಿದ್ಯಾಭ್ಯಾಸದಲ್ಲಿ ಮುಂದಿದ್ದು ಅಬ್ಬಾಸ್ ಹಿಂದಾದನು. ಹಿರಿಯರಿಂದ ಪಾರಂಪರಿಕವಾಗಿ ಬಂದ ಆಸ್ತಿಯೂ ಸಾಕಷ್ಟು ಇದ್ದುದರಿಂದ ವಿದ್ಯೆಗೆ ಅಂತಹ ಮಹತ್ವವನ್ನು ಆತನ ಹಿರಿಯರೂ ನೀಡಲಿಲ್ಲ. ಆದರೆ ಹನೀಫ್‌ನೊಡನೆ ಇದ್ದ ಆತನ ಸ್ನೇಹಕ್ಕೇನೂ ಕುಂದು ಬರಲಿಲ್ಲ. ಈಗಲೂ ವಾರಕ್ಕೆ ಒಂದೆರಡು ಬಾರಿಯಾದರೂ ಸಂಜೆಯ ವೇಳೆ ಬಿಡುವಿದ್ದಾಗ ಅವನ ಕಛೇರಿಯಲ್ಲಿ ಕುಳಿತು ಒಂದಷ್ಟು ಹರಟೆ ಹೊಡೆದು ಬರುವುದು ರೂಢಿ. ತನ್ನ ವ್ಯಾಪಾರದ ಮತ್ತು ಆಸ್ತಿಪಾಸ್ತಿಗಳ ಮೊಕದ್ದಮ್ಮೆಗಳೂ ಹನೀಫ್ ಬಳಿಯೇ ಇದ್ದುದರಿಂದ ಕೆಲವೊಮ್ಮೆ ಈ ಭೇಟಿ ಅನಿವಾರ್ಯವೂ ಆಗುತ್ತಿತ್ತು. ಹನೀಫ್ ನ್ಯಾಯವಾದಿಯಾಗಿ ಸ್ವಂತ ಕಛೇರಿ ಪ್ರಾರಂಭಿಸಿದೊಡನೆ,

ಅಬ್ಬಾಸ್ ಬಂದು ತನ್ನ ಮೊಕದ್ದಮ್ಮೆಗಳ ಕಡತಗಳನ್ನು ಆತನಿಗೆ ನೀಡಿದ್ದನು. ಗೆಳೆಯನಾದುದರಿಂದ ಶುಲ್ಕದಲ್ಲಿ ರಿಯಾಯಿತಿ ಅಂತೂ ಇದ್ದೇ ಇರುತ್ತದೆ ಎಂಬುದೂ ಇದಕ್ಕೊಂದು ಕಾರಣ!

ಹನೀಫ್‌ನ ಇಬ್ಬರು ಗಂಡು ಮಕ್ಕಳು ಅಜೀಜ್ ಮತ್ತು ಆಸಿಫ್ ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅಬ್ಬಾಸ್ ಹಾಜಿಯ ಮಗ ಸಲ್ಮಾನ್ ಅಲ್ಲೇ ವೈದ್ಯಕೀಯ ಕಾಲೇಜಿನಲ್ಲಿ ಇದ್ದ. ಹನೀಫ್‌ಗೆ ತನ್ನ ಒಬ್ಬ ಮಗನಾದರೂ ಡಾಕ್ಟರ್ ಆಗಬೇಕೆಂಬ ಬಯಕೆ ಇದ್ದರೂ ದೇಣಿಗೆ ನೀಡುವಂತಹ ಆರ್ಥಿಕ ಶಕ್ತಿ ಇರಲಿಲ್ಲ.

ಹೀಗಾಗಿ ಮಕ್ಕಳಿಬ್ಬರೂ ಪ್ರತಿಭೆಯಿಂದಲೇ ಸೀಟ್ ಪಡೆದು ಎಂಜಿನಿಯರಿಂಗ್ ಕಾಲೇಜು ಸೇರಿದ್ದರೆ, ಒಬ್ಬನೇ ಮಗನಾಗಿದ್ದು ಸಾಕಷ್ಟು ಅನುಕೂಲ ಇರುವ ಅಬ್ಬಾಸ್ ಹಾಜಿಯ ಮಗ ದೇಣಿಗೆ ನೀಡಿ ವೈದ್ಯಕೀಯ ಕಾಲೇಜಿಗೆ ಸೇರಿದ್ದನು.

ಹೆತ್ತವರಲ್ಲಿ ಇದ್ದ ಗೆಳೆತನ ಮಕ್ಕಳಲ್ಲೂ ಮುಂದುವರಿದಿತ್ತು. ಊರಲ್ಲಿ ಇದ್ದಾಗಲೂ ಆಟ ಪಾಠಗಳಲ್ಲಿ ಕೂಡಿ ಆಡಿ ಬೆಳೆದವರು. ಈಗ ದೂರದ ಊರಿನಲ್ಲಿ ಬೇರೆ ಬೇರೆ ಕಾಲೇಜುಗಳಲ್ಲಿ ಇದ್ದರೂ ಗೆಳೆತನಕ್ಕೆ ತೊಡಕೇನೂ ಇರಲಿಲ್ಲ. ಅವಕಾಶ ಸಿಕ್ಕಾಗಲೆಲ್ಲ ಗೆಳೆಯರು ಒಟ್ಟು ಸೇರುತ್ತಲೇ ಇದ್ದರು. ಊರಿಗೆ ಬಂದಾಗಲೂ ಅಷ್ಟೆ. ಏನೇ ಕಾರ್ಯಕ್ರಮ ಇದ್ದರೂ ಮೂವರೂ ಸೇರಿಯೇ ಯೋಜನೆ ರೂಪಿಸುತ್ತಿದ್ದರು. ಹಾಗೆಯೇ ಯಾವುದೋ ಒಂದು ಪ್ರವಾಸದ ಯೋಜನೆ ರೂಪಿಸಲು ಇಂದು ಮುನೀರ್ ಬಂದೊಡನೆ ಸ್ನೇಹಿತರ ಬಳಿಗೆ ಓಡಿದ್ದನು.

ಅಬ್ಬಾಸ್ ಹಾಜಿಯವರಿಗೆ ಮಗನ ಈ ಓಡಾಟದ ಕುರಿತು ಮೊದಲೆಲ್ಲ ಯಾವ ಅಭ್ಯಂತರವೂ ಇರಲಿಲ್ಲ. ಹನೀಫ್ ವಕೀಲರ ಮಕ್ಕಳ ಜೊತೆಯ ಒಡನಾಟದಿಂದ ತನ್ನ ಮಗನಿಗೆ ಒಳಿತಲ್ಲದೆ ಕೆಡಕೇನೂ ಆಗದು ಎಂಬುದು ಅವರಿಗೆ ಚೆನ್ನಾಗಿ ಗೊತ್ತು. ಹಾಗೆ ನೋಡಿದರೆ ಮಗನ ಅತ್ಯುತ್ತಮಗುಣ ನಡತೆಯ ಆ ಮಕ್ಕಳೊಡನೆ ಓಡಾಡಿಕೊಂಡು ಇರುವುದು ಒಂದು ರೀತಿಯಲ್ಲಿ ಸಮಾಧಾನ ಆಗಿತ್ತು. ಆದರೆ ಈ ಒಡನಾಟ ಕಳೆದೊಂದು ವರ್ಷದಿಂದ ಅವರ ಮನಃ ಶಾಂತಿಯನ್ನು ನಾಶ ಮಾಡಿತ್ತು.

ಅದಕ್ಕೆ ಕಾರಣ ಹನೀಫ್ ವಕೀಲರ ಮಗಳು ಸುಹರಾ.

ಸುಹರಾ ಹತ್ತನೇ ತರಗತಿ ದಾಟಿ ಕಾಲೇಜಿಗೂ ಕಾಲಿಟ್ಟಾಗ ಅಬ್ಬಾಸ್ ಹಾಜಿಯ ಮನಃ ಶಾಂತಿಗೆ ಭಂಗ ಬರತೊಡಗಿತು. 'ಅಲ್ಲಾ, ಹೆಣ್ಣು ಹುಡುಗಿಗೆ ಎಷ್ಟು ವಿದ್ಯೆ ಬೇಕು? ಕೊನೆಗೊಮ್ಮೆ ಅವಳ ಪ್ರಪಂಚ ಅಡಿಗೆ ಮನೆಯೇ. ಈ ಹನೀಫ್‌ನ ತಲೆಯೊಳಗೆ ಏನಿದೆ ಎಂದೇ ಅರ್ಥವಾಗುವುದಿಲ್ಲವಲ್ಲ?' ಎಂದುಒಂದೆರಡು ಬಾರಿಅವರು ಜುಲೇಕಮ್ಮಳೊಡನೆ ಅಸಹನೆಯಿಂದ ಗೊಣಗುಟ್ಟಿದ್ದೂ ಇದೆ.

'ಅದಕ್ಕೆ ನೀವ್ಯಾಕೆತಲೆ ಕೆಡಸಿಕೊಳ್ಳುತ್ತೀರಿ? ಅವರ ಮಗಳನ್ನು ಅವರು ತಮ್ಮ ಇಷ್ಟದಂತೆ ಬೆಳೆಸುತ್ತಾರೆ. ನಮಗೇನಾಗಬೇಕಿದೆ?' ಎಂದು ಆಕೆ ಎಂದಾಗ, 'ಹೂಂ... ನಿನಗೊಂದೂ ಅರ್ಥವಾಗುವುದಿಲ್ಲ. ನಿನಗರ್ಥವಾಗುವುದು ನಿನ್ನನ್ನು ಗೋರಿಯಲ್ಲಟ್ಟ ಮೇಲೆ' ಎಂದು ಗೊಣಗುಟ್ಟಿ ಆಚೆಗೆ ಹೋಗಿದ್ದರು.

ಇದರಲ್ಲಿ ತಾನು ಅರ್ಥ ಮಾಡಿಕೊಳ್ಳಬೇಕಾದುದು ಏನಿದೆ ಎಂದು ಜುಲೇಕಮ್ಮ ತಲೆತುರಿಸುತ್ತಾ ಎಷ್ಟು ಆಲೋಚಿಸಿದರೂ ಆಕೆಯ ತಲೆಗೆ ಯಾವುದೂ ಹೊಳೆದಿರಲಿಲ್ಲ. ಆಕೆಯ ಪ್ರಪಂಚ ಆ ದೊಡ್ಡ ಮನೆಯ ಅಡಿಗೆ ಮನೆ ಮಾತ್ರ ಆಗಿತ್ತು.

ಅಬ್ಬಾಸ್ ಹಾಜಿ ಆರಾಮ ಕುರ್ಚಿಯಲ್ಲಿ ಮಲಗಿ ಯೋಚಿಸತೊಡಗಿದರು. ಈ ದಿನವೂ ಮಗ ಬಂದೊಡನೆ ಹನೀಫ್‌ನ ಮನೆಗೆ ಓಡಿದನೆಂದರೆ ಅವನ ಆಕರ್ಷಣೆ ಆ ಹುಡುಗಿಯೇ ಇರಬೇಕು ಅಲ್ಲ ದೇವರು ಆ ಹುಡುಗಿಗೆ ಅಷ್ಟೊಂದು ಸೌಂದರ್ಯವನ್ನು ಯಾಕಾದರೂ ದಯಪಾಲಿಸಿದ್ದಾನೊ. ಹೋಗಲಿ, ಆ ಸೌಂದರ್ಯವನ್ನು ಮುಚ್ಚುಮರೆ ಮಾಡಿಕೊಂಡು ಬುರ್ಕಾ ತೊಟ್ಟುಕೊಂಡಾದರೂ ಓಡಾಡುತ್ತಾಳಾ ಅಂದರೆ ಅದೂ ಇಲ್ಲ!

ಆ ಶಾಲಿನ ತುದಿ ತಲೆಯಮೇಲೆ ಇದ್ದರೂ ಆಯಿತು; ಇಲ್ಲದಿದ್ದರೂ ಆಯಿತು. ಗೆಳತಿಯರೊಡನೆ ನಗು ನಗುತ್ತಾ ಕಾಲೇಜಿಗೆ ಹೊರಟರೆ ಪ್ರಪಂಚವನ್ನೇ ಮರೆತಂತಹ ನಡವಳಿಕೆ, ಈಗಿನ ಈ ಹುಡುಗರಿಗಾದರೂ ಅಷ್ಟು ಸಾಕು. ಆ ಹುಡುಗಿಯ ಬಲೆಯಲ್ಲಿ ತನ್ನ ಮಗನೇನಾದರೂ ಬಿದ್ದರೆ?

ಈ ಯೋಚನೆ ಬಂದೊಡನೆ ಅಬ್ಬಾಸ್ ಹಾಜಿ ಹಾವು ತುಳಿದಂತೆ ಬೆಚ್ಚಿದರು. ತನ್ನ ಮಗನ ಓದು ಮುಗಿಯಲು ಇನ್ನೂ ಎರಡು ವರ್ಷ ಇದ್ದರೂ ಆಗಲೇ ಹೆಣ್ಣು ಹೆತ್ತವರು ತಮ್ಮ ಬಳಿಗೆ ಸಂದೇಶ ಕಳುಹಿಸತೊಡಗಿದ್ದರು. ಬಹಳ ಶ್ರೀಮಂತ ಮನೆತನದಿಂದಲೇ ಒಂದೆರಡು ಆಲೋಚನೆಗಳೂ ಬಂದಿದ್ದವು. ಆದರೆ ಅಬ್ಬಾಸ್ ಹಾಜಿಗೆ ಅವಸರವೇನೂ ಇರಲಿಲ್ಲ.

'ಅವನ ಓದು ಮುಗಿಯಲಿ ಆ ಮೇಲೆ ಮದುವೆ ಯೋಚನೆ' ಎಂದು ಸಂದೇಶ ತಂದವರೊಡನೆ ಹೇಳಿ ಕಳುಹಿಸಿದ್ದರು. ಅವರು ಲೆಕ್ಕ ಹಾಕುತ್ತಿದ್ದರು; ಮಗನ ಕಾಲೇಜಿಗೆ ಕೊಟ್ಟದೇಣಿಗೆ, ಆ ಮೇಲೆ ಅವನ ಕಾಲೇಜು, ಹಾಸ್ಟೆಲ್‌ನ

ಖರ್ಚು ವೆಚ್ಚ; ಅವುಗಳ ಇಷ್ಟು ವರ್ಷಗಳ ಬಡ್ಡಿ ಎಲ್ಲವೂ ಹೆಣ್ಣಿನ ತಂದೆಯಿಂದ ಬರಬೇಕು! ಮಗ ಪೂರ್ತಿಡಾಕ್ಟರಾದ ಬಳಿಕವಷ್ಟೆ ಸಮನಾದ 'ದರ' ಬರಬಹುದು! ಅಂತಹ ಕಡೆಯಿಂದ ನೆಂಟಸ್ತನ ಬಂದಾಗ ಕಣ್ಣು ಮುಚ್ಚಿ ಒಪ್ಪಿಕೊಳ್ಳುವುದು.

ಅಲ್ಲ, ಈ ಹನೀಫ್‌ನಲ್ಲಾದರೂ ಏನಿದೆ? ಕಾರು, ಹಣ ಹೋಗಲಿ, ಮಗಳಿಗೆ ನೂರು ಪವನಿನ ಚಿನ್ನಾಭರಣ ಕೊಡಲಾದರೂ ತಾಕತ್ತಿದೆಯೇ? ಹಾಗೇನೂ ಕಾಣುತ್ತಿಲ್ಲ. ಆತ ನನ್ನ ಗೆಳೆಯನೇನೊ ಹೌದು. ಆದರೆ ಗೆಳೆತನ ಎಂದು ಮಗಳನ್ನು ಬರಿದೇ ಕಟ್ಟಿಕೊಳ್ಳಲಾದೀತೇ? ಇನ್ನು ಈ ನನ್ನ ಮಗ ಹಾಗೇನಾದರೂ ಶುರು ಮಾಡಿದರೆ...?

ಅವರ ಈ ಚಿಂತೆಗೂ ಕಾರಣವಿತ್ತು. ಕಳೆದ ವರ್ಷ ಸಲ್ಮಾನನ ಎದುರಿಗೇ ಅವನ ತಾಯಿ ಅವನಿಗೆ ಬಂದ ನೆಂಟಸ್ತಿಕೆಯ ವಿಷಯವನ್ನು ಎತ್ತಿದಾಗ ಅವನು ಖಡಾಖಂಡಿತವಾಗಿ ಹೇಳಿದ್ದ 'ವಿದ್ಯೆ ಇಲ್ಲದ ಹುಡುಗಿಯನ್ನು ನಾನು ಮದುವೆ ಆಗುವುದಿಲ್ಲ' ಎಂದು. 'ವಿದ್ಯಾಭ್ಯಾಸ ಇಲ್ಲಾಂತ ಯಾರಂದರು? ಹತ್ತನೇ ತರಗತಿಯವರೆಗೆ ಅವರು ಓದಿಸ್ತಾರಂತೆ' ಎಂದಾಗ ಆತ 'ನಾನು ಮದುವೆ ಆಗುವ ಹುಡುಗಿ ಒಂದೆರಡು ವರ್ಷವಾದರೂ ಕಾಲೇಜಿಗೆ ಹೋದವಳಾಗಿರಬೇಕು' ಎಂದಿದ್ದ.

ಆಗ ತಾಯಿ ಬೆಪ್ಪಾಗಿ ಮಗನ ಮುಖ ನೋಡಿದ್ದರೆ ತಂದೆ ಗೊಳ್ಳನೆ ನಕ್ಕುಬಿಟ್ಟು 'ಅವನಿಗೆ ಹುಚ್ಚು!' ಎಂದಷ್ಟೇ ಹೇಳಿದ್ದರು. ಆಗ ಅವರು ಈ ಕುರಿತು ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ತಮ್ಮ ಊರಿನಲ್ಲಿ ಕಾಲೇಜಿಗೆ ಹೋದ ಹುಡುಗಿ ಎಲ್ಲಿಂದ ಬರಬೇಕು? ಈಗ ತಾಯಿಯೊಡನೆ ಈ ಮಾತಂದಿದ್ದರೂ ತನ್ನ ಮಾತನ್ನು ಅವನು ಮೀರಲಾರ ಎಂದುಕೊಂಡಿದ್ದರು.

ಆದರೆ ಹನೀಫ್ ವಕೀಲರ ಮಗಳು ಕಾಲೇಜಿಗೆ ಸೇರಿದಂದಿನಿಂದ ಹಾಜೀ ಅವರು ಮನಃಶಾಂತಿ ಕಳೆದುಕೊಳ್ಳುವಂತೆ ಆಯಿತು. ಮನೆಯಲಿ ್ಲಒಂಟಿಯಾಗಿ ಕುಳಿತುಕೊಂಡಾಗ ಅವರ ಯೋಚನೆ ತನ್ನ ಮಗ ಮತ್ತು ಸ್ನೇಹಿತನ ಮಗಳ ಸುತ್ತ ಸುತ್ತಿ ಸುಳಿಯತೊಡಗಿತ್ತು.

ಒಂದೆರಡು ದಿನಗಳ ಬಳಿಕ ಸಲ್ಮಾನ್ ಗೆಳೆಯರೊಡನೆ ಊಟಿಗೆ ಹೊರಡುವವನು ಎಂದಾಗಲೂ ಅವರಿಗೆ ಹೊಟ್ಟೆಯಲ್ಲಿ ಉರಿ ಪ್ರಾರಂಭವಾಯಿತು. ಇನ್ನಾದರೂ ಇದಕ್ಕೆ ಏನಾದರೊಂದು ರೀತಿಯಲ್ಲಿ ಕಡಿವಾಣ ಹಾಕಬೇಕು! ಯೋಚಿಸುತ್ತಾ ಕುಳಿತ ಅವರಿಗೆ ತಲೆಯಲ್ಲಿ ಅದೇನೊ ಮಿಂಚು ಹೊಳೆದಂತಾಯಿತು. 'ಹೂಂ... ಅದೇ ಸರಿ' ಎನ್ನುತ್ತಾ ಕುಳಿತಲ್ಲಿಂದ ದಿಗ್ಗನೆ ಎದ್ದರು.

ಎದ್ದವರೇ ದೂರವಾಣಿಯ ಬಳಿ ಹೋಗಿ ನಂಬರ್ ತಿರುಗಿಸಿದರು. ಅತ್ತಕಡೆಯಿಂದ 'ಹಲೊ' ಎಂಬ ಶಬ್ದ ಕೇಳಿಸಿದೊಡನೆ,

'ಹಲೊ, ಯಾರು ಹೈದರ್ ಅಲ್ಲವಾ? ನೀನು ಒಂದು ಅಡಿಕೆ ತೋಟದ ವಿಷಯ ಕೇಳಿದ್ದೆಯಲ್ಲಾ? ಒಂದು ತೋಟ ಮಾರಾಟಕ್ಕಿದೆ. ಇವತ್ತು ನನಗೆ ಟೈಮಿದೆ. ಸಾಯಂಕಾಲ ಅಲ್ಲಿಗೆ ಹೋಗಿ ನೋಡೋಣ ಬರ್ತೀ ತಾನೇ?' ಎಂದರು.

'ನಾನು ಹೇಳಿ ಒಂದು ವರ್ಷವಾಯಿತಲ್ಲ ಹಾಜಾರೆ? ಈಗ ನಾನು ಆ ಯೋಚನೆಯನ್ನು ಕೈಬಿಟ್ಟಿದ್ದೇನೆ ಮುಂದೆ ಎಂದಾದರೂ ಯೋಚಿಸೋಣಾಂತ'.

'ನಾನು ಈಗಾಗಲೇ ಆ ಪಾರ್ಟಿಗೆ ಹೇಳಿ ಬಿಟ್ಟಿದ್ದೇನೆ, ಹೇಗೂ ಹೋಗಿ ನೋಡೋಣ ಆ ಮೇಲೆ ಬೇಡಾಂದರೂ ಆಯಿತು'.

'ಅಂದ ಹಾಗೆ ಎಲ್ಲಿದೆ ಆ ತೋಟ?'

'ನೀನು ನನ್ನ ಮನೆಗೆ ಬಾ. ನಾನು ಕರೆದುಕೊಂಡು ಹೋಗುತ್ತೇನೆ. ನದೀ ತೀರದಲ್ಲಿದೆ. ಅಸರ್ ನಮಾಜ್ ಆದ ಕೂಡಲೇ ಹೊರಟರೆ ಕತ್ತಲು ಆಗುವುದರೊಳಗೆ ಹಿಂತಿರುಗಬಹುದು'.

'ಹೂಂ... ಆದೀತು' ಅರೆ ಮನಸ್ಸಿನಿಂದಲೇ ಆತಅಂದಾಗ ಹಾಜಾರರು ರಿಸೀವರ್ ಕೆಳಗಿಟ್ಟರು.

'ಏನು, ಈ ದಿನ ಊಟ ಕೂಡಾ ಬೇಡವಾ?' ಎಂದು ಜುಲೇಕಮ್ಮ ಒಳ ಬಾಗಿಲಲ್ಲಿ ನಿಂತು ಕರೆದಾಗಲೇ ನೆನಪಾದುದು ತಾನಿನ್ನೂ ಊಟ ಕೂಡಾ ಮಾಡಿಲ್ಲವೆಂದು.

'ಹೂಂ... ಬಡಿಸಿ ತಂದಿಡು' ಎನ್ನುತ್ತಾ ಕೈ ತೊಳೆದು ಬಂದು ಊಟಕ್ಕೆ ಕುಳಿತರು. ಅಷ್ಟರಲ್ಲಿ ಸಲ್ಮಾನ್ ಒಳ ಬಂದನು.

'ಏನೊ, ಎಲ್ಲಿಗೆ ಹೋಗಿದ್ದೆ?' ಗಡುಸಾಗಿಯೇ ಕೇಳಿದರು ಹಾಜಿ,

'ಅಜೀಜ್ ಮನೆಗೆ ಹೋಗಿದ್ದೆ'.

'ಊರಿಗೆ ಬಂದ ಕೂಡಲೇ ಅಲ್ಲೇನೊ ನಿನಗೆ ಕೆಲಸ? ಬೆಂಗಳೂರಿನಲ್ಲಿ ಆತನನ್ನು ನೋಡಿರಲಿಲ್ಲವಾ?' 'ನೋಡಿದ್ದೆ. ಈ ರಜದಲ್ಲಿ ನಾವೆಲ್ಲರೂ ಊಟಿಗೆ ಹೋಗೋಣ ಎಂದುಕೊಂಡಿದ್ದೆವು. ಆ ವಿಷಯ ಕೇಳುವಾ ಅಂತ ಹೋಗಿದ್ದೆ.'

'ಬಾಪ್ಪಾ, ಊಟ ಮಾಡು' ಜುಲೇಕಮ್ಮ ಮಗನಿಗೂ ತಟ್ಟೆ ಇಡುತ್ತಾ ಕರೆದಳು. 'ಬೇಡ ಅಮ್ಮಾ, ನಾನು ಅಲ್ಲೇ ಊಟ ಮಾಡಿ ಬಂದೆ' ಎಂದ.

'ಹಾಂ...' ಹಾಜಿಯವರು ಕಣ್ಣು ಕೆಕ್ಕರಿಸಿ ಮಗನನ್ನು ನೋಡಿದರು. ಹೊಟ್ಟೆಯ ಕೆಂಡ ನಿಗಿ ನಿಗಿ ಉರಿಯಿತು.

'ನಾನು, ನಿನ್ನ ಉಮ್ಮಾ ನಿನಗಾಗಿ ಕಾಯುತ್ತಿದ್ದೇವೆ ಎಂಬ ಪ್ರಜ್ಞೆ ಬೇಡವಾ? ಹೂಂ...ಹೇಗಿದ್ದೀತು? ಅಲ್ಲಿದೆಯಲ್ಲಾ ಬೇರೆಯೇ... ಹೂಂ... ಬೇಡ ನಾನು ಯಾವುದನ್ನೂ ಹೇಳುವುದಿಲ್ಲ. ಕೋಣನ ಹಾಗೆ ಬೆಳೆದಿದ್ದರೂ ಇವುಗಳಿಗೆ ತಲೆಯೊಳಗೆ ಏನೂ ಇಲ್ಲ...' ಎಂದು ಸಿಡುಕುತ್ತಾ ಗಬಗಬನೆ ಊಟ ಮಾಡತೊಡಗಿದರು.

ತಾಯಿ, ಮಗ ಪರಸ್ಪರ ಮುಖ ನೋಡಿಕೊಂಡರು. ಮಗನ ಮುಖದಲ್ಲಿ ಕಂಡೂ ಕಾಣದಂತೆ ನಸುನಗೆ ಸುಳಿದರೆ, ತಾಯಿ, ಗಂಡನ ಮನದಾಳವನ್ನು ಅಳೆಯಲಾಗದೆ ಜೋಲು ಮೋರೆ ಹಾಕಿ ಒಳಗೆ ಹೋದಳು.

ಅಸರ್ ನಮಾಜ್ ಆದೊಡನೆ ಅಬ್ಬಾಸ್ ಹಾಜಿ ಬಟ್ಟೆ ಬದಲಾಯಿಸಿ ಕಾರನ್ನು ಶೆಡ್ಡಿನಿಂದ ಹೊರತರುತ್ತಿದ್ದಂತೆ ಹೈದರನ ಕಾರೂ ಗೇಟಿನ ಬಳಿ ಬಂದಿತು.

'ಬನ್ನಿ ಕಾಕಾ. ನನ್ನ ಕಾರಿನಲ್ಲೇ ಹೋಗೋಣ' ಎಂದು ಆತನು ಹಾಜಾರರನ್ನು ಕರೆದಾಗ ಹಾಜಿಯವರು ಮಗನನ್ನು ಕರೆದು ಕಾರನ್ನು ಪುನಃ ಶೆಡ್ಡಿನಲ್ಲಿ ಇಡುವಂತೆ ಹೇಳಿ ತಾವು ಗೇಟು ದಾಟಿ ಹೊರಬಂದು ಹೈದರನ ಕಾರಿನಲ್ಲಿ ಕುಳಿತರು. ಕಾರು ಪೂರ್ವಾಭಿಮುಖವಾಗಿ ಹೊರಟಿತು.

ಕೆಲವು ಕಿ.ಮೀ. ದೂರ ಹೋದ ಬಳಿಕ ಕಾರನ್ನು ಒಂದೆಡೆ ನಿಲ್ಲಿಸಲು ಅಬ್ಬಾಸ್ ಹಾಜಿ ಸೂಚಿಸಿದರು. ಬಳಿಕ ಇಬ್ಬರೂ ಕಾರಿನಿಂದ ಇಳಿದು ಕೆಳ ಭಾಗದಲ್ಲಿ ಕಾಣುವ ಅಡಿಕೆ ತೋಟದ ಕಡೆಗೆ ನಡೆದರು. ನದೀ ತೀರದ ಫಲವತ್ತಾದ ತೋಟ. ಹಣ್ಣಾದ ಕಿತ್ತಳೆ ಬಣ್ಣದಅಡಿಕೆ ಗೊಂಚಲುಗಳು ನೋಡುಗರ ಕಣ್ಮನ ಸೆಳೆಯುತ್ತಿದ್ದವು. ನದಿ ಕಡೆಯಿಂದ ಬೀಸುವ ತಂಗಾಳಿ ಅಡಿಕೆ ಹೂವಿನ ಸುಗಂಧವನ್ನು ಪಸರಿಸಿ ಹಿತವಾಗಿ ಬೀಸುತ್ತಿತ್ತು. ನಡು ನಡುವೆ ಗೊನೆ ಬಿಟ್ಟ ಬಾಳೆ ಗಿಡಗಳು, ಅಲ್ಲಲ್ಲಿ ಕೆಲವು ತೆಂಗಿನ ಮರಗಳು, ಹಲಸು, ಮಾವು ಎಲ್ಲವೂ ಇದ್ದುವು. ಸಮೃದ್ಧವಾದ ತೋಟ.

'ಹೇಗಿದೆ ತೋಟ?' ಹಾಜಾರರು ಕೇಳಿದರು.

'ತೋಟ ಚೆನ್ನಾಗಿದೆ. ಇಷ್ಟು ಒಳ್ಳೆಯ ತೋಟವನ್ನು ಮಾರುವುದೇಕಂತೆ?'

'ಇದ್ದೇ ಇದೆಯಲ್ಲ ಸಮಸ್ಯೆಗಳು? ನಾಲ್ಕಾರು ಜನ ಹೆಣ್ಣು ಮಕ್ಕಳು ಇಬ್ಬರ ಮದುವೆ ಮಾಡಿದ್ದಾನೆ. ಈಗ ಇನ್ನಿಬ್ಬರ ಮದುವೆ ತಯಾರಿ ನಡೆದಿದೆ. ಸಾಲವೂ ಇದೆ. ತೋಟ ಮಾರದೆ ಇನ್ನೇನು ಮಾಡುತ್ತಾನೆ?'

ಹೈದರ್ ಮೌನವಾಗಿ ನಡೆಯತೊಡಗಿದ. ಹಾಜಾರರೇ ಮತ್ತೊಮ್ಮೆ,

'ನೀನು ಕೊಂಡುಕೊಳ್ಳುವುದಾದರೆ ಇದನ್ನೇ ಕೊಂಡುಕೊ, ಬೆಲೆಯಲ್ಲಿ ಚೌಕಾಸಿ ಮಾಡುವಾ, ಅವನು ನಾನು ಹೇಳಿದಂತೆ ಕೇಳಿಯಾನು' ಎಂದರು.

'ಇಲ್ಲ ಹಾಜಾರರೇ, ನಾನು ಈಗ ಇದನ್ನು ಕೊಂಡುಕೊಳ್ಳುವುದಿಲ್ಲ, ಮುಂದೆ ನೋಡೋಣ' ಎಂದರು.

'ಅಂದರೆ?'

'ಅಂದರೆ... ಇನ್ನೇನೂ ಇಲ್ಲ, ನನ್ನ ಮಗನಿಗೆ ಒಂದೆರಡು ಕಡೆಗಳಿಂದ ನೆಂಟಸ್ತಿಕೆ ಬರ್ತಾ ಇದೆ. ಅಂತಹ ಒಳ್ಳೆಯ ಸಂಬಂಧ ಕುದುರಿದರೆ ಅವರೊಡನೆಯೇ ಹೇಳಿ ಬಿಡುವುದು, ಇಂತಹ ಒಂದು ತೋಟ ಖರೀದಿಸಿ ಮಗಳ ಹೆಸರಿಗೆ ಕೊಡಿ' ಅಂತ.

'ಓ... ಪರವಾಗಿಲ್ಲ ನಿನ್ನ ಅಲೋಚನೆ!' ಎನ್ನುತ್ತಾ ಇಬ್ಬರೂ ಕಾರಿನ ಬಳಿ ಸಾಗಿದರು. ಹೈದರ್ ಕಾರು ಚಲಾಯಿಸಲು ಅರಂಭಿಸಿದೊಡನೆ,

'ಒಂದು ನಿಮಿಷ ತಡೆ, ನಿನ್ನೊಡನೆ ಒಂದು ವಿಷಯ ಹೇಳಬೇಕಾಗಿದೆ' ಎಂದರು ಹಾಜಿ.

ಹೈದರ್ ಎಂಜಿನ್ ಆಫ್ ಮಾಡಿ ಹಾಜಾರರ ಮುಖ ನೋಡಿದನು.

'ಅಲ್ಲಾ ನಿನ್ನ ಮಗನ ಮದುವೆಯ ಮಾತೆಂದೆಯಲ್ಲ? ಅದೇ ವಿಷಯ ಹೇಳೋಣಾಂತ.'

ಹೈದರನ ಕಿವಿ ಚುರುಕಾಯಿತು. 'ಏನು? ನಿಮಗೆ ತಿಳಿದ ಕಡೆ ಅಂತಹ ನೆಂಟಸ್ತಿಕೆ ಇದೆಯಾ? ಎಂದು ಕುತೂಹಲದಿಂದ ಕೇಳಿದನು.

'ಅಲ್ಲ ಹೈದರ್, ನಿನ್ನ ಮಗನಿಗೆ ಹೆಣ್ಣಿಗಾಗಿ ಅಲ್ಲಿ ಇಲ್ಲಿ ಏಕೆ ಅಲೆಯುತ್ತೀ? ಕೈಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಅಲೆದಂತೆ? ನಿನ್ನ ತಂಗಿಯ ಮಗಳೇ ಇದ್ದಾಳಲ್ಲ? ಸುಂದರಿಯಾದ ಹುಡುಗಿ, ಅಲ್ಲದೆ ರಕ್ತ ಸಂಬಂಧ...' ಎನ್ನುತ್ತಿದ್ದಂತೆ ಹೈದರ್,

‘ಛೆ, ಏನು ಮಾತೂಂತ ಹೇಳ್ತೀರಿ ಹಾಜಾರರೇ? ಹನೀಫ್ ವಕೀಲನ ಕೈಯಲ್ಲಿ ಏನಿದೆ? ತಂಗಿಯ ಮಗಳೂಂತ ಏನೂ ಇಲ್ಲದ ಕಡೆ ಹೋಗಲಿಕ್ಕೆ ಆದೀತಾ? ಅದೂ ಅಲ್ಲದೆ ಆ ಹುಡುಗಿಯನ್ನು ಕಾಲೇಜಿಗೂ ಸೇರಿಸಿದ್ದಾರೆ. ಅದೆಲ್ಲ ನಮ್ಮಂತಹವರಿಗಲ್ಲ.’

‘ಹಾಗಲ್ಲ ಹೈದರ್, ಹನೀಫ್‌ಗೆ ನಿನ್ನತಂಗಿಯನ್ನೇ ಕೊಡಲಿಲ್ಲವಾ? ಅದೇ ರಕ್ತ ಸಂಬಂಧವನ್ನು ಮುಂದುವರಿಸುವುದು ಒಳ್ಳೆಯದಲ್ಲವಾ? ಅಣ್ಣತಂಗಿಯರು ಆಗಿರುವಾಗ ಅದೆಲ್ಲ ನೋಡಿದರೆ ಆಗುತ್ತದಾ? ಅದೂ ಅಲ್ಲದೆ ತೋಟ ಖರೀದಿಸಿ ಮಗಳಿಗೆ ಕೊಡುವಷ್ಟು ತಾಕತ್ತು ಅವನಿಗೆ ಇರಬಹುದೆಂಬುದು ನನ್ನ ಅನಿಸಿಕೆ.’

‘ಅಲ್ಲ ಹಾಜಾರರೇ ನನ್ನ ಮಗ ಹೈಸ್ಕೂಲು ದಾಟಿದವನು. ವ್ಯಾಪಾರವನ್ನು ಏನೋ ಚೆನ್ನಾಗಿ ಕಲಿತುಕೊಂಡಿದ್ದಾನೆ. ಅದು ಬಿಡಿ... ನಿಮ್ಮ ಮಗನಾದರೆ ಒಳ್ಳೆಯ ವಿದ್ಯಾವಂತ, ಕಾಲೇಜಿಗೆ ಹೋದ ಹುಡುಗಿ ನಿಮ್ಮ ಮಗನಿಗಾದರೆ ಒಳ್ಳೆಯ ಜೋಡಿ ಆಗುತ್ತಾಳೆ. ಹನೀಫ್ ಅಂತೂ ನಿಮ್ಮ ಬಾಲ್ಯದ ಗೆಳೆಯ; ಈಗ ನಿಮ್ಮ ಲಾಯರ್, ನಿಮ್ಮ ಮಗನಿಗೇ ಆ ಹುಡುಗಿಯನ್ನು ತಂದುಕೊಂಡರೆ ಹೇಗೆ?’ ಹೈದರ್ ಕೇಳಿದನು.

ತಾನು ಬಿಟ್ಟ ಬಾಣ ಬೂಮರಾಂಗ್ ಆಗಿ ತನ್ನೆಡೆಗೇ ಬಂತಲ್ಲಾ? ಪರವಾಗಿಲ್ಲ ಈತನ ಮಿದುಳು! ಎಂದು ಮನದಲ್ಲಿ ಅಂದುಕೊಂಡು ಮತ್ತೂ ಒಂದು ಪ್ರಯತ್ನ ಮಾಡಿದರು.

‘ಹಾಗಲ್ಲ ಹೈದರ್ ನಿನ್ನ ತಂಗಿಗೆ ತನ್ನ ಮಗಳನ್ನು ನಿನ್ನ ಮಗನಿಗೆ ಕೊಡಲು ತುಂಬಾ ಇಷ್ಟವಂತೆ, ಹನೀಫ್ ನನ್ನೊಡನೆ ಒಂದೆರಡು ಬಾರಿ ಹಾಗಂದ ನೆನಪು. ಅವರೆಲ್ಲರಿಗೂ ತುಂಬಾ ಆಸಕ್ತಿ ಇದ್ದಂತೆ ಕಾಣುತ್ತದೆ.

ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಬಹುದಲ್ಲವಾ?

‘ಯಾರೂ ಹನೀಫ್ ಹಾಗಂದನೇ?’ ಆಶ್ಚರ್ಯದಿಂದ ಕಣ್ಣರಳಿಸಿ ಕೇಳಿದನು ಹೈದರ್, ‘ಆನೆ ಹತ್ತುವ ಯೋಚನೆ, ಆದರೆ ಎಟಕುವುದಿಲ್ಲ’ ಎಂದು ಹಿರಿಯರು ಹೇಳಿದ್ದು ಸುಳ್ಳಲ್ಲ. ಅವರಿಗೆ ಆಸಕ್ತಿ ಇದ್ದರಾಯಿತೇ? ನನಗೂ ಆಸಕ್ತಿ ಬೇಡವೇ?’ ಅಸಹನೆಯಿಂದ ನುಡಿದ ಹೈದರ್ ಕಾರು ಸ್ಟಾರ್ಟ್ ಮಾಡಿದನು. ‘ಆಸಕ್ತಿಗೆ ಸರಿಯಾಗಿ ಮಗಳಿಗೆ ಕೊಡಲು ಏನೇನು ಸಂಪಾದಿಸಿದ್ದಾನಂತೆ?’

‘ರಕ್ತ ಸಂಬಂಧ ಎಂಬುದು ಧನ, ಕನಕವನ್ನು ಮೀರಿದ ಸಂಬಂಧ. ಈಗ ನೀನು ಒಪ್ಪಿಕೊಂಡು ಬಿಡು. ತೋಟದ ವಿಷಯ ನಾನು ಅವನೊಡನೆ ಮಾತನಾಡುತ್ತೇನೆ. ಈಗಲೇ ಒಂದು ನಿಶ್ಚಿತಾರ್ಥ ಅಂತ ಮಾಡಿ ಬಿಟ್ಟರೆ, ಮುಂದಿನ ವರ್ಷ ಮದುವೆ ನೆರವೇರಿಸಿ ಬಿಡಬಹುದು. ಏನನ್ನುತ್ತೀರಿ?’ ಎನ್ನುತ್ತ ಅಬ್ಬಾಸ್ ಹಾಜಿ ಹನೀಫ್ ಮತ್ತು ಆತನ ಕುಟುಂಬದ ಗುಣಗಾನದಲ್ಲಿ ತಲ್ಲೀನರಾದರು.

ತನ್ನ ಮಗನ ಗಮನವನ್ನು ಅಲ್ಲಿಂದ ಹಿಂದಕ್ಕೆ ಎಳೆಯಲು ಹೈದರನ ಮಗನನ್ನೇ ಹನೀಫ್‌ನ ಮುಂದಿಟ್ಟರಾಯಿತು. ತಮ್ಮ ಮನೆ ಬಾಗಿಲ ಬಳಿ ಬಂದ ಆತಂಕವನ್ನು ಇಬ್ಬರೂ ಇನ್ನೊಬ್ಬರ ಮನೆ ಬಾಗಿಲಿಗೆ ದೂಡಲು ಪ್ರಯತ್ನಿಸುತ್ತಿದ್ದರು. ಸುಹರಾ ಎಂಬ ಹದಿ ಹರೆಯದ ಹೆಣ್ಣು ಮಗಳೋರ್ವಳು ತನಗರಿಯದೆಯೇ ಇವರಿಬ್ಬರ ಮನಃಶಾಂತಿಯ ನಾಶಕ್ಕೆ ಕಾರಣಳಾಗಿದ್ದಳು.

ಆ ರಾತ್ರಿಯಿಡೀ ಹೈದರ್ ನಿದ್ರೆಯಿಲ್ಲದೆ ಹಾಸಿಗೆಯಲ್ಲಿ ಹೊರಳಾಡಿದನು. ಮುಂದಿನ ಭಾನುವಾರ ತಂಗಿಯ ಮನೆಗೆ ಹೊರಟನು.

ಆತನ ತಂಗಿ ಅಸ್ಮಾ ಅಣ್ಣನನ್ನು ನೋಡಿದೊಡನೆ, ‘ಬಾ ಅಣ್ಣಾ, ಎಷ್ಟು ದಿನ ಆಯಿತು ನೀನು ಈ ಕಡೆ ಬಂದು? ಅತ್ತಿಗೆಗಂತೂ ನನ್ನ ಮನೆಯ ದಾರಿಯೇ ಮರೆತು ಹೋಗಿದೆಯೊ ಏನೋ ಬಾ ಕುಳಿತುಕೊ’ ಎಂದು ಸಂಭ್ರಮದಿಂದ ಅಣ್ಣನನ್ನು ಸ್ವಾಗತಿಸಿದಳು.

ಹೇಗೆ ಮಾತು ಪ್ರಾರಂಭಿಸಬೇಕು ಎಂದು ಕೊಂಚ ಹೊತ್ತು ಆಲೋಚಿಸಿದ ಹೈದರ್, ಬಳಿಕ ನಿಧಾನವಾಗಿ,

‘ನಿನ್ನ ಮಕ್ಕಳಿಬ್ಬರೂ ಬಂದಿದ್ದಾರಂತಲ್ಲ?’ ಎಲ್ಲಿದ್ದಾರೆ?’ ಎಂದು ಕೇಳಿದ.

‘ರಜದಲ್ಲಿ ಬಂದರೆ ಹುಡುಗರು ಮನೆಯಲ್ಲಿ ಇರುತ್ತಾರಾ? ಅಬ್ಬಾಸರ ಮಗನೊಡನೆ ಊಟಿಗೊ ಅದೆಲ್ಲಿಗೊ ಹೋಗಿದ್ದಾರೆ.’

‘ಎಲ್ಲಿ ನಿನ್ನ ಮಗಳು?’

‘ಅವಳೆಲ್ಲಿ ಹೋಗ್ತಾಳೆ? ಒಳಗಿದ್ದಾಳೆ’ ಎನ್ನುತ್ತಾ ಸುಹರಾ, ಯಾರು ಬಂದಿದ್ದಾರೆ ನೋಡು. ಬಹಳ ದಿವಸಗಳ ಬಳಿಕ ನಿನ್ನ ಮಾವನಿಗೆ ನಮ್ಮೆಲ್ಲರ ನೆನಪಾಗಿದೆ.’ ಎಂದು ಕರೆದೊಡನೆ ಸುಹರಾ ಬಂದು ಬಾಗಿಲ ಬಳಿ ನಿಂತಳು. ಮಾವನಿಗೆ ಚಹಾ ತಂದುಕೊಂಡು ಎಂದೊಡನೆ ಒಳ ಸರಿದಳು.

'ಏನು, ಮಗಳನ್ನು ಕಾಲೇಜಿಗೂ ಕಳಿಸ್ತಾ ಇದ್ದೀಯಲ್ಲಾ? ಅವಳಿಗೆ ಮದುವೆ ಮಾಡುವ ಯೋಚನೆ ಏನೂ ಇಲ್ಲವಾ?' ಎಂದು ಕೇಳಿದನು ಹೈದರ್.

'ಅವಳ ತಂದೆಗೆ ಅವಳನ್ನು ತುಂಬಾ ಓದಿಸಬೇಕು ಎಂಬ ಆಸೆ ಸದ್ಯಕ್ಕಂತೂ ಮದುವೆಯ ಯೋಚನೆ ಇಲ್ಲಣ್ಣ,' ಎಂದಳು. ಬಳಿಕ ನಿಧಾನವಾಗಿ, 'ನೀನು ಅವಳ ಮಾವನಲ್ಲವಾ? ಎಲ್ಲಾದರೂ ಒಳ್ಳೆಯ ಹುಡುಗ ಕಣ್ಣಿಗೆ ಬಿದ್ದರೆ ಹೇಳಣ್ಣಾ' ಎಂದು ನಗುತ್ತಾ ನುಡಿಗಳು.

'ಹೂಂ... ಅದೇ ವಿಷಯ ಹೇಳೋಣಾಂತ ಬಂದೆ. ಅಬ್ಬಾಸ್ ಹಾಜಿಯ ಮಗ ಸಲ್ಮಾನ್ ನಿನ್ನ ಮಕ್ಕಳ ಸ್ನೇಹಿತನಲ್ಲವಾ? ಯಾವಾಗಲೂ ಒಟ್ಟಿಗೆ ಓಡಾಡಿಕೊಂಡು ಇರುತ್ತಾರೆ. ಒಳ್ಳೆ ವಿದ್ಯಾವಂತ ಹುಡುಗ. ನಿನ್ನ ಗಂಡ ಮತ್ತು ಹಾಜಿ ಕೂಡಾ ಒಳ್ಳೆಯ ಸ್ನೇಹಿತರು. ಆ ಹುಡುಗನನ್ನೇ ಯಾಕೆ ವಿಚಾರಿಸಬಾರದು?'

ಅಣ್ಣನಿಗೆ ತನ್ನ ಮಗಳ ಮದುವೆಯ ಕುರಿತ ಆಸಕ್ತಿ ಕಂಡು ತಂಗಿಗೆ ಸಂತೋಷವಾಯಿತು. ತನ್ನ ಸುಖ ದುಃಖ ವಿಚಾರಿಸಲು ಆಗಾಗ ಬರದಿದ್ದರೆ ಏನಾಯಿತು? ತನ್ನ ಮಗಳ ಕುರಿತು ಆತನ ಹೃದಯದಲ್ಲಿ ಒಂದು ಸ್ಥಾನ ಇದ್ದೇಇದೆ! ಆದರೂ ಅಣ್ಣ ತೋರಿಸಿದ ವರ... ಆಕೆಯ ತುಟಿಗಳಲ್ಲಿ ಇದ್ದ ಮಂದಹಾಸ ಮರೆ ಆಯಿತು.

'ಅಲ್ಲಣ್ಣಾ, ಡಾಕ್ಟರ್ ವರಗಳನ್ನೆಲ್ಲ ಕೊಂಡುಕೊಳ್ಳುವ ಶಕ್ತಿ ನಮಗಿದೆಯೊ?' ಎಂದು ದುಗುಡದಿಂದಲೇ ಕೇಳಿದಳು.

ಅಷ್ಟರಲ್ಲಿ ಸುಹರಾ ಚಹಾ ಕಪ್ಪನ್ನು ತಂದು ಮಾವನ ಮುಂದಿಟ್ಟಳು. ಹೈದರ್ ಮುಖ ಗಂಟಿಕ್ಕಿಕೊಂಡೇ ಸೊಸೆಯನ್ನು ನೋಡಿದ. ಪ್ರಾಯದ ಹುಡುಗರ ಕಣ್ಮನ ಸೆಳೆದು ಅವರ ನಿದ್ದೆಗೆಡಿಸುವ ಸೌಂದರ್ಯ!

ಆತನು ಚಹಾದ ಕಪ್ ಕೈಗೆತ್ತಿಕೊಳ್ಳುತ್ತಿದ್ದಂತೆ ಅಸ್ಮಾ ಸಹಜವಾಗಿ ಎಂಬಂತೆ 'ನೀನು ಈ ಕಡೆ ಬರದೇ ಹೋದರೂ ನಿನ್ನ ಮಗ ಆಗಾಗ ಈ ಕಡೆ ಬರ್ತ್ತಿರ್ತಾನೆ. ಅವನಿಗೂ ಈ ಹುಡುಗರ ಜೊತೆ ತಿರುಗಾಟಕ್ಕೆ ಹೋಗಲು ಮನಸ್ಸಿತ್ತು. ಆದರೆ ನೀನೇನು ಹೇಳುವೆಯೊ ಎಂದು ಸುಮ್ಮನಾದ ಎಂದಳು.

ಹೈದರ್ ಬೆಚ್ಚಿಬಿದ್ದಂತೆ ಚಹಾದ ಕಪ್ ಕೆಳಗಿಡುತ್ತಾ, 'ಏನು? ಅಶರಫ್ ಈ ಕಡೆ ಬರ್ತ್ತಿರ್ತಾನಾ? ಅವನಿಗೆ ಇಲ್ಲೇನು ಕೆಲಸ?' ಎಂದು  ಗಡುಸಾಗಿ ಕೇಳಿದನು.

'ಯಾಕಣ್ಣಾ ಇಲ್ಲಿಗೆ ಬರಬಾರದೆ? ನಾನು ಅವನ ಅತ್ತೆಯಲ್ಲವಾ? ಅವನು ನಿನ್ನೊಡನೆ ಏನೂ ಹೇಳಲಿಲ್ಲವಾ?' ಎಂದು ನಿಷ್ಕಳಂಕತೆಯಿಂದ ಕೇಳಿದಳು.

ಈಗ ಹೈದರ್ ನಿಜವಾಗಿಯೂ ಬೆಚ್ಚಿದನು. ಅವನು ತನ್ನೊಡನೆ ಏನು ಹೇಳಬೇಕಾಗಿತ್ತು? ಈ ಹುಡುಗಿ ಅವನನ್ನಾಗಲೇ ಮರುಳು ಮಾಡಿ ಬಿಟ್ಟಿದ್ದಾಳೆಯೇ? ಈಗಾಗಲೇ ತನ್ನ ಸೋದರತ್ತೆಯೊಡನೆ ಏನನ್ನಾದರೂ ಸೂಚಿಸಿ ಬಿಟ್ಟಿದ್ದಾನೆಯೇ? ಅದನ್ನೇ ನಂಬಿಕೊಂಡು ಹನೀಫ್ ಅಬ್ಬಾಸ್‌ನ ಹತ್ತಿರ ಹೇಳಿದನಾ?

'ಅವನು ನನ್ನೊಡನೆ ಏನು ಹೇಳಬೇಕಾಗಿತ್ತು?' ಎಂದು ಅಸಹನೆಯಿಂದಲೇ ಕೇಳಿದ ಹೈದರ್, ಮಾತು ಮುಂದುವರೆಸಿ, 'ನೋಡು ಅಸ್ಮಾ, ಅದೆಲ್ಲಾ ಆಗುವ ಹೋಗುವ ಮಾತಲ್ಲ. ನಿನ್ನ ಮಗಳು ಕಾಲೇಜಿಗೆ ಹೋಗುವವಳು ನನ್ನ ಮಗ ಹೈಸ್ಕೂಲೂ ದಾಟಿಲ್ಲ. ಅಂತಹ ಆಲೋಚನೆಗಳನ್ನೆಲ್ಲ ತಲೆಯಲ್ಲಿ ಇಟ್ಟುಕೊಂಡು ಹುಡುಗನ ಮನಸ್ಸು ಕೆಡಿಸಬೇಡ' ಎಂದು ಒಂದೇ ಉಸಿರಿಗೆ ನುಡಿದ.

ಅಸ್ಮಾ ಅವಾಕ್ಕಾದಳು, ಕಣ್ಣು ಬಾಯಿ ಬಿಟ್ಟುಕೊಂಡು ಅಣ್ಣನ ಮುಖವನ್ನೇ ನೋಡಿದಳು. ಅಣ್ಣನ ಮಾತಿನ ತಲೆಬುಡ ಅರ್ಥವಾಗಲು ಆಕೆಗೆ ಬಹಳ ಹೊತ್ತೇ ಹಿಡಿಯಿತು. ಕೊನೆಗೆ ಆತನ ಮನದಿಂಗಿತ ಅರ್ಥವಾದಂತೆ, ಕೊಂಚ ಖಾರವಾಗಿಯೇ.,

'ಅಲ್ಲಣ್ಣ, ನಮಗೆ ಅಂತಹ ಆಲೋಚನೆ ಇದೆ ಎಂದು ನಿನ್ನೊಡನೆ ಯಾರಾದರೂ ಹೇಳಿದರಾ?' ಕೇಳಿದಳಾಕೆ, ಆಕೆಯ ಮಾತಿನಲ್ಲೂ ಕೋಪ ಇಣುಕುತ್ತಿತ್ತು.

'ಅಬ್ಬಾಸ್ ಹಾಜಿಯ ಹತ್ತಿರ ನಿನ್ನ ಗಂಡ ಹೇಳಿದನಂತೆ, ನಿಮ್ಮ ಮಗಳನ್ನು ನನ್ನ ಮಗನಿಗೆ ಕೊಡಲು ನಿನಗೆ ಆಸಕ್ತಿ ಇದೆ ಅಂತ?'

'ಹಾಂ... ಆಶ್ಚರ್ಯದಿಂದ ಕೇಳಿದಳಾಕೆ, 'ಅವರು ಹಾಗಂದರೇ?'

ಒಳಗೆ ಮಲಗಿಕೊಂಡು ಎಲ್ಲವನ್ನೂ ಕೇಳಿಸಿಕೊಂಡ ಹನೀಫ್ ಈಗ ಎದ್ದು ಕೋಣೆಯಿಂದ ಹೊರ ಬಂದನು. ಭಾವನನ್ನು ಕಾಣುತ್ತಲೇ ಹೈದರ್, 'ಓ... ನೀನೂ ಇಲ್ಲೇ ಇದ್ದೆಯಾ? ಇವಳು ಹೇಳಲೇ ಇಲ್ಲವಲ್ಲ?' ಎಂದ.

'ಅವಳು ಹೇಳಬೇಕಾಗಿಯೇ ಇಲ್ಲವಲ್ಲ? ಹೇಳದೇನೇ ಹೇಳಿದ್ದಾಳೆಂಬ ಮಾತನ್ನು ಈಗ ತಾನೇ ಕೇಳಿಸಿಕೊಂಡೆ' ಎಂದ.

'ಅದು ನಿನ್ನ ಸ್ನೇಹಿತನ ಮಾತು. ವಿದ್ಯೆ ಇಲ್ಲದ ನನ್ನ ಮಗನಿಗಿಂತ ಅವನ ಮಗನನ್ನೇ ಯಾಕೆ ಆಲೋಚಿಸಿಬಾರದು ಎಂದು ಕೇಳುವುದಕ್ಕಾಗಿಯೇ ನಾನೀಗ ಬಂದೆ' ಎಂದ.

ಇದನ್ನು ಕೇಳುತ್ತಿದ್ದಂತೆ ಹನೀಫ್ ಗೊಳ್ಳನೆ ನಕ್ಕ. ಬಳಿಕ.

'ಓ... ಹಾಗೆ, ಏನು ಭಾವಾ ನನಗೇನೂ ಅರ್ಥವಾಗುವುದಿಲ್ಲ ಎಂದುಕೊಂಡಿರಾ? ನನ್ನ ಮಗಳು ನಿಮಗಿಬ್ಬರಿಗೂ ಕಣ್ಣಿನ ಕಸವಾಗಿ ನಿಮ್ಮ ನಿದ್ರೆ ಕೆಡಿಸುತ್ತಿದ್ದಾಳೆ. ಅವಳನ್ನು ಕಾಲ್ಚೆಂಡು ಮಾಡಿಕೊಂಡು ಆಡಲು ಅನುವಾದಿರಿ ಅಲ್ಲವಾ?' ಉದ್ವಿಕ್ತನಾಗಿ ಕೇಳಿದನಾತ.

'ಛೆ, ಛೆ, ಹಾಗಲ್ಲಪ್ಪಾ, ಅವಳು ಒಂದು ಒಳ್ಳೆಯ ಮನೆ ಸೇರಿದರೆ ನನಗೂ ಸಂತೋಷವೇ ಅಲ್ಲವಾ? ಹೇಗೂ ಆತ ನಿನ್ನ ಗೆಳೆಯ. ಯಾಕೆ ಪ್ರಯತ್ನಿಸಬಾರದು ಎಂದಷ್ಟೆ ಕೇಳಿದೆ' ಎಂದನು. ನಯವಾಗಿ ಧೂರ್ತ ತನಕ್ಕೊಂದು ಸುಂದರ ಹೊದಿಕೆ ಹಾಕಿ ಮುಚ್ಚುವ ಪ್ರಯತ್ನ.

'ನನ್ನ ಮಗಳನ್ನು ಯಾವಾಗ ಯಾವ ಮನೆ ಸೇರಿಸಬೇಕೂಂತ ನನಗೆ ಗೊತ್ತು. ಅದಕ್ಕೆ ನೀವ್ಯಾರೂ ತಲೆ ಕೆಡಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಅವಳ ಕಾಲ ಮೇಲೆ ಅವಳು ನಿಂತ ಬಳಿಕವಷ್ಟೆ ಅವಳ ಮದುವೆ.'

'ನಮ್ಮ ಹೆಣ್ಣು ಮಕ್ಕಳಿಗೆ ಅದೆಲ್ಲ ಯಾಕೆ? ಈ ಪ್ರಾಯದಲ್ಲಿ ಮದುವೆ ಮಾಡುವುದೇ ಚೆಂದ ಅಲ್ಲವಾ? ತಡ ಮಾಡಿದರೆ ಈಗಿನ ಕಾಲದಲ್ಲಿ ಹುಡುಗ ಸಿಕ್ಕುವುದೂ ಕಷ್ಟ' ಎನ್ನುತ್ತಿದ್ದಂತೆ ಹನೀಫ್ ಅವರ ಮಾತನ್ನು ನಡುವೆಯೇ ತಡದು

'ನೀವೆಲ್ಲ ನಿಮ್ಮಗಂಡು ಮಕ್ಕಳಿಗೆ ದರ ನಿಶ್ಚಯಿಸಿದ್ದೀರಿ ತಾನೇ? ಮಾಲನ್ನು ಒರೆಗೆ ಹಚ್ಚಿ ನಾನೂ ಕೂಡಾ ಚೌಕಾಸಿ ಮಾಡಬಲ್ಲೆ. ಆದರೆ ನಿಮ್ಮ ಮಾಲು ಅಷ್ಟು ಉತ್ತಮ ಅಂತ ನನಗನ್ನಿಸಿಲ್ಲ. ಹಾಗಾಗಿ ನನ್ನ ಮಗಳ ಭಯ ನಿಮಗೆ ಬೇಡ. ನಿಮಗೆ ಉತ್ತಮ ದರ ದೊರೆಯುವಲ್ಲಿ ನಿಮ್ಮ ಮಾಲುಗಳನ್ನು ಬಿಕರಿ ಮಾಡಿ. ಆದರೆ ಒಂದು ಮಾತು, ಅಬ್ಬಾಸ್ ಹಾಜಿಯ ಮಗ ಬಂದು ನನ್ನೊಡನೆ, 'ನಿಮ್ಮ ಮಗಳನ್ನು ನನಗೆ ಕೊಡಿ' ಅಂದರೆ ನಾನು ಖಂಡಿತವಾಗಿಯೂ ಒಪ್ಪಿಕೊಳ್ಳುವೆ. ಅವನ ಹೆತ್ತವರ ಒಪ್ಪಿಗಾಗಿ ನಾನು ಕಾಯುವುದಿಲ್ಲ. ಈ ಮಾತನ್ನು ಆತನಿಗೆ ನೀವೇ ತಿಳಿಸಿಬಿಡಿ. ನೀವಿಬ್ಬರೂ ಸೇರಿ ಈ ಆಟವನ್ನು ಆರಂಭಿಸಿದಿರಿ. ಹಾಗಾಗಿ ನನ್ನದೂ ಒಂದು ಒದೆ ಇರಲಿ. ಇಬ್ಬರೇ ಆಡುವುದಕ್ಕಿಂತ ಮೂವರಿದ್ದರೆ ಮತ್ತಷ್ಟು ಮನರಂಜನೆ ದೊರೆತೀತು.'

ಮರು ದಿನ ಈ ಮಾತನ್ನು ಕೇಳಿದ ಅಬ್ಬಾಸ್ ಹಾಜಿ ಕೋಪೋದ್ರಿಕ್ತರಾದರು.

'ಅಬ್ಬ, ಈ ವಕೀಲನ ಧಿಮಾಕೇ ಎಂದು ಶತಪಥ ತಿರುಗತೊಡಗಿದರು. ತಮ್ಮ ಮಗನಿಗೆ ಬುದ್ದಿ ಹೇಳಿ ಅವನನ್ನು ಆ ಕಡೆ ನೋಡದಂತೆ ಮಾಡುವುದು ಹೇಗೆಂಬ ಚಿಂತೆಯಲ್ಲಿ ತಲ್ಲೀನರಾದರು. ಅವರ ಹೆಂಡತಿ ಜುಲೇಕಮ್ಮ ಬಂದು, 'ನೀವು ಯಾಕೆ ಹೀಗೆ ಚಿಂತೆ ಹತ್ತಿಸಿಕೊಳ್ತೀರಿ? ಅವನೇನು ಈಗ ಮದುವೆ ಆಗ್ತೇನೇಂತ ಹೊರಟಿಲ್ಲವಲ್ಲ?... ಇಷ್ಟಕ್ಕೂ ಆ ಹುಡುಗಿ ನನಗೇನೊ ಒಪ್ಪಿಗೆಯೇ ನಿಮ್ಮ ಚಿಂತೆ ನನಗಂತೂ ಅರ್ಥವಾಗುವುದಿಲ್ಲ' ಎಂದರು.

'ಹೂಂ... ನಿನಗರ್ಥವಾಗುತ್ತದೆ. ನಿನ್ನನ್ನು ಗೋರಿಯಲಿ ಇಟ್ಟಾಗ!' ಸಿಡುಕಿದರು ಹಾಜಿ.

'ಈ ದಿನ ನನ್ನನ್ನು ಎಷ್ಟನೇ ಬಾರಿಗೋರಿಯಲ್ಲಿ ಇಡುತ್ತಿದ್ದೀರಿ? ದಿನಾಲೂ ನಿಮ್ಮ ಈ ಉರಿ ಮುಖ ನೋಡುವುದಕ್ಕಿಂತ ಗೋರಿಯಲ್ಲಿ ಹಾಯಾಗಿ ಮಲಗಿರುವುದು ಒಳ್ಳೆಯದು' ಎಂದು ಧುಮುಗುಟ್ಟುತ್ತಾ ಜುಲೇಕಮ್ಮ ಒಳ ಸರಿದಳು.

**ಕಥೆಗಾರ್ತಿಯ ಪರಿಚಯ:** ಸಾರಾ ಅಬೂಬಕ್ಕರ್ (ಜೂನ್ ೩೦, ೧೯೩೬) ಕನ್ನಡದ ಪ್ರಮುಖ ಕತೆಗಾರ್ತಿ, ಕಾದಂಬರಿಗಾರ್ತಿ. ಇವರು ಕಾಸರಗೋಡಿನಲ್ಲಿ ಜನಿಸಿದರು. ಇವರು ಚಂದ್ರಗಿರಿ ತೀರದಲ್ಲಿ, ಸಹನಾ, ವಜ್ರಗಳು, ಕದನ ವಿರಾಮ ಮೊದಲಾದ ಕಾದಂಬರಿಗಳನ್ನೂ, ಚಪ್ಪಲಿಗಳು, ಪಯಣ ಮತ್ತು ಇತರ ಕಥೆಗಳು, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಖೆಡ್ಡ ಮತ್ತು ಇತರ ಕಥಾ ಸಂಕಲನಗಳನ್ನೂ ಬರೆದಿದ್ದಾರೆ. ಐಷಾರಾಮದ ಆಳದಲ್ಲಿ ಪ್ರವಾಸ ಕಥನವನ್ನು ಬರೆದಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ ಇನ್ನೂ ಮೊದಲಾದ ಪ್ರಶಸ್ತಿಗಳು ಸಂದಿವೆ.

**ಪ್ರಶ್ನೆಗಳು:**

೧. ಅಬ್ಬಾಸ್ ಹಾಜಿಯವರಿಗೆ ಮಗ ಹನೀಫ್‌ನ ಬಗೆಗಿರುವ ಅಸಮಾಧಾನ ಯಾವುದು?
೨. ಅಬ್ಬಾಸ್ ಹಾಜಿಯವರ ವ್ಯಕ್ತಿತ್ವ ಪರಿಚಯಿಸಿ.
೩. ಅಬ್ಬಾಸ್ ಹಾಜಿ ಹಾಗೂ ಹನೀಫ್ ಇವರಿಬ್ಬರ ನಡುವೆ ಇರುವ ಧೋರಣೆಗಳಾವುವು?
೪. ಅಬ್ಬಾಸ್ ಹಾಜಿ ಹಾಗೂ ಹನೀಫ್ ಇವರ ವ್ಯಕ್ತಿತ್ವಗಳನ್ನು ನಿರೂಪಿಸಿ.

# ೩. ರಾಮರಾವಣರ ಯುದ್ಧ

**–ಕುವೆಂಪು**

**ಆಶಯ:** ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಆತನ ಬಾಲ್ಯಕಾಲದ ಅನುಭವ ವಹಿಸುವ ಪಾತ್ರ ಅತ್ಯಂತ ಮಹತ್ವಪೂರ್ಣವಾದುದು. ವ್ಯಕ್ತಿಗಳು ಯಾವ ಬಗೆಯ ಕೌಟುಂಬಿಕ, ಪ್ರಾದೇಶಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿ ಹುಟ್ಟುವರೋ, ಅದಕ್ಕನುಸಾರವಾಗಿ ಅವರ ಬಾಲ್ಯಾನುಭವ ರೂಪುಗೊಳ್ಳುವುದು ಸಹಜವಾದುದು. ಈ ಘಟ್ಟದಲ್ಲಿ ಮಕ್ಕಳು ತಮ್ಮ ಸ್ನೇಹಿತರೊಂದಿಗೆ ಆಡುವ ಆಟಗಳು, ನೋಡುವ ನೋಟಗಳು ಮತ್ತು ಮಾಡುವ ಸಾಹಸಗಳು ಅವರ ಕಲ್ಪನಾ ಸಾಮರ್ಥ್ಯ ಹಾಗೂ ಸೃಜನಶೀಲ ವ್ಯಕ್ತಿತ್ವವನ್ನು ಕಟ್ಟುವುದರಲ್ಲಿ ಮಹತ್ತರವಾದ ಪಾತ್ರವಹಿಸುತ್ತವೆ. ಮಕ್ಕಳ ಮನೋಲೋಕವು ವಾಸ್ತವ ಲೋಕದ ಪ್ರಚಲಿತ ರೂಢಿ, ಸಂಪ್ರದಾಯ, ರೀತಿನೀತಿಗಳಿಂದ ಸಂಪೂರ್ಣ ಹೊರತಾದ ವಿಶಿಷ್ಟವಾದ ಹಾಗೂ ವಿಸ್ಮಯಕಾರಿಯಾದ ಪ್ರಪಂಚ. ಅದಕ್ಕೆ ವಾಸ್ತವದ ಹಂಗಿಲ್ಲ; ಹಾಗೆಂದು ಅದೇನೂ ಅವಾಸ್ತವವೂ ಅಲ್ಲ, ಬದಲಾಗಿ ಅದೊಂದು ವಿಶಿಷ್ಟ ವಾಸ್ತವ. ಈ ಗುಣವೇ ಜಗತ್ತಿನ ಬಹುದೊಡ್ಡ ಕಲಾವಿದರು, ಮತ್ತು ಸೃಜನಶೀಲ ವ್ಯಕ್ತಿಗಳ ಸೃಜನಶೀಲ ಸಾಮರ್ಥ್ಯವನ್ನು ರೂಪಿಸುವುದರ ಹಿನ್ನೆಲೆಯಲ್ಲಿರುವ ಮುಖ್ಯವಾದ ಸಂಗತಿ.

ಬೈಗಿನಿಂದ ಬೆಳಗಾಗುವವರೆಗೂ ಪೆರಡೂರು ಮೇಳದ ಭಾಗವತರ ಆಟ ನೋಡಿ ಬಂದು, ಅಡುಗೆ ಮನೆಯ ಒಲೆಯ ಬಳಿ ಚಳಿ ಕಾಯಿಸುತ್ತ, ಕಾಫಿ ಕುಡಿಯುತ್ತ ಹರಟುತ್ತಿದ್ದೆವು. ನಮ್ಮೂರ ಕಡೆ ಬಯಲಾಟವನ್ನು ಭಾಗವತರಾಟ ಎಂದು ಕರೆಯುತ್ತಾರೆ. ರಾತ್ರಿ ನಾವು ನೋಡಿದ್ದ 'ಕಾಳಗ' ರಾಮ ರಾವಣರದು. ಹುಡುಗರಿಗೆ ಕಂಡಿದ್ದನ್ನೆಲ್ಲ ಬಿಡದೆ ಅನುಕರಿಸುವುದೊಂದು ಹುಚ್ಚಷ್ಟೆ! ಅದರಂತೆಯೆ ನಾವೆಲ್ಲ – ನಾನು, ತಿಮ್ಮು, ಮಾನು, ಓಬು, ಎಂಕ್ಟು, ವಾಸು, ದಾನಿ, ರಾಜಿ – ಆ ದಿನ ರಾಮರಾವಣರ 'ಕಾಳಗ' ಆಡಬೇಕೆಂದು ಮಸಲತ್ತು ಮಾಡಿದೆವು. ಹುಡುಗರ ಲೋಕದಲ್ಲಿ ಯೋಚನೆ ಮಾಡಿದ್ದೆಲ್ಲ ಆಗಿಯೇ ಆಗುತ್ತದೆ. ಕಾಫಿ ಉಪ್ಪಿಟ್ಟುಗಳನ್ನು ಬೇಗಬೇಗ ಹೊಟ್ಟೆಗೆ ಸುರಿದುಕೊಂಡು, ಮನೆಯ ಹೊರ ಅಂಗಳಕ್ಕೆ ಹೊರಟೆವು. ಅಮ್ಮ, ಚಿಕ್ಕಮ್ಮ, ಅಕ್ಕಯ್ಯ ಇವರೆಲ್ಲ "ರಾತ್ರಿ ನಿದ್ದೆಗೆಟ್ಟಿದ್ದೀರಿ. ಮಲಗಿಕೊಳ್ಳಿ" ಎಂದು ಬಯ್ದರು. ದೊಡ್ಡವರು ಹುಡುಗರನ್ನು ತಮ್ಮಂತೆಯೆ ಎಂದು ಭಾವಿಸುವುದು ಶುದ್ಧ ತಪ್ಪು. ಅವರಿಗೆ ಆಯಾಸವಾಗಿದ್ದರೆ ನಮಗೂ ಆಯಾಸವೇ? ನಮ್ಮ ರಾಮರಾವಣರ ಯುದ್ಧದ ಮುಂದೆ ಅವರ ನಿದ್ದೆಯೇ? ಅವರ ಮಾತನ್ನು ಕಸದ ಮೂಲೆಗೆ ಒತ್ತಿ, ಹೊರ ಅಂಗಳಕ್ಕೆ ಓಡಿದೆವು. ಒಬ್ಬರನ್ನೊಬ್ಬರು ಆತುರದಿಂದ ಹುರಿದುಂಬಿಸುತ್ತ, ಕೇಕೆಹಾಕುತ್ತ ನುಗ್ಗಿದೆವು. ರಾಜಿ ಹೊಸಲನ್ನು ಎಡವಿದ್ದವಳು, ಮೆಲ್ಲನೆ ಎದ್ದು, ಸುತ್ತಲೂ ನೋಡಿ, ಯಾರೂ ನೋಡದೆ ಇದ್ದುದರಿಂದ ಪದ್ಧತಿಯಂತೆ ಬಿಕ್ಕಿಬಿಕ್ಕಿ ಅಳುವುದನ್ನು ತಡೆದು ಗುಂಪನ್ನು ಸೇರಿಕೊಂಡಳು.

ಹೊತ್ತಾರೆಯ ಹೊತ್ತು ಮಲೆನಾಡಿನ ಹಸುರಾದ ಬೆಟ್ಟಗಳ ತುದಿಯಿಂದ ಎಳೆಬಿಸಿಲನ್ನು ಚಿಮುಕಿಸುತ್ತಿತ್ತು. ಹೊರ ಅಂಗಳದಲ್ಲಿದ್ದ ದೊಡ್ಡ ಬಸಿರಿಮರದಲ್ಲಿಯೂ ಹುಣಿಸೆಮರದಲ್ಲಿಯೂ ಹಕ್ಕಿಗಳ ಹಿಂಡು ಚಿಲಿಪಿಲಿಗುಟ್ಟುತ್ತಿತ್ತು. ಹಸುಳೆಬಿಸಿಲು ತುಸು ದಟ್ಟವಾದ ತಳಿರ ನಡುವೆ ನುಗ್ಗಿ ಬರುತ್ತಿದ್ದುದರಿಂದ ಮರದ ನೆರಳು ಬಲೆಬಲೆಯಾಗಿತ್ತು. ಆ ಬಲೆನೆರಳೆ ನಮ್ಮ 'ರಂಗಸ್ಥಳ'ವಾಯಿತು. ಈಗ ನಮ್ಮ ಮನೆಗೆ ಹೋಗಿ ನೋಡಿದರೆ ಆ ಹುಣಿಸೆಮರವೂ ಮಾಯವಾಗಿದೆ, ಆ ಬಸರಿ ಮರವೂ ಮಾಯವಾಗಿದೆ. ಜೊತೆಗೆ ಅಂದು ನನ್ನೊಡನೆ ಭಾಗವತರಾಟವಾಡಿದ ಸೋದರ ಸೋದರಿಯರೂ ಅನಂತ ವಿಶ್ವದಲ್ಲಿ ಅಡಗಿ ಮಾಯವಾಗಿದ್ದಾರೆ. ಅಂದಿನ ಜನ, ಅಂದಿನ ಮನ, ಅಂದಿನ ಧನ ಎಲ್ಲವೂ ಅಂತರ್ಧಾನವಾದಂತಿವೆ. 'ಹಾಳೂರು' ಆಗದಿದ್ದರೂ ಅದರ ನೆನಪು ತರುವಂತಿದೆ. ಕಾಲದ ಮಹಿಮೆ! 'ಕಾಲೋಸ್ಮಿ ಲೋಕಕ್ಷಯಕೃತ್' ಎಂದು ಶ್ರೀಕೃಷ್ಣ ಹೇಳಿಲ್ಲವೆ?

'ಕಾಲಾಯತಸ್ಮೈ ನಮಃ' – ಆ ಕಾಲವೊಂದಿತ್ತು!
ಆ ಕಾಲವೊಂದಿತ್ತು! ದಿವ್ಯ ತಾನಾಗಿತ್ತು! ಬಾಲ್ಯವಾಗಿತ್ತು!
ಮಣ್ಣು ಹೊನ್ನಾಗಿ, ಕಲ್ಲೆ ಹೂವಾಗಿ, ನೀರಮೃತವಾಗಿ,
ಮನೆ ಮೇರುವಾಗಿ, ಕವಿಶೈಲ ತಾನೆ ಕೈಲಾಸವಾಗಿ,
ಕಾಡೆ ನಂದನವಾಗಿ, ನೆಲವೆ ನಾಕವ ನಗುವ ಕಾಲವೊಂದಿತ್ತು!
ಆ ಕಾಲವೊಂದಿತ್ತು! ದಿವ್ಯ ತಾನಾಗಿತ್ತು! ಬಾಲ್ಯವಾಗಿತ್ತು!

ನಾನು ಮಾತ್ರ ನನ್ನ ತಾತ ಮುತ್ತಾತರನ್ನಾದರೂ ಮರೆತೇನು! ಆದರೆ ಆ ಹುಣಿಸೆಮರ ಬಸಿರಿಮರಗಳನ್ನು ಮಾತ್ರ ಎಂದೆಂದಿಗೂ ಮರೆಯಲಾರೆ. ಆ ಬಸಿರಿಮರ ಹೋದುದೇ ನನಗೊಂದು ದೊಡ್ಡ ಸೋಜಿಗ! ಮಹಾ ಸಮಸ್ಯೆ! ಅಂದು ನಾವು ಆ ಬಸಿರಿಮರದ ರಾಕ್ಷಸಗಾತ್ರವನ್ನು ಕಂಡು, ಅದನ್ನು ಕಡಿಯಲು ಯಾರಿಂದಲೂ ಸಾಧ್ಯವಿಲ್ಲ, ತೋಟದಾಚೆಯ ಭೂತನಿಂದಲೂ ಸಾಧ್ಯವಿಲ್ಲ ಎಂದು ಯೋಚಿಸಿ ಹಿಗ್ಗುತ್ತಿದ್ದೆವು. ಆದರೆ ವಿಧಿವಿಲಾಸ! ಅಂದು ಅಸಾಧ್ಯವೆಂದು ತೋರಿದುದು ಇಂದು ಸಾಧ್ಯವಾಗಿದೆ. ಅಂದು ಸಾಧ್ಯವಾದುದು ಮಾತ್ರ ಇಂದು ಅಸಾಧ್ಯವಾಗಿ ಪರಿಣಮಿಸಿದೆ!

ಆ ಹುಣಿಸೆಮರ ಬಸಿರಿಮರಗಳ ಅಡಿಯಲ್ಲಿ ಎಷ್ಟು ಸೊಗಸಾದ ಪ್ರಾತಃಕಾಲಗಳನ್ನು ಕಳೆದಿದ್ದೇವೆ! ಎಷ್ಟು ಸಾರಿ ನಮ್ಮ ಜೀವನದ ಭವಿಷ್ಯದ ಬಲೆಯನ್ನು ನಾವರಿಯದಂತೆಯೆ ನೆಯ್ದಿದ್ದೇವೆ! ಎಷ್ಟು ಸಾರಿ ಹೊಂಬಿಸಿಲಿನಲ್ಲಿ ನೆಲದ ಮೇಲೆ ಉದ್ದವಾಗಿ ಮಲಗಿದ್ದ ನಮ್ಮ ನೆಳಲನ್ನು ಅಳೆದಿದ್ದೇನೆ! ಪೂರಯಿಸದಿದ್ದುದಂತಿರಲಿ! ಎಷ್ಟು ಸಾರಿ ಒಬ್ಬರೊಬ್ಬರ ನೆಳಲಿನ ತಲೆಗಳನ್ನು ತುಳಿದು ಜಗಳವಾಡಿದ್ದೇವೆ! ಆಹಾ, ಆ ಇಂಪಾದ ಸನ್ನಿವೇಶಗಳನ್ನು ನೆನೆದುಕೊಂಡರೆ, "ಬಾಲ್ಯವೇ ಹೋದೆಯಾ!" ಎಂದು ಎದೆ ಒಳಗೊಳಗೆ ರೋದಿಸಿ ಮರುಗದಿರುವುದಿಲ್ಲ.

ಬಸಿರಿಮರದ ನೆಳಲಿನ 'ರಂಗಸ್ಥಳ'ವನ್ನು ಸೇರಿದ ಮೇಲೆ ರಾಮರಾವಣರ ಯುದ್ಧಕ್ಕೆ ಮುನ್ನುಡಿಯ ರೂಪವಾದ ಸಂಭಾಷಣೆ ಪ್ರಾರಂಭವಾಯಿತು. ಮೊದಲು ಯಾರು ಯಾರು ಯಾವ ಯಾವ ಪಾತ್ರಗಳನ್ನು ವಹಿಸಬೇಕೆಂಬ ಪ್ರಬಲವಾದ ಚರ್ಚೆ ನಡೆಯಿತು.

ತಿಮ್ಮು "ನಾನು ರಾಮನ 'ಪಾರ್ಟ್' ಹಾಕುತ್ತೇನೆ" ಎಂದು ಹಟ ಹಿಡಿದ. ಓಬು (ಸ್ವಲ್ಪ ಕಿಲಾಡಿ) ತಿಮ್ಮು ಹೇಳಿದ್ದು ಕೇಳಿ "ಚೋಟುದ್ದ ಇದಾನೆ ಇವನಿಗೆ ರಾಮನ ವೇಷವಂತೆ!" ಎಂದ.

ಎಂಕ್ಟು ಅದನ್ನು ಸಮ್ಮತಿಸಿ "ಹೌದೊ, ತಿಮ್ಮಣ್ಣಯ್ಯ, ನಿನ್ನ ಭಾಗವತರಾಟದಲ್ಲಿ ರಾಮನ ವೇಷ ಹಾಕಿದ್ದವನು ಭೀಮನ ಹಾಂಗಿದ್ದ" ಎಂದ.

ರಾಮ ವೇಷದ ಹಕ್ಕು ನಿರ್ಣಯವಾಗುವ ಮುನ್ನವೇ, ವಾಸು ತಾನು ಲಕ್ಷ್ಮಣನಾಗುತ್ತೇನೆ ಎಂದ. ಓಬು ಮತ್ತೆ "ಒಂದು ಮಣ ತೂಕಾನೂ ಇಲ್ಲ. ಲಕ್ಷಮಣ ಆಗ್ತಾನಂತೆ! ನೀನು ಹನುಮಂತದ ಪಾರ್ಟಿಗೆ ಲಾಯಖ್ಖು! ನಿನ್ನ ಮುಖಾನೂ ಹಾಂಗೇ ಇದೆ ಕಣೊ" ಎಂದ.

ವಾಸುವಿಗೆ ಎಂದೂ ಬರದ ಸಿಟ್ಟು ಬಂದು ಓಬುವನ್ನು ಹೊಡೆಯಲು ಹೋದ. ಆದರೆ ವಾಸುವಿನ ಸಿಟ್ಟಿಗಿಂತ ಓಬುವಿನ ರಟ್ಟೆಯೇ ಬಲವಾಗಿತ್ತು; ಪೆಟ್ಟು ಬೀಳಲು ಸಿಟ್ಟು ಓಡಿತು.

ಅಷ್ಟರಲ್ಲಿ ನಾನು (ಸುಮ್ಮನಿರಬೇಕೋ ಇಲ್ಲವೋ) ರಾಜಿಯನ್ನು ಕುರಿತು "ರಾಜಿ, ನೀನು ಲಂಕಿಣಿಯ ಪಾರ್ಟು ಹಾಕೇ" ಎಂದು ತಡೆಯಲಾರದೆ ನಕ್ಕುಬಿಟ್ಟೆ. ರಾಜಿ ತನಗೆ ಲಂಕಿಣಿಯ ವೇಷ ಬೇಡವೆಂದು ಹೇಳುವ ಸಿಟ್ಟಿನ ರಭಸದಲ್ಲಿ ಸಾಕ್ಷಾತ್ ಲಂಕಿಣೀಯೇ ಆಗಿಬಿಟ್ಟು ಬಾಯಿಗೆ ಬಂದಂತೆ ನನ್ನ ಮೇಲೆ ಬೈಗುಳದ ಮಳೆಗರೆದಳು.

ಮಾನು (ಕುಚೇಷ್ಟೆಯ ಹುಡುಗ) ರಾಜಿಯನ್ನು ಮತ್ತೂ ಕಣಕಬೇಕೆಂದು ಯೋಚಿಸಿ ಒಂದು ವಿಧವಾದ ಅಣಕಿಸುವ ದನಿಯಿಂದ "ಓಹೋ, ಮತ್ತೇನು ನಿನಗೆ ಸೀತೆಯ ಪಾರ್ಟು ಕೊಡ್ತಾರೆ ಎಂದು ಹಾರೈಸಿಕೊಂಡಿದ್ದೆಯಾ? ಏನಪ್ಪಾ. ಈ ಹುಡುಗಿಯರಿಗೆ ಈಗಾಗಲೇ ಗಂಡರ ಯೋಚನೆ" ಎಂದ.

ಸೀತೆಯ ವೇಷವನ್ನು ಬಯಸಿದ ರಾಜಿಯ ಮುಖ ಆಗಲೇ ಹನುಮಂತನ ಮುಖವಾಗುತ್ತ ಇತ್ತು. ಅಷ್ಟರಲ್ಲಿ ಓಬು "ಅವಳ ಮುಖವಾದರೂ ಚೆನ್ನಾಗಿದೆಯೇ? ತಿಮ್ಮು, ನೀನೆ ಹೇಳೋ. ಅವಳ ಮುಖ ಯಾರ ವೇಷಕ್ಕೆ ಲಾಯಖ್ಖಾದುದೆಂದು" ಎಂದು ಹೇಳಿ ಕುಣಿಕುಣಿದು ನಕ್ಕ.

ತಿಮ್ಮು ಅವಳ ಮುಖದ ಕಡೆಗೆ ಸ್ವಲ್ಪ ಹೊತ್ತು ನಿಟ್ಟಿಸಿ ನೋಡಿದ. ರಾಜಿ ಮುಖ ಮುಚ್ಚಿಕೊಂಡಳು. ಆದರೂ ತಿಮ್ಮು ಓಬುವಿನ ಕಡೆಗೆ ತಿರುಗಿ "ಅಲ್ಲೋ ಓಬು, ನೀನು ಯಾವ ವೇಷ ಹಾಕ್ತೀಯೋ ಆ ವೇಷದ ತಂಗಿ ಪಾರ್ಟಿಗೆ ರಾಜಿಯೇ ಸರಿ" ಎಂದ.

ಎಲ್ಲರೂ ಗೊಳ್ಳೆಂದು ಕೈಚಪ್ಪಾಳೆ ಹೊಡೆದು ನಕ್ಕರು. ಓಬುವಿಗೆ ಮುಖ ಭಂಗವಾಯಿತು. ರಾಜಿಗೂ ಮುಯ್ಯಿತೀರಿಸಿಕೊಂಡ ಹಾಗಾಗಿ ಸಮಾಧಾನವಾಯಿತು. ಕಡೆಗೆ ಎಲ್ಲರೂ ಸೇರಿ ಮಾನುವೇ ರಾಮನ ಪಾರ್ಟು ಹಾಕುವುದು ಎಂದು ನಿರ್ಣಯಿಸಿದೆವು. ದಾನಿಯೇ ಸೀತೆಯ ಪಾರ್ಟು ಹಾಕಬಹುದೆಂದು ಕೆಲವರು ಸೂಚನೆ ಕೊಟ್ಟರು. ಆದರೆ ನನಗೇಕೋ ಅದು ಸರಿಬೀಳಲಿಲ್ಲ. ದಾನಿಗೆ ಮಾನು ಕಕ್ಕ, ದಾನಿ ಮಾನುಗೆ ಮಗಳಾದ ಹಾಗಾಯಿತು. ಹಾಗೆಂದ ಮೇಲೆ ಮಾನು ರಾಮನ ವೇಷ ಹಾಕಿದರೆ ದಾನಿ ಸೀತೆ ವೇಷ ಹಾಕುವುದು ನನಗೆ ಸರಿ ಬೀಳಲಿಲ್ಲ. ಕಡೆಗೆ ಓಬು ಒಂದು

ಸಮಾಧಾನ ಹೇಳಿದ: ಆಟದ ರಾಮ, ಆಟದ ಸೀತೆ; ಆದ್ದರಿಂದ ಪರವಾ ಇಲ್ಲೆಂದು. ನನಗೂ ಅವನ ಸಿದ್ಧಾಂತ ಮನಸ್ಸಿಗೆ ಒಪ್ಪಿತು ಹುಂ ಎಂದೆ.

ಕಡೆಗೆ ಅತ್ತ ಬಿದ್ದು ಇತ್ತ ಬಿದ್ದು ರಾವಣನ ಪಾರ್ಟು ನನ್ನ ಮೇಲೆ ಬಿತ್ತು. ನನಗೆ ಹೇಗಾದರೂ ರಾವಣನ ವೇಷ ಬಿಟ್ಟುಬಿಡಬೇಕೆಂದು ಆಸೆ. ಆದ್ದರಿಂದ ನನಗೆ ಒಂಬತ್ತು ತಲೆ ತಂದುಕೊಟ್ಟ ಹೊರತೂ ನಾನು ರಾವಣನಾಗುವುದೇ ಇಲ್ಲ ಎಂದು ಹಟಹಿಡಿದುಬಿಟ್ಟೆ. ಸೂತ್ರಧಾರನಾದ ಮಾನುವಂತೂ ಕಂಗೆಟ್ಟು ಹೋದ. ದಾನಿಗೂ ತುಂಬಾ ಉದ್ವೇಗ – ತನ್ನ ಸೀತೆಯ ಪಾರ್ಟು ರಾವಣನಿಲ್ಲದೆ ಎಲ್ಲಿ ನಿಂತು ಹೋಗುವುದೋ ಎಂದು.

ಓಬು ರಾವಣನಿಗೆ ಹತ್ತುತಲೆ ಇರಲೇ ಇಲ್ಲವೆಂದು ಸಾಧಿಸಲು ಬಹಳ ಪ್ರಯತ್ನಪಟ್ಟ. ನಾನು ಅವನಿಗೆ ಬಿಟ್ಟು ಕೊಡುವೆನೇ?

"ಕಣ್ಣಿಂಗಿ ಹೋಗಿತ್ತೇನೊ ನಿನಗೆ? ನಿನ್ನೆ ಭಾಗವತರಾಟದಲ್ಲಿ ರಾವಣನಿಗೆ ಹತ್ತುತಲೆ ಇರಲಿಲ್ಲವೇನೋ?" ಎಂದು ಕೋಪದಿಂದ ನುಡಿದೆ.

ಅಷ್ಟು ಹೊತ್ತಿಗೆ, ನನ್ನ ದುರದೃಷ್ಟಕ್ಕೆ ಸರಿಯಾಗಿ, ಹಿಂದಿನ ರಾತ್ರಿ ರಾವಣನ ವೇಷ ಹಾಕಿದ್ದ ಸೀನಪ್ಪಯ್ಯನವರು ದೂರದಲ್ಲಿ ಹೋಗುತ್ತಿದ್ದರು. ಓಬು ಅವರನ್ನು ಕಂಡು "ನೋಡಿ, ಎಲ್ಲಾ ನೊಡಿ, ನಿನ್ನೆ ಸೀನಪ್ಪಯ್ಯನವರೆ ರಾವಣನಾಗಿದ್ದದ್ದು. ಅವರಿಗೆ ಹತ್ತುತಲೆ ಇದೆಯೆ? ಒಂದೂ ಪೂರ್ತಿಯಾಗಿಲ್ಲ" ಎಂದ.

ವಾಸ್ತವವಾಗಿಯೂ ಸೀನಪ್ಪಯ್ಯನವರಿಗೆ ಒಂದು ತಲೆಯೂ ಪೂರ್ತಿಯಾಗಿರಲಿಲ್ಲ. ಏನೋ ಆಗಿ ಸ್ವಲ್ಪ ಮುಕ್ಕಾಗಿತ್ತು. ನನಗಂತೂ ಪೇಚಾಟಕ್ಕೆ ಬಂತು. ಓಬುವಿನ ಪ್ರತ್ಯಕ್ಷ ಪ್ರಮಾಣದ ಮುಂದೆ ನನ್ನಾಟ ನಡೆಯದೆ ಹೋಯಿತು. ರಾವಣನಾಗಲು ಒಪ್ಪಿಕೊಂಡೆ.

ನನಗೆ ರಾವಣನ ವೇಷ ಕೊಡಲು ಮುಖ್ಯಕಾರಣನಾದ ಓಬುವಿನ ಮೇಲೆ ರಚ್ಚೆಟ್ಟು ಮುಯ್ಯಿತೀರಿಸಿದೆ. ಅದು ಹೇಗೆನ್ನುವಿರೋ? ಓಬು ಹನುಮಂತನಾದರೆ ನಾನು ರಾವಣನಾಗುವೆ. ಇಲ್ಲದಿದ್ದರೆ ಇಲ್ಲವೆಂದು ಹಟಹಿಡಿದೆ. ಅದರ ಒಳಗುಟ್ಟು ಬೇರೆ. ಏನು ಅನ್ನುತ್ತೀರೋ! ಓಬು ಹನುಮಂತನಾದರೆ ರಾವಣನ ಮೇಲೆ ಯುದ್ಧಕ್ಕೆ ಹೋಗುತ್ತಾನೆ. ಆಗ ನನಗೆ ಅವನನ್ನು ಹೊಡೆಯಲು ಒಂದು ಸುಸಮಯ ದೊರಕುತ್ತದೆ ಎಂದು.

ಓಬು ಹನುಮಂತನಾದ. (ಹೊಸದಾಗೇನೂ ಆಗಲಿಲ್ಲ!) ಬಲಾತ್ಕಾರದಿಂದ ರಾಜಿಗೆ ಲಂಕಿಣಿ ಪಾರ್ಟು ಕೊಟ್ಟೆವು. ನಮ್ಮದೆಲ್ಲಾ ಒಂದೇ ಮದ್ದು; ರಾಜಿ ಲಂಕಿಣಿ ಪಾರ್ಟು ವಹಿಸಿಕೊಂಡರೆ ನಮ್ಮ ಜೊತೆ ಸೇರಿಸಿಕೊಳ್ಳುತ್ತೇವೆ; ಇಲ್ಲದಿದ್ದರೆ ಅವಳ ಸಂಗ ಬಿಟ್ಟುಬಿಡುತ್ತೇವೆ ಎಂದು ಎಲ್ಲರೂ ಹೇಳಿಬಿಟ್ಟೆವು. ಹುಡುಗರ ಭಾಗಕ್ಕೆ ಸಂಗ ಬಿಡುವುದೆಂದರೆ ಗಡಿಪಾರು ಮಾಡಿಸಿಕೊಳ್ಳುವುದಕ್ಕಿಂತಲೂ ಕಠಿಣತರವಾದ ಶಿಕ್ಷೆ. ರಾಜಿ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಂಡಳು; ಲಂಕಿಣಿಯಾದಳು.

ರಾಮನ ಪಾರ್ಟಾಯಿತು; ಸೀತೆಯ ಪಾರ್ಟಾಯಿತು; ಹನುಮಂತ ರಾವಣರ ಪಾರ್ಟುಗಳೂ ಆದುವು. ಲಂಕಿಣಿಯೂ ಸಿಕ್ಕಿದ ಹಾಗಾಯಿತು. ನಾನು ರಾವಣ: ಮಾನು ರಾಮ; ದಾನಿ; ಸೀತೆ; ಓಬು ಹನುಮಂತ; ರಾಜಿ ಲಂಕಿಣಿ; ಇನ್ನು ಉಳಿದವರು ಯಾರು?

ಆಗ ನಮಗೆ ವಾಲ್ಮೀಕಿ ರಾಮಾಯಣವೇ ಪ್ರಮಾಣ ಗ್ರಂಥವಾಗಿರಲಿಲ್ಲ. ಬೇಕಾದರೆ ನಮ್ಮದೇ ಒಂದು ಹೊಸ ರಾಮಾಯಣವನ್ನು ರಚಿಸುತ್ತಿದ್ದವು. ಏಕೆ ರಚಿಸಬಾರದು? ಕೋಟ್ಯಂತರ ರಾಮಾಯಣಗಳಿದ್ದುವಂತೆ. ನಮ್ಮ ರಾಮಾಯಣ ಕಳೆದುಹೋದ ರಾಮಾಯಣಗಳಲ್ಲಿ ಒಂದು!

ರಾಮಾಯಣದಲ್ಲಿ ನ್ಯಾಯವಾಗಿ ಭೀಮ ಬರುವುದಿಲ್ಲ. ಆದರೂ ಜೋಟುದ್ದ ವಾಸು ಭೀಮನಾಗುತ್ತೇನೆ ಎಂದು ಹಟಹಿಡಿದ. ನಾವು ಎಷ್ಟೆಷ್ಟೋ ಹೇಳಿದೆವು. ರಾಮಾಯಣ ಭೀಮಾಯಣವಲ್ಲವೆಂದು. ಆದರೇನು ಮಾಡುವುದು? ಅವನಿಗೆ ಭೀಮನ ಪಾರ್ಟು ಎಂದರೆ ಬಹಳ ಖುಷಿ. ಎಂದೋ ಒಂದುಸಾರಿ ಭಾಗವತರಾಟದಲ್ಲಿ ಭೀಮ ಮಂಡಕ್ಕಿ (ಪುರಿ) ಕಡಲೆ ಮುಕ್ಕುತ್ತಿದ್ದುದನ್ನು ನೋಡಿಬಿಟ್ಟಿದ್ದ. ಭೀಮನ ವೇಷ ಹಾಕಿದಾಗಲೆಲ್ಲ ಕಡಲೆ ಮಂಡಕ್ಕಿ ಸಿಕ್ಕುವುದೆಂದು ಅವನ ಮಹದಾಕಾಂಕ್ಷೆ; ಆಡುವುದು ರಾಮಾಯಣವಾಗಲಿ, ಶಾಕುಂತಲವಾಗಲಿ, ಚಂದ್ರಹಾಸವಾಗಲಿ, ಮತ್ತೇನೇ ಆಗಲಿ, ವಾಸುವಂತೂ ಭೀಮನ ಪಾರ್ಟು ಹಾಕಲೇಬೇಕು!

ನಮಗೆಲ್ಲ ಒಳ್ಳೆ ರಗಳೆಗೆ ಇಟ್ಟುಕೊಂಡಿತು, ಭೀಮನನ್ನು ರಾಮ ರಾವಣರ ಯುದ್ಧದಲ್ಲಿ ಹೇಗೆ ತರುವುದು ಎಂದು. ರಾಮಾಯಣದಲ್ಲಿ ಭೀಮ ಬರುವುದಿಲ್ಲ ಎಂದರೆ ವಾಸು ಕೇಳಲಿಲ್ಲ; ಅಷ್ಟಕ್ಕೇ ನಿಲ್ಲದೆ ಬಂದೇ ಬರುತ್ತದೆ ಎಂದೂ ಸಾಧಿಸಿಬಿಟ್ಟ. ನಮ್ಮಲ್ಲಿ ಯಾರೂ ರಾಮಾಯಣ ಓದಿರಲಿಲ್ಲ; ನಾವು ಆಡಿದ್ದೆ ರಾಮಾಯಣ! ಆದ್ದರಿಂದ ವಾಸು ಹೇಳಿದ್ದೇ ರಾಮಾಯಣವಾಗಬೇಕಾಗಿ ಬಂತು. ಸರಿ, ಅಭಿನವ ವಾಲ್ಮೀಕಿಯಾದ ಅವನನ್ನೇ ಕೇಳಿದೆವು – ರಾಮಾಯಣದಲ್ಲಿ ಭೀಮನ

ವೇಷ ತರುವುದು ಹೇಗೆ ಎಂದು. ಅವನೂ ಸ್ವಲ್ಪ ಯೋಚಿಸಿದ. ಹೊಸಕವಿತೆ ಬರೆಯಬೇಕಾದರೆ ಪಾಪ, ಆವೇಶ ಬರಬೇಕಷ್ಟೆ! ಕಡೆಗೂ ಆವೇಶ ಬಂತು: ರಾಮ ರಾವಣರಿಬ್ಬರು ಯುದ್ಧಕ್ಕೆ ಹೊರಡುವ ಮುಂಚೆ ಭೀಮಪೂಜೆ ಮಾಡಿ, ಬೇಕು ಬೇಕಾದ ಭಕ್ಷ್ಯಭೋಜ್ಯಗಳನ್ನು ನಿವೇದಿಸಬೇಕೆಂದು ವಾಸು ಸಲಹೆ ಕೊಟ್ಟ.

ಅಯ್ಯೋ ಅವನ ಮಸಣ; ಭಕ್ಷ್ಯ ಭೋಜ್ಯವೆಂದರೇನು? ಮಂಡಕ್ಕಿ, ಕಡಲೆ! ಅಂತೂ ಅಭಿನವ ವಾಲ್ಮೀಕಿಗಳು ಹೇಳುವಾಗ, ಅಲ್ಲ ಎನ್ನುವುದಕ್ಕಾದೀತೆ? ಹುಂ ಎಂದು ಸಮ್ಮತ ಕೊಟ್ಟುಬಿಟ್ಟೆವು. ಇನ್ನು ಉಳಿದವರು ಎಂಕ್ಟು, ತಿಮ್ಮು; ಅವರಿಗೆ ಪಾರ್ಟು ಕೊಡದಿದ್ದರೆ ಅವರೇನೂ ಸುಮ್ಮನಿರುವುದಿಲ್ಲ. ರಾಮಾಯಣವನ್ನೆ ನಿಲ್ಲಿಸಿಯೂ ಬಿಡಬಹುದು ಎಂಬ ಭಯ ಬೇರೆ. ಎಂಕ್ಟು ವಿಭೀಷಣನಾದ; ತಿಮ್ಮು ಕುಂಭಕರ್ಣನಾದ (ತನ್ನ ಸ್ವಭಾವಕ್ಕೆ ತಕ್ಕಂತೆ!) ಅಂತೂ ರಾಮಾಯಣದಲ್ಲಿರುವ ಪಾತ್ರಗಳಿಗೆ ನಮ್ಮ ಪಾತ್ರಗಳನ್ನು ಜೋಡಿಸುವುದಕ್ಕೆ ಬಲದಾಗಿ, ನಮ್ಮ ನಮ್ಮ ಮನಸ್ಸಿಗೆ ಬಂದ ಪಾತ್ರಗಳನ್ನು ಆರಿಸಿಕೊಂಡು ಹೊಸ ರಾಮಯಣ ಮಾಡಿದೆವು.

ರಾಮರಾವಣರು ಯುದ್ಧಕ್ಕೆ ಹೊರಡುವ ಮುನ್ನ "ಭೀಮ ಪೂಜೆ"ಗೆ ಆರಂಭವಾಯಿತು. ವಾಸು (ನಮ್ಮ ಗಾಳಿ ಭೀಮ) ಹುಣಿಸೆಯ ಮರದ ಬೇರಿನ ಮೇಲೆ ಕಲ್ಲಿನ ಮೂರ್ತಿಯಾಗಿ ಕುಳಿತುಕೊಂಡ. ರಾಮರಾವಣರು ಇಬ್ಬರೂ ಒಟ್ಟಿಗೆ ಬಂದು ಪೂಜೆ ಮಾಡಬೇಕೋ ಅಥವಾ ಬೇರೆಬೇರೆಯಾಗಿ ಬಂದು ಪೂಜೆ ಮಾಡಬೇಕೋ ಎಂದು ಅಭಿನವ ವಾಲ್ಮೀಕಿಯನ್ನು ಕೇಳಿದೆವು. ಭೀಮನಾಗಿದ್ದ ವಾಸು "ಬೇರೆ ಬೇರೆಯಾಗಿಯೇ ಬಂದು ಪೂಜೆ ಮಾಡಬೇಕು" ಎಂದು ಅಪ್ಪಣೆ ಮಾಡಿದ. ಇಬ್ಬರೂ ಒಟ್ಟಿಗೆ ಬಂದು ಪೂಜೆ ಮಾಡಿದರೆ ನೈವೇದ್ಯ ಎಲ್ಲಿ ಕಡಿಮೆಯಾಗುವುದೋ ಎಂದು ಅವನಿಗೆ ದೊಡ್ಡ ಭಯ. ಪೂಜೆಗೆ ಮೊದಲು ರಾಮ ಬರಬೇಕೋ? ರಾವಣ ಬರಬೇಕೋ ಎಂದು ಕೇಳಿದೆವು. ವಾಸುವಿಗೆ ಸ್ವಲ್ಪ ರಗಳೆಗಿಟ್ಟುಕೊಂಡಿತು, ಹಾಗೆಯೇ ಯೋಚನೆ ಮಾಡಿ "ರಾವಣನೇ ಮೊದಲು ಬರಲಿ" ಎಂದ. ವನವಾಸದಲ್ಲಿದ್ದ ರಾಮನಿಗೆ ಹೆಚ್ಚಾದ ತಿಂಡಿಯ ಪದಾರ್ಥಗಳು ಸಿಕ್ಕುವುದಾದರೂ ಹೇಗೆ? ಲಂಕಾಧಿಪತಿಯಾದ ರಾವಣನಾದರೋ ರಾಕ್ಷಸ. ದೊಡ್ಡ ಹೊಟ್ಟೆ, ದೊಡ್ಡ ಕೈ, ದೊಡ್ಡ ತಟ್ಟೆ! ಆದ್ದರಿಂದ ತಿಂಡಿ ಹೆಚ್ಚಾಗಿ ಸಿಕ್ಕುವುದೆಂದು ಯೋಚಿಸಿದ.

ವಾಸುವಿನ ಅಂತರಂಗವನ್ನು ಅರಿತ ಓಬು ಅಪಾಯ ಹುಡುಕಿದ. ನಾನೇ ರಾವಣನಾಗಿದ್ದೆನಷ್ಟೆ? ನನ್ನ ಕಿವಿಯ ಹತ್ತಿರಬಂದು ಪಿಸುಮಾತಿನಲ್ಲಿ ಒಂದೆರಡು ಕಟ್ಟಿರುವೆ, ಗೊದ್ದ, ಗೆದ್ದಲು, ಮಿಡತೆ, ಕುಂಬಾರ್ತಿ ಹುಳ ಇವುಗಳನ್ನು ನೈವೇದ್ಯಕ್ಕೆ ತೆಗೆದುಕೊಂಡು ಹೋಗುವಂತೆ ಹೇಳಿದ. ಏಕೆಂದರೆ ರಾವಣ ಮಾಂಸಾಹಾರಿಯಷ್ಟೆ! ಉಪಾಯವನ್ನು ಸೂಚಿಸಿದ ಓಬುವೇ ಹುಳುಗಳನ್ನೂ "ಸಪ್ಲೈ" ಮಾಡಿದ. ರಾವಣನಾಗಿದ್ದ ನಾನು ಹುಳುಗಳನ್ನು ಎಲೆಯಲ್ಲಿ ಮುಚ್ಚಿಕೊಂಡು ಹೋಗಿ ಭೀಮದೇವರ ಎದುರು ನಿಂತೆ. ಅದು ರಾವಣ ಮಾಡುವ ಪೂಜೆಯಾಗಿದ್ದರೂ ಹನುಮಂತನಾದ ಓಬು ಹತ್ತಿರದಲ್ಲಿಯೆ ನಿಂತಿದ್ದ.

ಅವನು ಭೀಮನಾಗಿದ್ದ ವಾಸುವಿಗೆ "ದೇವರು ಯಾವಾಗಲೂ ಕಣ್ಣು ಮುಚ್ಚಿಕೊಂಡೇ ಇರಬೇಕು" ಎಂದನು.

ವಾಸು ಕಣ್ಣು ಮುಚ್ಚಿಕೊಂಡ. ರಾವಣನ 'ಪೂಜೆ'ಗೆ ಪ್ರಾರಂಭವಾಯಿತು. ನೈವೇದ್ಯವನ್ನು ದೇವರ ಮುಂದಿಟ್ಟ. ದೇವರಿಗೆ ತಿನ್ನುವಂತೆಯೂ ಹೇಳಿದ. ವಾಸು ಕಣ್ಣು ಮುಚ್ಚಿಕೊಂಡೇ ಇದ್ದ. ನಮಗೆಲ್ಲ ಅಳ್ಳೆಬಿರಿಯುವ ನಗು. ಆದರೂ ಎರಡು ಕೈಗಳಿಂದಲೂ ಬಾಯಿ ಮುಚ್ಚಿ ಹಿಡಿದುಕೊಂಡಿದ್ದೆವು. ಭೀಮದೇವನು ನೈವೇದ್ಯಕ್ಕೆ ಕೈ ಹಾಕಿದನು. ಕಣ್ಣುಮುಚ್ಚಿಕೊಂಡಿದ್ದ ಅವನ ಚಿತ್ತಭಿತ್ತಿಯಲ್ಲಿ ತನ್ನ ಮುಂದೆ ಮಂಡಕ್ಕಿಯ ರಾಶಿಯೇ ತೋರಿರಬಹುದು! ಅವನ ಸಂತೋಷಕ್ಕೆ ಪಾರವೇ ಇಲ್ಲ!

ಓಬು ಇರುವೆಗಳನ್ನು ಸರಿಯಾಗಿ ಕೊಂದಿರಲಿಲ್ಲ. ಒಂದು ಮಿಡತೆಗೂ ಅರೆ ಜೀವವಿತ್ತು. ಭೀಮದೇವರಿಗೆ ತಕ್ಕ ನೈವೇದ್ಯ! ವಾಸು ಕೈಯಿಟ್ಟನೋ ಇಲ್ಲವೋ ನೋವು ಸಿಟ್ಟುಗಳಿಂದ ಒದ್ದಾಡುತ್ತಿದ್ದ ಕಟ್ಟಿರುವೆಯೊಂದು ಕಡಿಯಿತು! ಅನಾಹುತವೋ ಅನಾಹುತ! ವಾಸು ಎಲ್ಲಿಯಾದರೂ ನಿಜವಾದ ಭೀಮನೇ ಆಗಿದ್ದ ಪಕ್ಷದಲ್ಲಿ ನಮಗೆಲ್ಲ ಏನು ಪರಿಣಾಮವಾಗುತ್ತಿತೊ ದೇವರಿಗೆ ಗೊತ್ತು! ಸ್ವಲ್ಪ ಊಹಿಸಿದರೆ ರಾಮರಾವಣರ ಯುದ್ಧವೇ ನಡೆಯುತ್ತಿರಲಿಲ್ಲ ಎನ್ನಬಹುದು. ವಾಸು ಕಿಟ್ಟನೆ ಕಿರಿಚಿಕೊಂಡು, ಕೋವಿಯ ಮದ್ದಿಗೆ ಕಿಡಿ ಬಿದ್ದಂತೆ ಎದ್ದುನಿಂತ! ಓಬು ಬರಿಯ ಹೈಲು; ಯಾವಾಗ ಹೇಗೆ ನಡೆದುಕೊಳ್ಳಬೇಕೆಂದು ಅವನಿಗೆ ತಿಳಿಯದು. ವಾಸುವನ್ನು ಸಂಭೋದಿಸಿ "ಭೀಮದೇವರೇ, ಕಲ್ಲಾದ ದೇವರು ಅಲ್ಲಾಡಬಾರದು. ಕೂತುಕೊಳ್ಳಿ! ಕೂತುಕೊಳ್ಳಿ!" ಎಂದು ಕೂಗಿಕೊಂಡು ನಗಲಾರಂಭಿಸಿದನು. ಭೀಮ ಗೊಳೋ ಎಂದು ಅಳಲಾರಂಭಿಸಿದ. ದಾನಿ ಸೀತೆಯಾಗಿದ್ದವಳು ಸೀತೆತನವನ್ನು ಬಿಟ್ಟು ಓಡಿಬಂದು ಭೀಮನ ಬಾಯಿ ಮುಚ್ಚಿಹಿಡಿದು, ಅಳಬೇಡ ಎಂದು ಎಷ್ಟು ಹೇಳಿಕೊಂಡರೂ ಭೀಮ ಬೇರೆ ಕೇಳಲಿಲ್ಲ. ಭೀಮಗರ್ಜನೆ ಅಂತರಿಕ್ಷಕ್ಕೂ ಏರಿತು. ಇಂದ್ರನಿಗೆ

ಗಾಬರಿಯಾಗಿರಬಹುದು! ರಾಮನಾಗಿದ್ದ ಮಾನುವೂ ಓಡಿಬಂದು ಭೀಮನನ್ನು ಸಂತೈಸಿದ. ರಾಜಿ ಮಾನುವಿಗೆ “ನೀನೆಂಥ ರಾಮನೋ? ಕಟ್ಟಿರುವೆ ಕಡಿದದ್ದನ್ನೂ ಕೂಡ ಥಕ್ಕನೆ ಗುಣಮಾಡಲಾರೆ!” ಎಂದು ಹೇಳಿ “ವಾಸಣ್ಣಯ್ಯಾ, ಅಳಬೇಡ” ಎಂದು ಸಂತವಿಟ್ಟಳು. ಅವನೇನೋ ಬೊಬ್ಬೆ ಹಾಕಿದ! ಭೀಮನ ಕೂಗಿಗೆ ತಡೆಯುಂಟೆ? ಆಕಾಶಕ್ಕೆ ಮುಟ್ಟಿದ ಭೀಮನ ಕೂಗು ಅಡುಗೆಮನೆಗೆ ಮುಟ್ಟುವುದೊಂದು ದೊಡ್ಡ ಮಾತೇ? ಚಿಕ್ಕಮ್ಮ ಗಾಬರಿಯಿಂದ, ಕೈಲಿ ಹಿಡಿದು ಕೊಂಡಿದ್ದ ಒಗ್ಗರಣೆ ಸೌಟನ್ನು ಹಿಡಿದುಕೊಂಡೇ ಹೊರ ಅಂಗಳಕ್ಕೆ ಬಂದರು. ಬಿಸಿಬಿಸಿಯಾದ ಸಾರಿಗೆ ಅದ್ದಿದ್ದ ಸೌಟಿನಿಂದ ಇನ್ನೂ ಹಬೆಯಾಡುತ್ತಿತ್ತು. ಪಾಪ, ಅವರಿಗೆ ನಮ್ಮ ರಾಮಾಯಣದ ಪೂರ್ವೋತ್ತರವೇನು ಗೊತ್ತು? “ಕುಶಾಲು ಹೋಗಿ ಅಸಾಲಾಯಿತು!” ಆಟಕ್ಕೆ ಬದಲು ಆಟಮಟವಾಯಿತು! ರಾವಣನಾದ ನನ್ನನ್ನು ರಾಮ ಹೊಡೆಯುವ ಬದಲು ಚಿಕ್ಕಮ್ಮ ಗುದ್ದಿದರು. ಬಿಕ್ಕಿಬಿಕ್ಕಿ ಆಳುತ್ತಿದ್ದ ಅಭಿನವ ವಾಲ್ಮೀಕಿಯನ್ನು ಚಿಕ್ಕಮ್ಮ ಅಡುಗೆ ಮನೆಗೆ ಎಳೆದುಕೊಂಡು ಹೋದರು; ಅಲ್ಲಿ ಸರಿಯಾದ “ಭೀಮಪೂಜೆ” ಯಾಗಿರಬೇಕು!

ಭೀಮ ಹೋದರೆ ರಾಮಾಯಣ ನಿಲ್ಲುವುದೇ? ನಾವೇನೋ ರಾಮರಾವಣರ ಯುದ್ಧ ಮಾಡಿಯೇಬಿಡಬೇಕೆಂದು ಹಟಸಾಧಿಸಿದವು. ಆಟ ಪ್ರಾರಂಭವಾಯಿತು. ಎಲ್ಲಿ? ಲಂಕೆಯಲ್ಲಲ್ಲ! ಬಸಿರಿಮರದ ಬಲೆಬಲೆಯಾದ ತಣ್ಣೆಳಲಲ್ಲಿ! ಭೀಮಪೂಜೋಪಾಖ್ಯಾನ ಕೊನೆಗಂಡ ಮೇಲೆ ಸೇತು ಬಂಧನವಾಯಿತು. ಸೇತುಬಂಧನಕ್ಕೆ ರಾವಣ, ಕುಂಭಕರ್ಣ, ಲಂಕಿಣಿ ಎಲ್ಲರೂ ಸಹಾಯ ಮಾಡಿದರು! ಸಮಯಕ್ಕೆ ತಕ್ಕಹಾಗೆ ರಾಮ ಮೊದಲಾದವರು ಮಂಗಗಳಾದರು. ಹನುಮಂತನಾದ ಓಬು ಸಣ್ಣ ಸಣ್ಣ ಪುಡಿಗಲ್ಲುಗಳನ್ನು ತರುತ್ತಿದ್ದುದನ್ನು ಕಂಡು ನಾನು “ನೀನೆಂಥಾ ಹನುಮಂತನಪ್ಪ! ವಡೆಗಳಂಥ ಕಲ್ಲು ತರುತ್ತಿದ್ದೀಯಲ್ಲ!” ಎಂದೆ.

ಹನುಮಂತ ಕೈಲಾಸಪರ್ವತವನ್ನು ಎತ್ತಲು ಹೋಗಿ ಕೈ ಸಿಕ್ಕಿಸಿಕೊಂಡದ್ದನ್ನು (ನಮ್ಮ ರಾಮಾಯಣದ ಪ್ರಕಾರ) ಅಭಿನಯಿಸಲೇಬೇಕೆಂದು ತಿಮ್ಮು ಹಟ ಹಿಡಿದ. ಸದ್ಯಕ್ಕೆ ಅವನೇ ಶಿವನಾದ. ಲಂಕಿಣಿಯಾಗಿದ್ದ ರಾಜಿ ಪಾರ್ವತಿಯಾದಳು. ಶಿವ ಪಾರ್ವತಿ ಇಬ್ಬರೂ ಮನೆಕಟ್ಟುವುದಕ್ಕೆ ಹೊಸದಾಗಿ ತಂದು ಹಾಕಿದ್ದ ಕಲ್ಲುಚಪ್ಪಡಿಗಳ ಮೇಲೆ ಕುಳಿತರು. ಕಲ್ಲುಚಪ್ಪಡಿಯೆ ಕೈಲಾಸವಾಯಿತು. ಹನುಮಂತ ಕೈಲಾಸದ ಬಳಿಗೆ ಹೋಗಿ ಅದನ್ನು ಎತ್ತುವಂತೆ ನಟಿಸಿ ಸಂದಿಯೊಳಗೆ ಕೈಯಿಟ್ಟನು. ಶಿವ ಕೈಲಾಸವನ್ನು ಕಾಲು ಬೆರಳಿನಿಂದ ಒತ್ತಬೇಕಷ್ಟೆ! ಹಾಗೆಯೆ ತಿಮ್ಮು ಹಾಸರೆಯನ್ನು ಬಲವಾಗಿ ಒತ್ತಿ ಹಿಡಿದನು. ಓಬುವಿಗೆ ಅತಿ ನೋವಾಗಿ 'ರಾಮ ರಾಮ! ರಾಮ ರಾಮ!' ಎನ್ನುತ್ತಿದ್ದವನು ಇದ್ದಕ್ಕಿದ್ದ ಹಾಗೆ ಸ್ವರ ಬದಲಾಯಿಸಿ “ತಿಮ್ಮು! ತಿಮ್ಮು! ಕೈ! ಕೈ!!” ಎಂದು ಕೂಗಿಕೊಂಡನು. ಬೆರಳಿನ ಚರ್ಮ ಸುಲಿದುಹೋಯಿತು. ಆದರೂ ಶಿವ ಕೈಲಾಸವನ್ನು ಇನ್ನೂ ಬಲವಾಗಿ ಒತ್ತಿದನು. ಹನುಮನ ಕೂಗು ನಟನೆಯೆಂದೇ ಭಾವಿಸಿ ತಿಮ್ಮು ಇನ್ನೂ ಬಲವಾಗಿ ಅದುಮಿದನು. ಓಬು ಗೊಳೋ ಎಂದು ಅತ್ತನು. ಕಣ್ಣಿನಲ್ಲಿ ನೀರೂ ಜಲಜಲನೆ ಉಕ್ಕಿ ಹರಿಯಿತು. ಬಳಿಯಲ್ಲಿ ನಿಂತಿದ್ದ ನಾವೆಲ್ಲರೂ ಅವನ ಅಭಿನಯ ಕೌಶಲವನ್ನು ನೋಡಿ ಮೆಚ್ಚಿದೆವು. ಅಷ್ಟು ಸಹಜವಾಗಿ ಅಳಲು ಯಾವ ನಟಶ್ರೇಷ್ಠನಿಂದಾದರೂ ಸಾಧ್ಯವಾಗುವುದೇ?

ದೇವರ ಕೃಪೆಯಿಂದ ನಮ್ಮ ರಾಮಾಯಣದಲ್ಲಿ ಕೈಲಾಸದಡಿಯಲ್ಲಿ ಕೈ ಸಿಕ್ಕಿ ಕೂಗಿದವನು ಹನುಮಂತ; ರಾವಣನಲ್ಲ! ಎಲ್ಲಿಯಾದರೂ ರಾವಣನಾಗಿದ್ದ ಪಕ್ಷದಲ್ಲಿ ಈ ಕತೆ ಬರೆಯುವುದಕ್ಕೂ ನನಗೆ ಕೈ ಬೆರಳು ಇರುತ್ತಿರಲಿಲ್ಲ; ನನ್ನ ಅದೃಷ್ಟ ಚೆನ್ನಾಗಿತ್ತು.

ಓಬು ಕೂಗಿದ, ತಿಮ್ಮು ಅದುಮಿದ; ಹನುಮ ಅರಚಿದ, ಶಿವ ಒತ್ತಿದ. ನಿಂತ ನಾವೆಲ್ಲ ನಟನೆಗೆ ಬಹಳ ಹಿಗ್ಗಿದೆವು! ನಮ್ಮ ಪುಣ್ಯಕ್ಕೆ ಸರಿಯಾಗಿ, ರಾಮಾಯಣದಲ್ಲಿ ಗಲ್ಲಿಗೆ ಹಾಕುವ ಪದ್ಧತಿ ಇರಲಿಲ್ಲವೆಂದು ತೋರುತ್ತದೆ. ಅದು ಎಲ್ಲಿಯಾದರೂ ಇದ್ದಿದ್ದರೆ ನಮ್ಮಲ್ಲಿ ಯಾವನಾದರೂ ಒಬ್ಬನ ಗತಿ ಮುಗಿಯುತ್ತಿತ್ತು. ಯಾವನಾದರೂ ಏಕೆ? ನನ್ನ ಗತಿಯೇ ಪೂರೈಸುತ್ತಿತ್ತು. ಏಕೆನ್ನುವಿರೋ? ನಾನು ರಾವಣ. ಈಗಿನ ಕಾಲದಲ್ಲಿ ಸೋತ ರಾಜರನ್ನು ಗಲ್ಲಿಗೆ ಹಾಕುವುದೇ ಧರ್ಮವಷ್ಟೆ! ಹಾಗೆಯೇ ರಾವಣನನ್ನು ಗೆದ್ದ ರಾಮನು ಸುಮ್ಮನೆ ಇರುತ್ತಿದ್ದನೇ? ರಾವಣನನ್ನು ಗಲ್ಲಿಗೆ ಹಾಕಿಸಿಯೇ ಬಿಡುತ್ತಿದ್ದ. ಅಂದರೆ ನನ್ನ ವ್ಯಾಪಾರ ಮುಗಿಯುತ್ತಿತ್ತು!

ಓಬುವಿನ ಕೂಗು ಕೇಳಿ ಅಲ್ಲೆಲ್ಲಿಯೋ ಬಳಿಯಿದ್ದ ಕಕ್ಕಯ್ಯ ಓಡಿ ಬಂದರು. ಬಂದವರು ದೂರನಿಂತು “ಏನ್ರೋ ಅದು, ಗಲಾಟೆ? ಎಂದರು. “ತಿಮ್ಮು ಚಪ್ಪಡಿಕಲ್ಲನ್ನು ಬಲವಾಗಿ ಅದುಮುತ್ತ “ಏನೂ ಇಲ್ಲ, ಕಕ್ಕಯ್ಯ! ರಾಮಾಯಣ ಆಡ್ತೇವೆ! ಹನುಮಂತನ ಕೈ ಕೈಲಾಸದಡಿ ಸಿಕ್ಕಿಕೊಂಡಿದೆ: ಶಿವ ಅಮುಕುತ್ತ ಇದ್ದಾನೆ” ಎಂದನು. ಓಬು ಮಾತ್ರ “ಅಯ್ಯಯ್ಯೋ! ಅಣ್ಣಯ್ಯ ಸತ್ತೇ! ಸತ್ತೇ!” ಎಂದು ಕೂಗಿಕೊಂಡನು.

ಕಕ್ಕಯ್ಯ ಓಡಿಬಂದು ಕೈಲಾಸದ ಮೇಲೆ ಕುಳಿತು ದರ್ಬಾರು ಮಾಡುತ್ತಿದ್ದ ಶಿವ ಪಾರ್ವತಿಯರಿಬ್ಬರನ್ನೂ ಈಚೆಗೆ ಎಳೆದು ಹಾಕಿ, ಕೈಲಾಸವನ್ನು ಎತ್ತಿದರು: ಓಬು ಕೈ ಎಳೆದುಕೊಂಡ. ಚರ್ಮ ಸುಲಿದು ಕೈಬೆರಳೆಲ್ಲ ರಕ್ತಮಯವಾಗಿತ್ತು. ಕಕ್ಕಯ್ಯ ಎಲ್ಲರಿಗೂ ಹುಣಿಸೆಯ ಬರಲಿನಿಂದ ಎರಡೆರಡು 'ಚಡಿ ಕೊಟ್ಟು' ಹನುಮಂತನ ಕೈಗೆ ಔಷಧಿ ಮಾಡಲು ಅವನನ್ನು ಎಳೆದುಕೊಂಡು ಹೋದರು. ಚಳಿಗಾಲ! ಪ್ರಾತಃಕಾಲ! ಹುಣಿಸೆಯ ಬರಲಿನ ಪೆಟ್ಟು! ನೀವೇ ಊಹಿಸಿಕೊಳ್ಳಿ!

ರಾಮರಾವಣರ ಯುದ್ಧ ಇಷ್ಟಕ್ಕೇ ಪೂರೈಸಲಿಲ್ಲ. ನಾನು ಮಾನುವನ್ನು ಕುರಿತು "ನೀನೆಂಥ ರಾಮನೋ! ಕೈಲಾಗದ ರಾಮ! ನಿನ್ನ ಭಕ್ತ ಹನುಮಂತ ಒರಲಿದರೆ ನೀನು ಬಂದು ಬಿಡಿಸಬೇಕೋ ಬೇಡವೋ? ಕಲ್ಲು ನಿಂತಂತೆ ನಿಂತುಕೊಂಡು ನೋಡ್ತಾ ಇದ್ದೆ! ನಿನ್ನ ದೆಸೆಯಿಂದ ಭಾಗವತರಾಟ ಆಡದಿದ್ದ ಹಾಗೂ ಆಯಿತು!" ಎಂದೆ – ಪೆಟ್ಟು ಬಿದ್ದ ಸಿಟ್ಟಿನಿಂದ.

ಮಾನುಗೆ ಸಿಟ್ಟು ಬಂತು. ಮೈಮೇಲೆ ಬಿದ್ದ. ನನಗೂ ಅವನಿಗೂ ಹೊಡೆದಾಟವಾಯಿತು. ನ್ಯಾಯವಾಗಿ ಕತೆಯಂತೆ ನೋಡಿದರೆ ರಾವಣ ಸೋಲಬೇಕು. ವಾಸ್ತವವಾಗಿ ನಾನೇ ಬಲವಾಗಿದ್ದೆ; ರಾಮ ಬಿದ್ದ; ರಾವಣ ಗೆದ್ದ; ಕೆಳಗೆ ಬಿದ್ದ ಮಾನುವಿನ ಮೇಲೆ ನಾನು ಬಲವಾಗಿ ಜಗ್ಗಿಸಿ ಕೂತುಕೊಂಡೆ; ಅವನು ಅಳಅಳುತ್ತ "ಲೋ ಪುಟ್ಟು, ನಾನು ರಾಮ ಕಣೋ! ನೀನು ರಾವಣ ಕಣೋ! ಬಿಡೋ, ನನ್ನ ಮೇಲೆ ನೀನು ಕೂತುಕೊಳ್ಳಬಾರದು!" ಎಂದ.

ನಾನು ಇನ್ನೂ ಬಲವಾಗಿ ಜಗ್ಗಿಸಿ "ಹೋಗೋ ನಿನ್ನ ರಾಮಾಯಣಕ್ಕೆ ಬೆಂಕಿಹಾಕ! ನನ್ನ ರಾಮಾಯಣದಲ್ಲಿ ನಾನೇ ಗೆದ್ದಿದ್ದು" ಎಂದ.

ಕೆಳಗೆ ಬಿದ್ದ ರಾಮನನ್ನು ಬಿಡಿಸಿಕೊಳ್ಳಲು ಲಂಕಿಣಿ, ಸೀತೆ, ಲಕ್ಷ್ಮಣ, ಕುಂಭಕರ್ಣ, ವಿಭೀಷಣ ಎಲ್ಲರೂ ಬಂದರು. ಆದರೂ ನಾನು ಬೇರೆ ಜಗ್ಗಲಿಲ್ಲ. ಕಡೆಗೆ ಕುಂಭಕರ್ಣ ಓಡಿಹೋಗಿ ನಮ್ಮಾಳು ಲಿಂಗನನ್ನು ಕರೆತಂದ. ಅವನು ರಾವಣನನ್ನು ಹಿಡಿದೆಳೆದು ರಾಮನನ್ನು ಬಿಡಿಸಿದ. ಸದ್ಯಕ್ಕೆ ರಾವಣವಧೆಗೆ ಬದಲಾಗಿ ರಾಮವಧೆ ಆಗಲಿಲ್ಲ!

ಅಂದು ನಾವಾಡಿದ ಹೊಸ ರಾಮಾಯಣದ ಪ್ರಕಾರ, ರಾಮರಾವಣರ ಯುದ್ಧದಲ್ಲಿ ರಾಮನೇ ಸೋಲುತ್ತಾನೆ! ಭೀಮನು ಕಟ್ಟಿರುವೆ ಕೈಲಿ ಕಡಿಸಿಕೊಂಡು ಹೋಗುತ್ತಾನೆ. ಹನುಮಂತನು ಕೈಲಾಸದ ಕೆಳಗೆ ಕೈ ಚರ್ಮ ಸುಲಿಸಿಕೊಳ್ಳುತ್ತಾನೆ! ರಾಮ ಬಿದ್ದ! ರಾವಣ ಗೆದ್ದ! – ಇದೇ ನಮ್ಮ 'ರಾಮರಾವಣರ ಯುದ್ಧ!'

**ಲೇಖಕರ ಪರಿಚಯ:** ಕುವೆಂಪು ಕನ್ನಡದ ಶ್ರೇಷ್ಠ ಲೇಖಕರಾದ ಕುವೆಂಪುರವರು (ಡಿಸೆಂಬರ್ ೨೯, ೧೯೦೪ – ನವೆಂಬರ್ ೧೧, ೧೯೯೪) ವೆಂಕಪ್ಪಗೌಡ ಮತ್ತು ಸೀತಮ್ಮ ಇವರ ಮಗನಾಗಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹಿರೇಕೊಡಿಗೆ ಎನ್ನುವ ಊರಿನಲ್ಲಿ ಜನಿಸಿದರು. ಆರಂಭಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ ಪಡೆದು ಮುಂದೆ ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲು ಹಾಗೂ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದರು. ಕನ್ನಡ ಎಂ.ಎ ಪದವಿ ಪಡೆದ ನಂತರ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿ ಅನಂತರ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿದರು. ಹೊಸಗನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿರುವ ಇವರು ಕನ್ನಡ ಸಾಹಿತ್ಯ ಪರಂಪರೆಗೆ ಹೊಸ ಆಯಾಮ ನೀಡಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಇವರ ಪ್ರಮುಖ ಕೃತಿಗಳು: ಕೊಳಲು, ಪಾಂಚಜನ್ಯ, ಕೋಗಿಲೆ ಮತ್ತು ಸೋವಿಯತ್ ರಷ್ಯಾ, ಪ್ರೇಮಕಾಶ್ಮೀರ, ಜೇನಾಗುವಾ, ಷೋಡಶಿ, ಅನಿಕೇತನ, ಅನುತ್ತರಾ, ಮೊದಲಾದವು (ಕವನ ಸಂಕಲನ); ಶ್ರೀ ರಾಮಾಯಣ ದರ್ಶನಂ (ಮಹಾಕಾವ್ಯ); ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು (ಕಾದಂಬರಿ); ಜಲಗಾರ, ಶೂದ್ರತಪಸ್ವಿ, ಬೆರಳ್‌ಗೆಕೊರಳ್, ಮಹಾರಾತ್ರಿ, ಮೊದಲಾದವು (ನಾಟಕ), ನನ್ನ ದೇವರು ಮತ್ತು ಇತರ ಕಥೆಗಳು, ಸಂನ್ಯಾಸಿ ಮತ್ತು ಇತರ ಕಥೆಗಳು (ಕಥಾಸಂಕಲನ); ಮಲೆನಾಡಿನ ಚಿತ್ರಗಳು (ಗದ್ಯ ಚಿತ್ರಗಳ ಸಂಕಲನ) ಮತ್ತು ನೆನಪಿನ ದೋಣಿಯಲ್ಲಿ (ಆತ್ಮಕಥೆ), 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಪಂಪ ಪ್ರಶಸ್ತಿ ದೊರೆತಿದೆ. ಭಾರತ ಸರ್ಕಾರದ 'ಪದ್ಮವಿಭೂಷಣ' ಪ್ರಶಸಿ ಹಾಗೂ ಕರ್ನಾಟಕ ಸರ್ಕಾರದ 'ಕರ್ನಾಟಕ ರತ್ನ' ಪ್ರಶಸಿ ಹಾಗೂ ಹಲವು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್ ಕುವೆಂಪುರವರಿಗೆ ದೊರೆತಿವೆ. ರಸಋಷಿ ಕುವೆಂಪುರವರನ್ನು ದ.ರಾ. ಬೇಂದ್ರೇ "ಜಗದ ಕವಿ ಯುಗದ ಕವಿ" ಎಂದು ಕರೆದಿದ್ದಾರೆ.

**ಪ್ರಶ್ನೆಗಳು:**

೧. ಮಲೆನಾಡಿನ ನಿಸರ್ಗದ ಸೊಬಗು ಹೇಗೆ ಚಿತ್ರಿತವಾಗಿದೆ? ವಿವರಿಸಿ

೨. ಮಕ್ಕಳು ರಾಮಾಯಣದ ಪಾತ್ರಗಳನ್ನು ಹಂಚಿಕೊಂಡ ಬಗೆಯನ್ನು ನಿರೂಪಿಸಿ

೩. 'ಭೀಮ ಪೂಜೆ'ಯ ಸ್ವಾರಸ್ಯವನ್ನು ತಿಳಿಸಿ

೪. ಹನುಮಂತ ಕೈಲಾಸ ಪರ್ವತ ಎತ್ತುವ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿ

೫. ರಾಮರಾವಣರ ಯುದ್ಧ ನಡೆದ ಬಗೆಯನ್ನು ನಿರೂಪಿಸಿ.

೬. ಮಕ್ಕಳ ರಾಮಾಯಣ ವಾಲ್ಮೀಕಿ ರಾಮಾಯಣಕ್ಕಿಂತ ಹೇಗೆ ಭಿನ್ನವಾಗಿದೆ? ವಿವರಿಸಿ.

**ಮೂರನೇ ಸೆಮಿಸ್ಟರ್ ಬಿಎಸ್ಸಿ ಫ್ಯಾಡ್**
**ಕನ್ನಡ ಭಾಷೆ ಮಾದರಿ ಪ್ರಶ್ನೆ ಪತ್ರಿಕೆ**
**ಕನ್ನಡ ವೈವಿಧ್ಯ–೨**

**ಸಮಯ: 2.30 ನಿಮಿಷ** **ಗರಿಷ್ಠ ಅಂಕಗಳು: 60**

**I ಪದ್ಯದ ಭಾವಾರ್ಥ ಬರೆಯಿರಿ:** **(1X6=6)**

ಅಂಡಲೆವ ಮಶಾಯೆಯಂ ಬೆಂ
ಕೊಂಡನನಂತರ್ಮುಖ್ಯೈಕ ಪೂಜೆಯನೊಲವಿಂ।
ಕಂಡನನಿಳಿಯಳ್ಕುಂಬರ
ಗುಂಡನನುರೆ ಮರೆದ ನಮ್ಮ ಹಂಪೆಯ ರಾಯಂ ॥

**II ಯಾವುದಾರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ:** **(4X2=8)**

1) ಹರಿಹರ
2) ಅಂಬಿಕಾತನಯದತ್ತ
3) ವಾಗೀಶ
4) ವಚನಗಳು
5) ಹಸಿರುಕ್ರಾಂತಿ
6) ಮುದುಕರು

**III ಯಾವುದಾರೂ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ** **(4X4=16)**

7) ಮಂದಾಕಿನಿಗೆ ವಜ್ರಾಘಾತವಾದ ಸಂದರ್ಭ.
8) ನಯ್ಯರ್ ಅವರ ವ್ಯಕ್ತಿತ್ವ.
9) ಮೊದಲಗಿತ್ತಿ ಕವನದಲ್ಲಿ ಮೂಡಿ ಬಂದಿರುವ ಭೂಮಿಯ ಚಿತ್ರಣ.
10) ಕೃಷ್ಣರಾಯನಿಗಿದ್ದ ಹಂಬಲಗಳು.
11) 'ಊರೆಗೋಲು' ಕವನದ ಆಶಯ.
12) ಅಬ್ಬಾಸ್ ಹಾಜಿಯವರ ಪಾತ್ರ ಪರಿಚಯ.

**IV ಯಾವುದಾರೂ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ:** **(3X10=30)**

13) ಗುಂಡಯ್ಯನ ಭಕ್ತಿಯ ಸ್ವರೂಪ ಎಂತಹದು? ವಿವರಿಸಿ.
14) ಇಂದಿರಮ್ಮನ ಪಾತ್ರವನ್ನು ಪರಿಚಯಿಸಿ.
15) 'ಆಹಾರ ಆಯುಧ' ಎಂದರೇನು? ಇದನ್ನು ಹೇಗೆ ಬಳಸಲಾಗುತ್ತಿದೆ? ವಿವರಿಸಿ.
16) ಸಬರಮತಿಯ ಜೀವನ ಮತ್ತು ಸಾಧನೆಗಳನ್ನು ತಿಳಿಸಿ.
17) ರಾಮರಾವಣರ ಯುದ್ಧ ನಡೆದ ಬಗೆಯನ್ನು ನಿರೂಪಿಸಿ.